ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 13 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 58 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಗುಜರಾತ್‌ನ ಅಹಮದಾಬಾದ್‌ನಲ್ಲಿ ಲಂಡನ್‌ಗೆ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಏರ್ ಇಂಡಿಯಾ ವಿಮಾನ ಪತನ

241 ಮಂದಿ ಸಜೀವ ದಹನ

● ಸತ್ತವರಲ್ಲಿ ಗುಜರಾತ್ ಮಾಜಿ ಸಿಎಂ ವಿಜಯ್ ರೂಪಾನಿ ಒಬ್ಬರು ● ವಿಮಾನದಲ್ಲಿ 169 ಭಾರತೀಯರು, 53 ಬ್ರಿಟನ್ ಪ್ರಜೆಗಳು, 7 ಪೋರ್ಚುಗೀಸ್ ಪೌರರು, 1 ಕೆನಡಾ ಪ್ರಜೆ, 2 ಪೈಲಟ್‌ಗಳು; 10 ಮಂದಿ ಇತರೆ ಸಿಬ್ಬಂದಿ ಇದ್ದರು ● ಓರ್ವ ಬ್ರಿಟನ್ ಪ್ರಜೆ ಪವಾಡ ಸದೃಶ್ಯ ಪಾರು! ● ಬಿ.ಜೆ.ಮೆಡಿಕಲ್ ಕಾಲೇಜು ಹಾಸ್ಟೆಲ್‌ಗೆ ಈ ವಿಮಾನ ಅಪ್ಪಳಿಸಿ ಐವರು ವೈದ್ಯ ವಿದ್ಯಾರ್ಥಿಗಳೂ ದುರ್ಮರಣ ● ಟಾಟಾ ಗ್ರೂಪ್‌ನಿಂದ ಮೃತರ ಕುಟುಂಬಕ್ಕೆ ತಲಾ 1 ಕೋಟಿ ಪರಿಹಾರ ಘೋಷಣೆ; ಗಾಯಾಳುಗಳಿಗೆ ಚಿಕಿತ್ಸೆ, ಹಾಸ್ಟೆಲ್ ನಿರ್ಮಾಣಕ್ಕೂ ನೆರವಿನ ಭರವಸೆ



ದುರ್ದೈವಿ ವಿಮಾನದ ಅಂತಿಮ ಹಾರಾಟ, ಪತನದ ದೃಶ್ಯಾವಳಿಗಳು.

ಅಹಮದಾಬಾದ್, ಜೂ.12–ಗುಜರಾತ್‌ನ ಅಹಮದಾಬಾದ್‌ನ ಸರ್ದಾರ್ ವಲ್ಲಭ ಭಾಯ್ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ಪತನಗೊಂಡಿದೆ. ಇಬ್ಬರು ಪೈಲಟ್‌ಗಳು, 10 ಮಂದಿ ಸಿಬ್ಬಂದಿ, 229 ಪ್ರಯಾಣಿಕರು ಸೇರಿದಂತೆ ಒಟ್ಟು 241 ಮಂದಿ ಜೀವಂತ ಸುಟ್ಟು ಕರಕಲಾದ ಘೋರ ದುರಂತ ಗುರುವಾರ ಮಧ್ಯಾಹ್ನ ಏರ್‌ಪೋರ್ಟ್ ಬಳಿಯೇ ಸಂಭವಿಸಿದ್ದು, ಈ ದುರಂತದಲ್ಲಿ ಪ್ರಯಾಣಿಕರು ಮಾತ್ರವಲ್ಲದೆ, ವಿಮಾನ ವೈದ್ಯಕೀಯ ಕಾಲೇಜು ಹಾಸ್ಟೆಲ್ ಕಟ್ಟಡಕ್ಕೆ ಅಪ್ಪಳಿಸಿ, ಐವರು ವೈದ್ಯ ವಿದ್ಯಾರ್ಥಿಗಳು ದುರ್ಮರಣಕ್ಕೀಡಾಗಿದ್ದಾರೆ.

ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಕೂಡ ಈ ದುರಂತದಲ್ಲಿ ಸಾವನ್ನಪ್ಪಿದ್ದು, ಪವಾಡ ಸದೃಶ್ಯ ಎಂಬಂತೆ ದುರಂತಕ್ಕೆ ಕೆಲವೇ ಸೆಕೆಂಡ್‌ಗಳ ಮುನ್ನ ಅಪಾಯವನ್ನು ಅರಿತ ವಿಮಾನದ 11–A ಸೀಟ್‌ನಲ್ಲಿ ಕುಳಿತ್ತಿದ್ದ 38 ವರ್ಷದ ರಮೇಶ್ ವಿಶ್ವಾಸ್ ಕುಮಾರ್ ಎಂಬ ಪ್ರಯಾಣಿಕ ಎಮರ್ಜೆನ್ಸಿ ಡೋರ್ ಮೂಲಕ ಹೊರಗೆ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ.

ವಿವರ: ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುವ ಬೋಯಿಂಗ್ 787–8 ವಿಮಾನವು ಇಂದು ಮಧ್ಯಾಹ್ನ 8 ನಿಮಿಷ ವಿಳಂಬವಾಗಿ 1.38ಕ್ಕೆ ಟೇಕಾಫ್ ಆಗಿದೆ. ಇದಾದ 9 ನಿಮಿಷದಲ್ಲಿ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ▶ 6ನೇ ಪುಟಕ್ಕೆ

ಪದಗಳಿಗೂ ಮೀರಿದ ಹೃದಯವಿದ್ರಾವಕ ದುರಂತ



“ಅಹಮದಾಬಾದ್‌ನಲ್ಲಿ ಸಂಭವಿಸಿದ ವಿಮಾನ ದುರಂತ ನಮ್ಮನ್ನು ದಿಗ್ಭ್ರಮೆಗೊಳಿಸಿದೆ. ಇದು ಪದಗಳಿಗೆ ಮೀರಿದ ಹೃದಯ ವಿದ್ರಾವಕ ಘಟನೆ. ಸಂತ್ರಸ್ತರಿಗೆ ಅಗತ್ಯ ನೆರವು ಒದಗಿಸುವ ಬಗ್ಗೆ ಸಚಿವರು, ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೆ’.

–ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಗುಜರಾತ್ ಮಾಜಿ ಸಿಎಂ ವಿಜಯ್ ರೂಪಾನಿ ಸಾವು



ಅಹ್ಮದಾಬಾದ್, ಜೂ.12– ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನ AI 171ನಲ್ಲಿ ಪ್ರಯಾಣಿಸುತ್ತಿದ್ದ ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ದೇಹ ಸಹ ಸುಟ್ಟು ಕರಕಲಾಗಿದೆ. ವಿಜಯ್ ರುಪಾನಿ ಅಪಘಾತಕ್ಕೀಡಾದ ಏರ್ ಇಂಡಿಯಾ ವಿಮಾನ AI 171ನಲ್ಲಿ 12ನೇ ಪ್ರಯಾಣಿಕರಾಗಿ ಟಿಕೆಟ್ ಕಾಯ್ದಿರಿಸಿದ್ದರು. ವಿಮಾನ ಪ್ರಯಾಣಿಕರ ವಿವರದಲ್ಲಿ ವಿಜಯ್ ರುಪಾನಿ ಈ ವಿಮಾನ ಹತ್ತಿದ್ದರು. ಬೋಯಿಂಗ್ 787 ಡ್ರೀಮ್‌ಲೈನರ್ ನಿರ್ವಹಿಸುತ್ತಿದ್ದ ವಿಮಾನ ಜೂನ್ 12, 2025ರಂದು ಮಧ್ಯಾಹ್ನ 1.38ಕ್ಕೆ ಅಹಮದಾಬಾದ್‌ನಿಂದ ಹೊರಟ ಸ್ವಲ್ಪ ಸಮಯದ ನಂತರ ಮೇಘಾನಿ ನಗರದ ವಸತಿ ಪ್ರದೇಶಕ್ಕೆ ಅಪ್ಪಳಿಸಿತು. ನಿರ್ಗಮನದ ಸುಮಾರು ಐದು ನಿಮಿಷಗಳ ನಂತರ ಈ ಅಪಘಾತ ಸಂಭವಿಸಿದೆ. ವಿಮಾನ ಕ್ಯಾಪ್ಟನ್ ಸುಮಿತ್ ಸಭರ್ವಾಲ್ ನೇತೃತ್ವದ ಸಿಬ್ಬಂದಿಯಿಂದ ಚಾಲನೆಗೊಂಡಿತ್ತು. ▶ 6ನೇ ಪುಟಕ್ಕೆ

ಬ್ರಿಟನ್ ಪ್ರಜೆ ರಮೇಶ್ ವಿಶ್ವಾಸ್ ಪಾರು



ಅಹಮದಾಬಾದ್: ಬ್ರಿಟನ್ ಪ್ರಜೆ ರಮೇಶ್ ವಿಶ್ವಾಸ್‌ಕುಮಾರ್, ವಿಮಾನ ದುರಂತದಲ್ಲಿ ಪವಾಡ ಸದೃಶ ಬದುಕುಳಿದಿದ್ದಾರೆ. ಅಹಮದಾಬಾದ್‌ನ ಅಸಾವರದಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವು ದಿನಗಳ ಹಿಂದೆ ವಿಶ್ವಾಸ್ ಭಾರತಕ್ಕೆ ಪ್ರವಾಸಕ್ಕೆಂದು ಬಂದಿದ್ದರು. ಸಹೋದರನ ಜತೆ ದಿಯು ದ್ವೀಪಕ್ಕೆ ಪ್ರವಾಸಕ್ಕೆ ಹೋಗಿಬಂದ ನಂತರ ಲಂಡನ್‌ಗೆ ಮರಳುತ್ತಿದ್ದುದಾಗಿ ತಿಳಿಸಿದ್ದಾರೆ. ವಿಶ್ವಾಸ್ ಅವರ ಜತೆ ಅವರ ಸಹೋದರ ಅಜಯ್‌ಕುಮಾರ್ ರಮೇಶ್ (45) ಕೂಡ ಲಂಡನ್‌ಗೆ ಪ್ರಯಾಣಿಸುತ್ತಿದ್ದರು. ▶ 6ನೇ ಪುಟಕ್ಕೆ

ಪೈಲಟ್ ‘ಮೇಡೇ ಮೇಡೇ’ ಎನ್ನುತ್ತಿದ್ದಂತೆ ಪತನಗೊಂಡ ವಿಮಾನ!

ನವದೆಹಲಿ: ಲಂಡನ್‌ಗೆ 242 ಜನರನ್ನು ಹೊತ್ತೊಯ್ಯುತ್ತಿದ್ದ ಏರ್ ಇಂಡಿಯಾ ಬೋಯಿಂಗ್ 787–8 (ಫ್ಲೈಟ್ AI-171) ವಿಮಾನ ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಕೇವಲ 5 ನಿಮಿಷದಲ್ಲೇ ಪತನಗೊಂಡಿದೆ. ಪತನಕ್ಕೂ ಮುನ್ನ ವಿಮಾನದ ಪೈಲಟ್ ‘ಮೇಡೇ’ ಸಂದೇಶವನ್ನು ರವಾನಿಸಿದ್ದರು. ಅದಾಗಿ ಸ್ವಲ್ಪ ಹೊತ್ತಿನಲ್ಲೇ ಮೌನವಾದರು. ಬೆನ್ನಿಗೆ ಕಪ್ಪು ಹೊಗೆ ಮತ್ತು ಬೆಂಕಿಯೊಂದಿಗೆ ಮೇಘಾನಿ ನಗರ ಬಳಿಯ ಕಟ್ಟಡಕ್ಕೆ ವಿಮಾನ ಅಪ್ಪಳಿಸಿತು. ಏರ್ ಇಂಡಿಯಾ AI-171 ಅಪಘಾತಕ್ಕೂ ಮುನ್ನ ▶ 6ನೇ ಪುಟಕ್ಕೆ

‘ಮೇಡೇ’ ಪದದ ಮೂಲ ಫ್ರೆಂಚ್. ಇದನ್ನು 1920ರ ದಶಕದ ಆರಂಭದಲ್ಲಿ ಬಳಕೆಗೆ ತರಲಾಗಿತ್ತು. ಇದನ್ನು ಈ ರೀತಿ ಬಳಕೆಗೆ ತಂದವರು ಲಂಡನ್‌ನ ಕ್ರಾಯ್ಡನ್ ವಿಮಾನ ನಿಲ್ದಾಣದಲ್ಲಿ ರೇಡಿಯೋ ಅಧಿಕಾರಿಯಾಗಿದ್ದ ಫ್ರೆಡೆರಿಕ್ ಸ್ಟಾನ್ಲಿ ಮಾಕ್‌ಫೋರ್ಡ್. ಮೇಡೇ ಎಂಬ ಪದವು ಫ್ರೆಂಚ್ ಪದಗುಚ್ಛವಾದ ಮೈಡರ್ (ನನಗೆ ಸಹಾಯ ಮಾಡಿ)ನಿಂದ ಬಂದಿದೆ. ‘ತುರ್ತಾಗಿ ನನಗೆ ಸಹಾಯ ಮಾಡಿ’ ಎಂಬುದನ್ನು ಸುಲಭವಾಗಿ ತಿಳಿಸಲು ಮೇಡೇ ಪದವನ್ನು ಫ್ರೆಡೆರಿಕ್ ಸ್ಟಾನ್ಲಿ ಮಾಕ್‌ಫೋರ್ಡ್ ಆಯ್ಕೆ ಮಾಡಿದ್ದರು. ಕ್ರಾಸ್–ಚಾನೆಲ್ ಟ್ರಾಫಿಕ್‌ನಲ್ಲಿ ಈ ಪದದಿಂದ ಸುಲಭವಾಗಿ ಸಂದೇಶ ರವಾನೆ, ಸರಳವಾಗಿ ಅರ್ಥ ಮಾಡಿಸುವುದು ಸಾಧ್ಯವಾಯಿತು. ಮುಂದೆ ಈ ಮೇಡೇ ಸಂದೇಶ 1923ರ ಹೊತ್ತಿಗೆ ಪೈಲಟ್‌ಗಳು ಮತ್ತು ನಾವಿಕರಿಗೆ ಅಂತಾರಾಷ್ಟ್ರೀಯ ರೇಡಿಯೋ ಸಂವಹನದ ಭಾಗವಾಯಿತು. 1927ರಲ್ಲಿ ಮೋರ್ಸ್ ‘ಎಸ್‌ಒಎಸ್’ ಜೊತೆಗೂ ಇದನ್ನು ಅಳವಡಿಸಿಕೊಳ್ಳಲಾಯಿತು.



ರಕ್ಷಣಾ ಕಾರ್ಯಾಚರಣೆ.



ಪತನಗೊಂಡ ವಿಮಾನದ ಅವಶೇಷಗಳು.

ಮತ್ತೊಮ್ಮೆ ಜಾತಿ ಗಣತಿ

■ ಸಂಪುಟ ಸಭೆ ಮಹತ್ವದ ನಿರ್ಣಯ ■ ಕಾಂತರಾಜ್ ಆಯೋಗ ವರದಿ ಸಲ್ಲಿಸಿ 10 ವರ್ಷ ಕಳೆದ ಕಾರಣ ಕಾಯ್ದೆಯನ್ವಯ ಹೊಸ ಗಣತಿ ■ ಮಾಜಿ ಅಡ್ವೋಕೇಟ್ ಜನರಲ್ ಮಧುಸೂದನ್ ನಾಯಕ್ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ನೇಮಕ; ಎರಡ್ಮೂರು ದಿನದಲ್ಲಿ ಸದಸ್ಯರ ನಿಯೋಜನೆ ■ 90 ದಿನದಲ್ಲಿ ವರದಿ ಸಲ್ಲಿಕೆಗೆ ಸೂಚನೆ ■ ಸಂಪುಟ ಸಭೆ ಬಳಿಕ ಸಿಎಂ ಸಿದ್ದರಾಮಯ್ಯ ಮಾಹಿತಿ



ಬೆಂಗಳೂರು,ಜೂ.12(ಕೆಎಂಶಿ)–ರಾಜ್ಯದಲ್ಲಿ ಮತ್ತೊಮ್ಮೆ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ (ಜನಗಣತಿ) ಸಮೀಕ್ಷೆ ನಡೆಸುವ ಮಹತ್ವದ ನಿರ್ಧಾರವನ್ನು ಇಂದಿಲ್ಲಿ ಸೇರಿದ್ದ ಸಚಿವ ಸಂಪುಟ ಸಭೆ ಕೈಗೊಂಡಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಿಎಂ ಸಿದ್ದರಾಮಯ್ಯ, ಶಾಶ್ವತ ಹಿಂದುಳಿದ ವರ್ಗಗಳ ಕಾಂತರಾಜ್ ಆಯೋಗ ವರದಿ ಸಲ್ಲಿಸಿ 10 ವರ್ಷ ಕಳೆದಿರುವುದರಿಂದ ಹಿಂದುಳಿದ ವರ್ಗಗಳ ಕಾಯಿದೆ ಸೆಕ್ಷನ್ 11ರ ಪ್ರಕಾರ 10 ವರ್ಷದ ಬಳಿಕ ಹೊಸ ಸಮೀಕ್ಷೆ ನಡೆಸಬೇಕೆಂಬುದಾಗಿ ತಿಳಿಸಲಾಗಿದೆ ಎಂದರು.

ಕಾಂಗ್ರೆಸ್ ವರಿಷ್ಠರ ಒತ್ತಡಕ್ಕೆ ಮಣಿದು ಹೊಸ ಸಮೀಕ್ಷೆ ನಡೆಸುತ್ತಿದ್ದೇವೆ ಎಂಬುದನ್ನು ತಳ್ಳಿ ಹಾಕಿದ ಮುಖ್ಯಮಂತ್ರಿ, ಹಿಂದುಳಿದ ವರ್ಗಗಳ ಆಯೋಗದ ಕಾನೂನಿನ ಪ್ರಕಾರ ಈ ನಿರ್ಧಾರ ಕೈಗೊಂಡಿದ್ದೇವೆ. ಮಾಜಿ ಅಡ್ವೋಕೇಟ್ ಜನರಲ್ ▶ 6ನೇ ಪುಟಕ್ಕೆ

“ನಮಗೆ ರಾಜಕೀಯ ಬಣ್ಣ ಬೇಡ, ಸಾಮಾಜಿಕ ನ್ಯಾಯ ಬೇಕು, ಅದಕ್ಕಾಗಿ ಮತ್ತೊಮ್ಮೆ ಜಾತಿ ಜನಗಣತಿ ಮಾಡಲು ತೀರ್ಮಾನಿಸಿದ್ದೇವೆ. ಹೈಕಮಾಂಡ್ ನಮಗೆ ಮಾರ್ಗದರ್ಶನ ಮಾತ್ರ ನೀಡಿದೆ. ಸಮೀಕ್ಷೆ ನಡೆಸಿ 10 ವರ್ಷಗಳಾಗಿರುವ ಕಾರಣಕ್ಕೆ ಸಮಾಜದ ಎಲ್ಲರನ್ನು ಒಳಗೊಳ್ಳಬೇಕು ಎಂಬುದು ಕಾಂಗ್ರೆಸ್ ಪಕ್ಷದ ಮೂಲ ಆಶಯ. ಯಾರು ಏನು ಬೇಕಾದರೂ ಹೇಳಲಿ, ಜನರು, ಶಾಸಕರುಗಳ ಭಾವನೆ, ಅಭಿಪ್ರಾಯ ಅರಿತು ಕಾನೂನಾತ್ಮಕವಾಗಿ ಜಾತಿ ಗಣತಿ ಮರುಸಮೀಕ್ಷೆಗೆ ಒಪ್ಪಿಗೆ ಕೊಟ್ಟಿದ್ದೇವೆ. ಸಮಾಜದ ಎಲ್ಲರನ್ನು ಒಳಗೊಂಡ ಮರುಸಮೀಕ್ಷೆ ಇದಾಗಲಿದೆ. ಹೊರನಾಡು ಕನ್ನಡಿಗರಿಗೆ ಆನ್‌ಲೈನ್ ಮೂಲಕ ಸಮೀಕ್ಷೆಯಲ್ಲಿ ಭಾಗವಹಿಸಲು ವ್ಯವಸ್ಥೆ ಕಲ್ಪಿಸಲಾಗುವುದು. ಹಿಂದಿನ ಸಮೀಕ್ಷೆ ವರದಿ ಬಗ್ಗೆ ಟೀಕೆ ಮಾಡಿದ್ದ ವಿರೋಧ ಪಕ್ಷದವರು ಈಗ ಉಲ್ಟಾ ಮಾತನಾಡುತ್ತಿದ್ದು, ಅದರ ಬದಲಿಗೆ ಹಳೆ ವರದಿಯನ್ನೇ ಒಪ್ಪಿಕೊಳ್ಳುವಂತೆ ಆಗ್ರಹಿಸಲಿ. –ಡಿ.ಕೆ.ಶಿವಕುಮಾರ್, ಡಿಸಿಎಂ.

‘ನವ ಮೈಸೂರು’ ನಿರ್ಮಾಣ



ಬೆಂಗಳೂರು, ಜೂ.12(ಕೆಎಂಶಿ)–ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಸಾಂಸ್ಕೃತಿಕ ನಗರ ಮೈಸೂರನ್ನು ಸುಸಜ್ಜಿತವಾಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮಹತ್ವಾಕಾಂಕ್ಷೆಯ ‘ನವ ಮೈಸೂರು’ ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಗಂಭೀರ ಚಿಂತನೆ ನಡೆಸಿದೆ.

ಬೆಂಗಳೂರಿನಲ್ಲಿ ಈ ಸಂಬಂಧ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ಅವರು ಗುರುವಾರ ಉನ್ನತ ಮಟ್ಟದ ಸಭೆ ನಡೆಸಿ, ಯೋಜನೆ ಬಗ್ಗೆ ಚರ್ಚೆ ನಡೆಸಿದರು.

ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ತಂದು ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಸಭೆಯ ಬಗ್ಗೆ ಮಾಹಿತಿ ನೀಡಿದ ಸಚಿವ ಬಿ.ಎಸ್.ಸುರೇಶ, ಬೆಂಗಳೂರಿನಂತೆಯೇ ಮೈಸೂರು ಸಹ ವೇಗವಾಗಿ ಬೆಳೆಯುತ್ತಿರುವ ನಗರವಾಗಿದೆ ಎಂದು ಹೇಳಿದರು. (ಪೂರ್ಣ ವರದಿ ಪುಟ–5)

ಕಾಲ್ತುಳಿತ ದುರಂತ ಪ್ರಕರಣ ಬಂಧಿತರಿಗೆ ಜಾಮೀನು

ಬೆಂಗಳೂರು: ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಜೂ.4ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನರು ಸಾವಿಗೀಡಾದ ಘಟನೆಗೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿದ್ದ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಸೇರಿದಂತೆ ನಾಲ್ವರ ಬಿಡುಗಡೆ ಮಾಡುವಂತೆ ಕರ್ನಾಟಕ ಹೈಕೋರ್ಟ್ ಗುರುವಾರ ಆದೇಶಿಸಿದೆ.

ಪಾಸ್‌ಪೋರ್ಟ್ ಒಪ್ಪಿಸಲು ಕೋರ್ಟ್ ಸೂಚನೆ

ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ತಮ್ಮನ್ನು ಬಿಡುಗಡೆ ಮಾಡುವಂತೆ ಕೋರಿ ಆರ್‌ಸಿಬಿ ಮತ್ತು ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿ. ಕಂಪನಿಯ ಪದಾಧಿಕಾರಿಗಳು ಹೈಕೋರ್ಟ್‌ಗೆ ▶ 6ನೇ ಪುಟಕ್ಕೆ

ನಿಷೇಧಿತ ಪ್ಲಾಸ್ಟಿಕ್ ವಿರುದ್ಧ ಪಾಲಿಕೆ ಸಮರ

ನೂರಾರು ಕೆಜಿ ಪ್ಲಾಸ್ಟಿಕ್ ಜಪ್ತಿ; 10 ಸಾವಿರ ರೂ. ದಂಡ



ಮೈಸೂರಿನ ಹಲವೆಡೆ ನಿಷೇಧಿತ ಪ್ಲಾಸ್ಟಿಕ್ ವಶಕ್ಕೆ ಪಡೆದ ಪಾಲಿಕೆ ಅಧಿಕಾರಿಗಳು.

ಮೈಸೂರು, ಜೂ.12(ಆರ್‌ಕೆ)– ಮೈಸೂರಿನ ಸಂತೆಪೇಟೆ ಹಾಗೂ ಶಿವರಾಂ ಪೇಟೆಯ ಕೆಲವು ಅಂಗಡಿಗಳ ಮೇಲೆ ದಾಳಿ ಮುಂದುವರೆಸಿರುವ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಅಪಾರ ಪ್ರಮಾಣದ ನಿಷೇಧಿತ ಪ್ಲಾಸ್ಟಿಕ್ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಪಾಲಿಕೆ ವಲಯಾಧಿಕಾರಿ ಪ್ರತಿಭಾ, ಪರಿಸರ ಇಂಜಿನಿಯರ್ ಮೈತ್ರಿ ಅವರು ಅಭಯ ತಂಡದೊಂದಿಗೆ ಇಂದು ಬೆಳಗ್ಗೆ ದಾಳಿ ನಡೆಸಿ ಅನ್‌ಲೋಡ್ ಮಾಡುವ ಮುಂಚೆಯೇ ಸಂತೆಪೇಟೆಯ ಶ್ರೀ ಮಹದೇಶ್ವರ ಎಂಟರ್‌ಪ್ರೈಸಸ್ ಅಂಗಡಿ ಮುಂದೆ ನಿಂತಿದ್ದ ಲಾರಿಯಲ್ಲಿದ್ದ 190 ಕೆಜಿ ಪ್ಲಾಸ್ಟಿಕ್ ಪದಾರ್ಥ ವಶಪಡಿಸಿಕೊಂಡು 10,000 ರೂ ದಂಡ ವಿಧಿಸಿದ್ದಾರೆ.

ನಿನ್ನೆ(ಜೂ.11) ಬೆಳಗ್ಗೆ ಶಿವರಾಂ ಪೇಟೆ ಅಂಗಡಿಯೊಂದರ ಮೇಲೆ ದಾಳಿ ಮಾಡಿದ ಅವರು ಅಲ್ಲಿದ್ದ 177 ಕೆಜಿ ನಿಷೇಧಿತ ಪ್ಲಾಸ್ಟಿಕ್ ಅನ್ನು ವಶಪಡಿಸಿಕೊಂಡು 25,000 ರೂ ದಂಡ ವಸೂಲು ಮಾಡಿದ್ದಾರೆ. ಪ್ಲಾಸ್ಟಿಕ್ ಮಾರಾಟ ಮತ್ತು ದಾಸ್ತಾನು ಮಾಡುವವರ ವಿರುದ್ಧ ನಿರಂತರ ದಾಳಿ ಮಾಡಿ ಪರಿಶೀಲಿಸುವ ಕಾರ್ಯ ಮುಂದುವರೆಯಲಿದೆ ಎಂದು ಪರಿಸರ ಇಂಜಿನಿಯರ್ ಮೈತ್ರಿ ತಿಳಿಸಿದ್ದಾರೆ.

ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ



ಮೈಸೂರಿನ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಸೌರಮಾನ (ವೃಷಭ ಶುಕ್ಲ ಚತುರ್ದಶಿ) ನರಸಿಂಹ ಜಯಂತಿ ಅಂಗವಾಗಿ ದೇವಾಲಯದ ಸಂಸ್ಥಾಪಕರಾದ ಪ್ರೊ.ಡಾ.ಭಾಷ್ಯಂ ಸ್ವಾಮೀಜಿ ಅವರ ನೇತೃತ್ವದಲ್ಲಿ ಶ್ರೀ ಸ್ವಾಮಿಗೆ ವಿಶೇಷ ಪೂಜಾ-ಕೈಂಕರ್ಯ ಜರುಗಿತು. ಬಳಿಕ ಸಮಸ್ತ ಭಕ್ತರಿಗೂ ಪ್ರಸಾದ ವಿತರಣೆ ಮಾಡಲಾಯಿತು. ಈ ವೇಳೆ ದೇವಾಲಯದ ಆಢಳಿತಾಧಿಕಾರಿ ಎನ್.ಶ್ರೀನಿವಾಸನ್ ಉಪಸ್ಥಿತರಿದ್ದರು.

ಜೂ.19ರಿಂದ ಯೋಗ ಪ್ರಾಣೋತ್ಸವ, ಯೋಗ ಪ್ರಾಣಾಯಾಮ ವಿಚಾರ ಸಂಕಿರಣ

ಮೈಸೂರು, ಜೂ.12(ಜಿಎ)–ಮೈಸೂರಿನ ಸೈಂಟಿಫಿಕ್ ಪ್ರಾಣಾಯಾಮ ಫೌಂಡೇಶನ್ ಟ್ರಸ್ಟಿ ವತಿಯಿಂದ ಮೇಟಗಳ್ಳಿಯಲ್ಲಿರುವ ಜಿಎಸ್‌ಎಸ್‌ಎಸ್ ಮಹಿಳಾ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಜೂ.19, 20ರಂದು ಯೋಗ ಪ್ರಾಣೋತ್ಸವ ಹಾಗೂ ರಾಜ್ಯ ಮಟ್ಟದ ಯೋಗ ಪ್ರಾಣಾಯಾಮ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕಿ ದೇವಕಿ ಮಾಧವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.19ರಂದು ಬೆಳಿಗ್ಗೆ 9.30ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ಬೆಂಗಳೂರಿನ ನ್ಯೂರೊ ಸರ್ಜನ್ ಡಾ.ರಾಜಶೇಖರ್ ರೆಡ್ಡಿ ಅಧ್ಯಕ್ಷತೆ ವಹಿಸುವರು. ಏರ್‌ಫೋರ್ಸ್‌ನ ನಿವೃತ್ತ ಪೈಲೆಟ್ ಪರಿಧೀಯಿ ಸಿಂಗ್ ಕಾರ್ತಿಕ್, ಭಾರತೀಯ ಯೋಗ ಅಸೋಸಿಯೇಶನ್ ಕಾರ್ಯದರ್ಶಿ ಎ.ಸುಬ್ರಹ್ಮಣಿಯನ್, ಜಿಎಸ್‌ಎಸ್‌ಎಸ್ ಪ್ರಾಂಶುಪಾಲ ಶಿವಕುಮಾರ್ ಭಾಗವಹಿಸಲಿದ್ದಾರೆ ಎಂದರು.

ಜೂ.20ರಂದು ಬೆಳಗ್ಗೆ 9.30ಕ್ಕೆ ಸಮಾರೋಪ ನಡೆಯಲಿದ್ದು, ರಾಮಕೃಷ್ಣ ಸಂಸ್ಥೆಯ ಸ್ವಾಮಿ ಮಹಾಮೇಧಾನಂದಜಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮಾನವ ಕಲ್ಯಾಣಕ್ಕಾಗಿ ಯೋಗ ಎಂಬುದು ಇಲ್ಲಿನ ಪ್ರಮುಖ ವಿಷಯವಾಗಿದೆ. ಅಂದಾಜು 40 ಮಂದಿ ಪರಿಣಿತರು ವಿಷಯ ಮಂಡನೆ ಮಾಡಲಿದ್ದಾರೆ. ಆಸಕ್ತ ಎಲ್ಲರೂ ಪಾಲ್ಗೊಳ್ಳಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಕಾರ್ಯದರ್ಶಿ ಸೀತಾ ರಮೇಶ್, ಸದಸ್ಯ ಮಾಧವ ಸದಾಶಿವ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.12(ಎಂಕೆ)– ಆದರ್ಶ ಸೇವಾ ಸಂಘದ ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ಹಿಂದೂ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಸಂಘ ವೆಬ್‌ಸೈಟ್ adarshasevasangha@gmail.com OR adarshasevasangha.org ಮೂಲಕ ಪ್ರಾಥಮಿಕ ಮಾಹಿತಿ ನೀಡಿ, ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಸೂಕ್ತ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಜೂ.20ರ ಸಂಜೆ 4 ಗಂಟೆಯೊಳಗೆ ಸಂಘದ ಕಚೇರಿಗೆ ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9480166274/7411193216/9738571203 ಮೂಲಕ ಸಂಪರ್ಕಿಸುವಂತೆ ಕೋರಲಾಗಿದೆ.

ಜೂ.15ರಂದು ಉಚಿತ ವೈದ್ಯಕೀಯ ತಪಾಸಣೆ

ಮೈಸೂರು, ಜೂ.12(ಜಿಎ)–ಮೈಸೂರಿನ ಬೃಂದಾವನ ಚಿತ್ರಾಸ್ ಆಸ್ಪತ್ರೆ, ಜೆ.ಪಿ. ನಗರದ ರೋಟರಿ ಕ್ಲಬ್ ಹಾಗೂ ಸ್ನೇಹ ನಿಧಿ ಪತ್ತಿನ ಸಹಕಾರ ಸಂಘದಿಂದ ವಿದ್ಯಾರಣ್ಯಪುರಂ ನಳಂದ ಪ್ರೌಢಶಾಲೆಯಲ್ಲಿ ಜೂ.15ರಂದು ಬೆಳಿಗ್ಗೆ 8.30ರಿಂದ ಮಧ್ಯಾಹ್ನ 12.30ರವರೆಗೆ ಉಚಿತ ವೈದ್ಯಕೀಯ ತಪಾಸಣೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಚಲುವಯ್ಯ ಈ ವಿಷಯ ತಿಳಿಸಿ, ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ, ಮೂಳೆ ಸಾಂದ್ರತೆ ಪರೀಕ್ಷೆ, ವಿಟಮಿನ್ ಡಿ ಪರೀಕ್ಷೆ ಮುಂತಾದವುಗಳನ್ನು ನಡೆಸಲಾಗುತ್ತದೆ. ಸಮಾಲೋಚನೆ, ಅಗತ್ಯವುಳ್ಳವರಿಗೆ ರಿಯಾಯಿತಿ ದರದಲ್ಲಿ ಹೆಚ್ಚಿನ ತಪಾಸಣೆಗಳನ್ನೂ ಮಾಡಲಾಗುತ್ತದೆ. ವಿವಿಧ ಸಂಘ, ಸಂಸ್ಥೆಗಳು ಸಹಕಾರ ನೀಡಿವೆ ಎಂದರು.

ಈ ರೀತಿಯ ತಪಾಸಣೆಗೆ ಹೊರಗೆ ಸುಮಾರು 500 ರೂ.ಗಳಿಂದ 4 ಸಾವಿರದವರೆಗೆ ಖರ್ಚಾಗುತ್ತದೆ. ಹೀಗಾಗಿ ಇಲ್ಲಿ ಉಚಿತವಾಗಿ ಪಡೆಯಬಹುದು ಎಂದರು. ಗೋಷ್ಠಿಯಲ್ಲಿ ಬೃಂದಾವನ ಚಿತ್ರಾಸ್ ಆಸ್ಪತ್ರೆಯ ವೈದ್ಯ ಟಿ.ಮಧುಸೂಧನ್, ರೋಟರಿ ಅಧ್ಯಕ್ಷ ಕೃಷ್ಣೇ ಅರಸ್, ಸಂಘದ ಕಾರ್ಯದರ್ಶಿ ಪ್ರಮೋದ್ ಉಪಸ್ಥಿತರಿದ್ದರು.

ನಿಧನ

ಸುಲ್ತಾನ್ ತಾಜ್ ಮೊಹಮ್ಮದ್



ಮೈಸೂರು,ಜೂ.12–ಮೈಸೂರು ಬನ್ನಿಮಂಟಪದ ಟಿಪ್ಪು ಮಸೀದಿ ವ್ಯವಸ್ಥಾಪಕ ಸಮಿತಿ ಅಧ್ಯಕ್ಷರು ಹಾಗೂ ರಾಜೀವ್ ನಗರ ನಿವಾಸಿ ಸುಲ್ತಾನ್ ತಾಜ್ ಮೊಹಮ್ಮದ್ (85) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಈ ಸಂಬಂಧ ಗುರುವಾರ ರಾತ್ರಿ 8.30 ಗಂಟೆಗೆ ಇಶಾ ಪ್ರಾರ್ಥನೆಯ ನಂತರ, ಟಿಪ್ಪು ಮಸೀದಿ, 2ನೇ ಹಂತ, ಬನ್ನಿಮಂಟಪ, ಮೈಸೂರು ಇಲ್ಲಿ ನಮಾಝ್–ಎ–ಜನಾಝ ನಡೆಯಿತು. ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗದಲ್ಲಿರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.7ರಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಾಲಕಾರ್ಮಿಕ ಅನಿಷ್ಟ ಪದ್ಧತಿ; ನಿರ್ಮೂಲನೆ ಎಲ್ಲರ ಕರ್ತವ್ಯ

ವಿಶ್ವ ಬಾಲಕಾರ್ಮಿಕರ ಪದ್ಧತಿ ವಿರೋಧ ದಿನ ಆಚರಣೆಯಲ್ಲಿ ಮನವಿ



ಮೈಸೂರಿನ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಅಮರನಾಥ್ ಉದ್ಘಾಟಿಸಿದರು.

ಮೈಸೂರು, ಜೂ.12(ಜಿಎ)–ಶಿಕ್ಷಣದಿಂದ ವಂಚಿತರನ್ನಾಗಿಸುವ ಮೂಲಕ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ಮಾಡಲಾಗುತ್ತಿದ್ದು, ಈ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕಿರುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರನಾಥ್ ತಿಳಿಸಿದರು.

ಮೈಸೂರಿನ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಭಾರತದಲ್ಲಿ ಹೆಚ್ಚಿನವರು ವಿದ್ಯಾವಂತರು ಇದ್ದಾರೆ. ಅವರಿಂದ ಈ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಹೋರಾಡುವ ಹಾಗೂ ಅದನ್ನು ನಿರ್ಮೂಲನೆ ಮಾಡುವ ಕೆಲಸವಾಗಬೇಕು. ಕೇವಲ ಕಾರ್ಯಕ್ರಮಗಳಿಗೆ ಸೀಮಿತವಾಗಬಾರದು. ಇದರ ನಿರ್ಮೂಲನೆಗಾಗಿ ಭಾರತದ ಸಂವಿಧಾನದಲ್ಲಿ 1986ರಲ್ಲಿ ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿಗೊಳಿಸಿದೆ ಎಂದು ಹೇಳಿದರು.

ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳ ಭವಿಷ್ಯ ಸರ್ವ ನಾಶವಾಗುತ್ತದೆ. ಶಿಕ್ಷಣದಿಂದ ವಂಚಿತರಾಗುತ್ತಾರೆ. ದೈಹಿಕವಾಗಿ, ಮಾನಸಿಕವಾಗಿ ಕುಂಠಿತರಾಗಿ ಕೆಟ್ಟ ಪರಿಣಾಮ ಬೀರುತ್ತದೆ. ಹೀಗಾಗಿ ಈ ಮನಸ್ಥಿತಿಗಳನ್ನು ಬದಲಾಯಿಸುವ, ಜಾಗೃತಿ ಮೂಡಿಸುವ, ಎಚ್ಚರಿಸುವ ಕೆಲಸವಾಗಬೇಕು. ಬಾಲ ಕಾರ್ಮಿಕ ಅಪರಾಧಕ್ಕೆ ಸಂಬಂಧಿಸಿದಂತೆ ಮಕ್ಕಳಿಗಾಗಿ ಸಂವಿಧಾನದಲ್ಲಿ 27 ಕಾಯ್ದೆಗಳಿದ್ದು, 2ರ ಕಾಯ್ದೆ, 3ನೇ ಕಾಯ್ದೆ ಹಾಗೂ 14ನೇ ಕಾಯ್ದೆ ಪ್ರಮುಖ ಪಾತ್ರವಹಿಸುತ್ತದೆ. ಪ್ರಕರಣ ಸಾಬೀತಾದಲ್ಲಿ ಅಪರಾಧಿಗಳಿಗೆ ಕನಿಷ್ಠ 10 ಸಾವಿರ ರೂ. ದಂಡ ಹಾಗೂ 3 ತಿಂಗಳ ಕಠಿಣ ಶಿಕ್ಷೆಇರುತ್ತದೆ ಎಂದು ವಿವರಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಿರಿಯ ವಕೀಲ ಎನ್.ಸುಂದರ್‌ರಾಜ್ ಮಾತನಾಡಿ, ಕೆಲವು ವರದಿಗಳ ಪ್ರಕಾರ ಭಾರತದಲ್ಲಿ ಬಾಲ ಕಾರ್ಮಿಕ ಪದ್ಧತಿ ಹೆಚ್ಚಳಕ್ಕೆ ಕಾರಣ, ಬಡತನ ಹಾಗೂ ಮಕ್ಕಳಿಗೆ ನೀಡುವ ಕಡಿಮೆ ಕೂಲಿಯಿಂದಾಗಿ ಈ ಪ್ರಕರಣಗಳು ಹೆಚ್ಚಾಗಿವೆ. ಬಾಲ ಕಾರ್ಮಿಕರನ್ನು ವಿಮುಕ್ತರನ್ನಾಗಿ ಮಾಡಲು ಕೈಲಾಶ್ ಸತ್ಯಾರ್ಥಿ ಅವರು ದೇಶದಾದ್ಯಂತ ಬಚ್‌ಪನ್ ಬಚಾವ್ ಎಂಬ ಆಂದೋಲನ ಕೈಗೊಂಡಿದ್ದರು. ಇದರ ಅಂಗವಾಗಿ ದೇಶದಾದ್ಯಂತ 45 ಲಕ್ಷ ಮಕ್ಕಳನ್ನು ಬಾಲಕಾರ್ಮಿಕದಿಂದ ಹೊರತಂದರು. ಅವರು 2014ರಲ್ಲಿ ನೊಬೆಲ್ ಪ್ರಶಸ್ತಿ ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು.

1986 ಕಾಯ್ದೆ ನಂತರ 2016ರಲ್ಲಿ ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಗೆ ತಿದ್ದು ಪಡಿ ಮಾಡಲಾಗಿದ್ದು, 18ವರ್ಷ ಒಳಗಿನವರನ್ನು ಮಕ್ಕಳೆಂದು, 14ವರ್ಷ ಒಳಗಿನ ಮಕ್ಕಳನ್ನು ಹರೆಯದ ಮಕ್ಕಳೆಂದು ಪರಿಗಣಿಸಲಾಗಿದೆ. ಯಾವುದೇ ಕಾರಣಕ್ಕೂ ಮಕ್ಕಳನ್ನು ಕಾರ್ಮಿಕ ಕೆಲಸಕ್ಕೆ ಬಳಸಿಕೊಳ್ಳದಂತೆ ಪ್ರತಿಯೊಬ್ಬರು ಸಮಾಜವನ್ನು ಎಚ್ಚರಿಸುವ, ತಿಳಿ ಹೇಳುವ ಕೆಲಸ ಮಾಡಿ ಮಕ್ಕಳ ಉಜ್ವಲ ಭವಿಷ್ಯಕ್ಕೆ ದಾರಿ ಮಾಡಿಕೊಡುವ ಕೆಲಸವಾಗಬೇಕು ಎಂದರು.

> "ಇಂದು ಬಾಲಾ ಅಪರಾಧಿ ಹಾಗೂ ಪೋಕ್ಸೊ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿವೆ. ಅಲ್ಲದೆ, ಭಾರತದಲ್ಲಿ ಪ್ರತಿನಿತ್ಯ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಅಪಾರ ಪ್ರಮಾಣದ ಕಾಣಸಿಗುತ್ತಿವೆ. ಜಿಲ್ಲಾ ನ್ಯಾಯಾಲಯಗಳಲ್ಲಿ ಇಂತಹ ದೌರ್ಜನ್ಯಗಳು 900 ಪ್ರಕರಣಗಳು ದಾಖಲಾಗಿವೆ. ಸಮಾಜಕ್ಕೆ ಜಾಗೃತಿ ಮೂಡಿಸುವ ಕೆಲಸವಾದರೂ ಕೃತ್ಯಗಳು ನಡೆಯುತ್ತಿರುವುದು, ಸಮಾಜವೇ ತಲೆ ತಗ್ಗಿಸುವಂತಹ ನೀಚ ಕೃತ್ಯಗಳು.
> –ಸುಂದರ್‌ರಾಜ್, ಹಿರಿಯ ವಕೀಲ.

ಕಾರ್ಯಕ್ರಮದಲ್ಲಿ ಬಾಲ ಕಾರ್ಮಿಕ ಪದ್ಧತಿ ಕುರಿತು ಹಮ್ಮಿಕೊಂಡಿದ್ದ ಭಾಷಣ, ಚಿತ್ರ ಕಲೆ, ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ನೀಡಲಾಯಿತು. ಸಹಾಯಕ ಕಾರ್ಮಿಕ ಆಯುಕ್ತೆ ಎಸ್.ಆರ್.ವೀಣಾ, ಮೈಸೂರು ಉಪವಿಭಾಗ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಪ್ರೊ.ಉದಯ್‌ಶಂಕರ್, ಉಪಪ್ರಾಂಶುಪಾಲ ಮಹೇಶ್, ಇಎಸ್‌ಐ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶಶಿಕಲಾ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರವಿಚಂದ್ರ, ಡಾನ್ ಬಾಸ್ಕೋ ಮಕ್ಕಳಾಲಯದ ಜಿಮ್ ಜೋಸ್, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಯೋಜನಾಧಿಕಾರಿ ಹೆಚ್.ಪಿ.ಮಲ್ಲಿಕಾರ್ಜುನ, ಮಡಿಲು ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಶ್ರೀನಿವಾಸ್ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ನಗರ ಬಸ್ ಚಾಲಕರಿಗೆ ರಸ್ತೆ ಸುರಕ್ಷತೆ ಜಾಗೃತಿ



ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗದ ಬಸ್ ಚಾಲಕರು, ತಾಂತ್ರಿಕ ಸಿಬ್ಬಂದಿಗೆ ರಸ್ತೆ ಸುರಕ್ಷತೆ–ಸಂಚಾರ ನಿಯಮ ಪಾಲನೆ ಕುರಿತು ಜಾಗೃತಿ ಮೂಡಿಸಲಾಯಿತು.

ಮೈಸೂರು, ಜೂ.12(ಆರ್‌ಕೆ)– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಮೈಸೂರು ನಗರ ವಿಭಾಗದ ಬಸ್ ಚಾಲಕರು ಹಾಗೂ ತಾಂತ್ರಿಕ ಸಿಬ್ಬಂದಿಗೆ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಮ ಪಾಲನೆ ಕುರಿತು ಜಾಗೃತಿ ಮೂಡಿಸಲಾಯಿತು.

ಕುವೆಂಪುನಗರ ಮತ್ತು ಸಾತಗಳ್ಳಿ ಘಟಕದ ಸುಮಾರು 400 ಮಂದಿ ಬಸ್ ಚಾಲಕರುಗಳಿಗೆ ಅಪಘಾತ ವಲಯ, ಅಪಘಾತಗಳನ್ನು ತಡೆಗಟ್ಟುವುದು, ಅತೀ ವೇಗ ಮತ್ತು ಅಜಾಗರೂಕ ಚಾಲನೆ, ಸಂಚಾರ ನಿಯಮ, ಮೋಟಾರು ವಾಹನ ಕಾಯ್ದೆ ಪರಿಪಾಲನೆ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ತಿಳುವಳಿಕೆ ನೀಡಿದರು.

ವಾಹನಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಮೇನ್ ಡಿಸಿಪ್ಲೀನ್ ನಿರ್ವಹಣೆ ಮಾಡುವುದು, ಒನ್ ವೇ, ಸಿಗ್ನಲ್ ಜಂಪ್, ಬಸ್‌ಗಳನ್ನು ನಿಲ್ದಾಣ, ತಂಗುದಾಣ, ಬಸ್ ಬೇಗಳಲ್ಲೇ ನಿಲ್ಲಿಸಬೇಕು, ಪ್ರಯಾಣಿಕರನ್ನು ಹತ್ತಿಸಿಕೊಳ್ಳುವಾಗ ಮತ್ತು ಇಳಿಸುವಾಗ ಅವರ ಸುರಕ್ಷತೆ, ಬಸ್ಸಿನ ಒಳಗೆ ಲಗೇಜ್‌ಗಳ ಸುರಕ್ಷತೆ ಬಗ್ಗೆ ಜಾಗೃತರಾಗಿರುವಂತೆಯೂ ಚಾಲಕರು, ಕಂಡಕ್ಟರ್‌ಗಳಿಗೆ ಅರಿವು ಮೂಡಿಸಲಾಯಿತು. ತಿರುವು, ವಾಹನ ದಟ್ಟಣೆ ರಸ್ತೆಗಳಲ್ಲಿ ಅತೀ ಜಾಗರೂಕತೆಯಿಂದ ಬಸ್ ಚಾಲನೆ ಮಾಡಿ, ಇತರ ಸಣ್ಣ ವಾಹನಗಳಿಗೆ ತೊಂದರೆಯಾಗದಂತೆ ಚಾಲನೆ ಮಾಡಿ 'ಅಪಘಾತ ರಹಿತ ಬಸ್ ಮತ್ತು ಚಾಲಕ' ಎಂಬ ಪ್ರಶಂಸೆಗೆ ಪಾತ್ರರಾಗುವಂತೆಯೂ ಇದೇ ಸಂದರ್ಭ ತಿಳುವಳಿಕೆ ನೀಡಲಾಯಿತು.

ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಆರ್.ವಿ.ದೇಶಪಾಂಡೆ ಭೇಟಿ



ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರು, ಮಾಜಿ ಸಚಿವರಾದ ಆರ್.ವಿ.ದೇಶಪಾಂಡೆ ಅವರು ಮೈಸೂರಿನ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆಯುತ್ತಿರುವ ವೃಕ್ಷ ಶಾಂತಿ ಮಹಾಪೂಜೆ ಹಾಗೂ ಸಹಸ್ರ ಚಂಡಿಕಾಯಾಗದಲ್ಲಿ ಭಾಗವಹಿಸಿದ್ದರು.

ಆನ್‌ಲೈನ್‌ನಲ್ಲಿ ಸಾಲ: ಕಂಪನಿಗಳ ವಿರುದ್ಧ ಕ್ರಮಕ್ಕೆ ಮನವಿ


ಮೈಸೂರು, ಜೂ. 12–ಆನ್‌ಲೈನ್‌ನಲ್ಲಿ ಸಾಲ ನೀಡುವ ಕಂಪನಿಗಳಿಂದ ರಾಜ್ಯದಲ್ಲಿ ಬಡಕುಟುಂಬಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಅವುಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಒತ್ತಾಯಿಸಿದ್ದಾರೆ. ಆನ್‌ಲೈನ್‌ನಲ್ಲಿ ಸಾಲ ನೀಡುವ ಕಂಪನಿಗಳು ನೂರಾರು ಹುಟ್ಟಿಕೊಂಡಿವೆ. ಈ ಕಂಪನಿಗಳಿಂದ ಸಾಲ ಪಡೆದ ಬಡ ಗ್ರಾಹಕರು ಸಂಪೂರ್ಣವಾಗಿ ಸಾಲ ಮರುಪಾವತಿ ಮಾಡಿದರೂ ಗ್ರಾಹಕರ ಖಾತೆಗಳಿಂದ ಅವರಿಗೆ ಗೊತ್ತಿಲ್ಲದಂತೆ ಹಣ ಕಡಿತಗೊಳ್ಳುತ್ತಿದೆ. ಇದರಿಂದಾಗಿ ಬಡವರು ತೊಂದರೆ ಅನುಭವಿಸುವಂತಾಗಿದೆ. ಆದ್ದರಿಂದ ಆನ್‌ಲೈನ್‌ನಲ್ಲಿ ಸಾಲ ನೀಡುವ ಕಂಪನಿಗಳ ವಿರುದ್ಧ ಕ್ರಮ ಕೈಗೊಂಡು ಪ್ರತಿ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆ ವತಿಯಿಂದ ಆನ್‌ಲೈನ್‌ನಲ್ಲಿ ಸಾಲ ನೀಡುವ ಕಂಪನಿಗಳಿಂದ ಸಾಲ ಪಡೆಯದಂತೆ ಜಾಗೃತಿ ಮೂಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರು ವಿವಿ ನೌಕರರ ಸಹಕಾರಿ ಪತ್ತಿನ ಸಂಘದ ಅಧ್ಯಕ್ಷರಾಗಿ ಪಿ.ಚಿಕ್ಕಜ್ಯೋತಿ ಅವಿರೋಧ ಆಯ್ಕೆ



ಮೈಸೂರು,ಜೂ.12– ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರಿ ಪತ್ತಿನ ಸಂಘದ ಅಧ್ಯಕ್ಷರಾಗಿ ಪಿ.ಚಿಕ್ಕಜ್ಯೋತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಉಪಾಧ್ಯಕ್ಷ ಸ್ಥಾನದಲ್ಲಿ ಬಿ.ಪ್ರಕಾಶ ಮುಂದುವರೆಯಲಿದ್ದಾರೆ ಎಂದು ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಿ.ನಂದಕಿಶೋರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.06.2025 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ವಿಶ್ವದ ಮೊಟ್ಟ ಮೊದಲ ವಿಶಿಷ್ಟ ಕಾರ್ಯಕ್ರಮ ವನ ದುರ್ಗಾ ವೃಕ್ಷಶಾಂತಿ ಮಹಾಯಜ್ಞ, ಸಹಸ್ರ ಚಂಡೀ ಯಾಗ, ಸ್ಥಳ: ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ, ಬೆಳಗ್ಗೆಯಿಂದ.

■ **ಒಕ್ಕಲಿಗರ ಸಂಘ :** ಮೈಸೂರು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಜೂ. 27 ರಂದು ಮೈಸೂರಲ್ಲಿ ನಡೆಯಲಿರುವ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಪೋಸ್ಟರ್ ಬಿಡುಗಡೆ ಹಾಗೂ ಪ್ರಚಾರ ವಾಹನದ ಪೂಜಾ ಕಾರ್ಯಕ್ರಮ, ಉಪಸ್ಥಿತರು : ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ಮಾಜಿ ಶಾಸಕರಾದ ಎಲ್. ನಾಗೇಂದ್ರ, ಸಾ.ರಾ. ಮಹೇಶ್, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ಮುಖಂಡ ಕವೀಶ್‌ಗೌಡ, ಸ್ಥಳ: ಬಂದಂತಮ್ಮ ಕಾಳಮ್ಮ ದೇವಸ್ಥಾನ, ಕುವೆಂಪುನಗರ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತಕ್ಕೆ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ (ಬೆಳಗ್ಗೆ 6.30 ರಿಂದ 7 ರವರೆಗೆ), ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಇಂಗ್ವಾನಲ್ ಹರ್ನಿಯಾ ಮತ್ತು ಮೂಲವ್ಯಾಧಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ವೆರಿಕೋಸ್ ವೇನ್ಸ್, ಉಬ್ಬಿದ ರಕ್ತನಾಳ, ಹಸಿರುಂಬು, ಇಸಬು ರೋಗ, ಬಂಗು, ಅಲರ್ಜಿ ಚರ್ಮರೋಗ ತಪಾಸಣಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿವಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಲೋಕಮಾತ ಅಹಲ್ಯಾದೇವಿ ಹೋಲ್ಕರ್ ಅವರ ಜೀವನಗಾಥೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಶ್ರೀಮತಿ ಹೆಚ್.ಜಿ. ಶೋಭಾ ಅವರಿಂದ ಉಪನ್ಯಾಸ, ಸ್ಥಳ: ಸವಿತಿ ಕೊಠಡಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿವಿ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಗಣಕಯಂತ್ರ ವಿಜ್ಞಾನ ಅಧ್ಯಯನ ವಿಭಾಗ :** ಡಾ. ಶ್ರೀನಾಥ್ ಶ್ರೀನಿವಾಸ ಅವರಿಂದ ಎಐ ಅಂಡ್ ಸ್ಟೋರಿಟೆಲ್ಲಿಂಗ್ ಕುರಿತು ವಿಶೇಷ ಉಪನ್ಯಾಸ, ಗೌರವ ಅತಿಥಿಗಳು : ಇನ್‌ಫಾರ್‌ಮೆಟಿಕ್ಸ್ ಇಂಡಿಯಾ ಲಿಮಿಟೆಡ್ ಚೀಫ್ ಮ್ಯಾನೇಜಿಂಗ್ ಡೈರೆಕ್ಟರ್ ಎನ್.ವಿ. ಸತ್ಯನಾರಾಯಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಮೈಸೂರು ವಿವಿ ಕೆರಿಯರ್ ಹಬ್ಬ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 141ನೇ ಜನ್ಮ ದಿನೋತ್ಸವ ಸಂಭ್ರಮಾಚರಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಹೊಸಮಠದ ಮಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ.ರಘುರಾಂ ವಾಜಪೇಯಿ, ಪ್ರಧಾನ ನುಡಿ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಉಪಸ್ಥಿತರು : ಡಾ. ಬಿ.ಆರ್. ನಟರಾಜ್ ಜೋಯ್ಸ್, ಅಧ್ಯಕ್ಷತೆ : ಡಾ. ಎಂ.ಜಿ.ಆರ್. ಅರಸ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ

■ **ಸಂಚಲನ ರಂಗ ತಂಡ :** ನಾಟಕ ಹರಕೆಯ ಕುರಿ, ರಚನೆ : ಡಾ.ಚಂದ್ರಶೇಖರ ಕಂಬಾರ, ವಿನ್ಯಾಸ: ಮಧು ಎಂ ಎಸ್ ಎಸ್ ಡಿ, ಬೆಳಕು : ಜೀವನ್ ಕುಮಾರ್ ಬಿ ಹೆಗ್ಗೋಡು, ವಸ್ತ್ರ ವಿನ್ಯಾಸ: ಶೀಲಾ ಎಸ್, ಸಂಗೀತ: ದಿಗ್ವಿಜಯ ಹೆಗ್ಗೋಡು, ನಿರ್ದೇಶನ: ದೀಪಕ್ ಮೈಸೂರು, ಸ್ಥಳ: ಕಿರುರಂಗಮಂದಿರ, ಸಂಜೆ 6.30ಕ್ಕೆ

■ **ಶ್ರೀ ಸತ್ಯನಾರಾಯಣಸ್ವಾಮಿ ಮತ್ತು ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** ನವಗ್ರಹಗಳ ನೂತನ ಶಿಲಾವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮ, ಸಂಜೆ 6ಕ್ಕೆ ವೀರಗಾಸೆ, ಮಂಗಳವಾದ್ಯಗಳೊಂದಿಗೆ 108 ಸುಮಂಗಲಿಯರಿಂದ ಮೆರವಣಿಗೆ, ಸ್ಥಳ: ದೇವಸ್ಥಾನದ ಆವರಣ, ರಾಜೇಂದ್ರನಗರ, ಎನ್.ಆರ್. ಪೊಲೀಸ್ ಸ್ಟೇಷನ್.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ. ಎಂ. ಎನ್. ಚಿಕ್ಕಮಾದು, ಪ್ರಸ್ತುತಿ : ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಎಂ.ಡಿ. ಸುಮತಿ ಮುರಾರಿ ಹಾಗೂ ಕೆ. ಟಿ. ಉದಯಕಿರಣ್, ವ್ಯಾಖ್ಯಾನ –ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು –ಸುಪ್ರಿಯಾ ಆಚಾರ್ಯ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು–ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, 8.50 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಆರ್.ಎನ್. ಶ್ರೀಲತಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಶ್ರೀನಿವಾಸ ಉಡುಪ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಹರಿಣಿ –ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ಕಾನೂನು ಅಂದರೆ ಲಾ ವಿಷಯದಲ್ಲಿ ಇರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಇಂದುಮತಿ ಎಂ.ಜೆ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, 7.20 ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಹೆಚ್. ಕೆ. ನರಸಿಂಹಮೂರ್ತಿ– ವೈಯೋಲಿನ್ ವಾದನ, 10.00 ಜನಪದ ಸಂಗೀತ, 10.25 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ವಿಮಾನ ದುರಂತದಲ್ಲಿ ಮಡಿದವರ ಕುಟುಂಬಕ್ಕೆ ತಲಾ 1 ಕೋಟಿ ಪರಿಹಾರ



ಘಟನೆಗೆ ತೀವ್ರ ಸಂತಾಪ ಸೂಚಿಸಿ, ಪರಿಹಾರ ಪ್ರಕಟಿಸಿದ ಟಾಟಾ ಗ್ರೂಪ್ ಅಧ್ಯಕ್ಷ ಚಂದ್ರಶೇಖರನ್

ಅಹಮದಾಬಾದ್, ಜೂ.12– ವಿಮಾನ ದುರಂತದಲ್ಲಿ ಸಾವನ್ನಪ್ಪಿದವರಿಗೆ ತಲಾ ಒಂದು ಕೋಟಿ ಪರಿಹಾರ ನೀಡುವುದಾಗಿ ಟಾಟಾ ಸನ್ಸ್ ಅಧ್ಯಕ್ಷ ಎನ್.ಚಂದ್ರಶೇಖರನ್ ಘೋಷಿಸಿದ್ದಾರೆ. ಈ ಸಂಬಂಧ ಅವರು ಎಕ್ಸ್ ಹ್ಯಾಂಡಲ್‌ನಲ್ಲಿ ಪೋಸ್ಟ್ ಹಾಕುವ ಮೂಲಕ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಈ ಪೋಸ್ಟ್ ಅನ್ನು ಏರ್ ಇಂಡಿಯಾ ರೀ ಪೋಸ್ಟ್ ಮಾಡಿ ಪರಿಹಾರ ಘೋಷಣೆಯನ್ನು ಖಚಿತ ಪಡಿಸಿದೆ.

ಚಂದ್ರಶೇಖರನ್ ಪೋಸ್ಟ್‌ನಲ್ಲಿ ಏನಿದೆ?: ಏರ್ ಇಂಡಿಯಾ ವಿಮಾನ AI171 ದುರಂತ ಘಟನೆಯಿಂದ ನಾವು ತೀವ್ರವಾಗಿ ದುಃಖಿತರಾಗಿದ್ದೇವೆ. ಈ ಕ್ಷಣದಲ್ಲಿ ನಾವು ಅನುಭವಿಸುತ್ತಿರುವ ದುಃಖವನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ನಮ್ಮ ಆಲೋಚನೆಗಳು ಮತ್ತು ಪ್ರಾರ್ಥನೆಗಳು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳೊಂದಿಗೆ ಮತ್ತು ಗಾಯಗೊಂಡವರೊಂದಿಗೆ ಇವೆ.


ಚಂದ್ರಶೇಖರನ್

ಈ ದುರಂತದಲ್ಲಿ ಪ್ರಾಣ ಕಳೆದುಕೊಂಡ ಪ್ರತಿಯೊಬ್ಬ ವ್ಯಕ್ತಿಯ ಕುಟುಂಬಗಳಿಗೆ ಟಾಟಾ ಗ್ರೂಪ್ 1 ಕೋಟಿ ರೂ. ಪರಿಹಾರ ನೀಡುತ್ತದೆ. ಗಾಯಗೊಂಡವರ ವೈದ್ಯಕೀಯ ವೆಚ್ಚಗಳನ್ನು ಸಹ ನಾವು ಭರಿಸುತ್ತೇವೆ. ಅವರಿಗೆ ಅಗತ್ಯವಿರುವ ಎಲ್ಲಾ ಆರೈಕೆ ಮತ್ತು ಬೆಂಬಲವನ್ನು ನಾವು ಖಚಿತ ಪಡಿಸಿಕೊಳ್ಳುತ್ತೇವೆ. ಹೆಚ್ಚುವರಿಯಾಗಿ, ಬಿಜೆ ಮೆಡಿಕಲ್ಸ್ ಹಾಸ್ಟೆಲ್ ನಿರ್ಮಾಣಕ್ಕೆ ನಾವು ಬೆಂಬಲ ನೀಡುತ್ತೇವೆ.


ಈ ಊಹಿಸಲಾಗದ ಸಮಯದಲ್ಲಿ ಸಂತ್ರಸ್ತ ಕುಟುಂಬಗಳು ಮತ್ತು ಸಮುದಾಯಗಳೊಂದಿಗೆ ನಾವು ದೃಢವಾಗಿ ನಿಲ್ಲುತ್ತೇವೆ ಎಂದು ಟಾಟಾ ಗ್ರೂಪ್‌ನ ಎಕ್ಸ್ ಹ್ಯಾಂಡಲ್‌ನಲ್ಲಿ ಟಾಟಾ ಸನ್ಸ್ ಅಧ್ಯಕ್ಷರಾಗಿರುವ ಎನ್ ಚಂದ್ರಶೇಖರನ್ ಘೋಷಿಸಿದ್ದಾರೆ.

ಮಾಧ್ಯಮಗಳಲ್ಲಿ ಏರ್ ಇಂಡಿಯಾ ಮನವಿ: ಮೀಸಲಾದ ಪ್ರಯಾಣಿಕರ ಹಾಟ್‌ಲೈನ್ ಸಂಖ್ಯೆಗೆ ಕರೆ ಮಾಡದಂತೆ ಏರ್ ಇಂಡಿಯಾ ಮಾಧ್ಯಮ ಪ್ರತಿನಿಧಿಗಳಲ್ಲಿ ಮನವಿ ಮಾಡುತ್ತದೆ ಎಂದು ತನ್ನ ಹೇಳಿಕೆಯಲ್ಲಿ ಏರ್ ಇಂಡಿಯಾ ಮನವಿ ಮಾಡಿದೆ. ಮಾಧ್ಯಮ ಸಂಬಂಧಿತ ಯಾವುದೇ ಪ್ರಶ್ನೆಗೆ ಏರ್ ಇಂಡಿಯಾದ ಮಾಧ್ಯಮ ಸಂಪರ್ಕಕ್ಕೆ ಇರುವ +91 9821414954 ನಂಬರ್‌ಗೆ ಸಂಪರ್ಕಿಸಬಹುದು ಎಂದು ಹೇಳಿದೆ.

ವಿಮಾನ ನಿಲ್ದಾಣದ ಕಾರ್ಯಾಚರಣೆ ಸ್ಥಗಿತ: ವಿಮಾನ ದುರಂತದ ನಂತರ ಅಹಮದಾಬಾದ್ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ವಿಮಾನ ನಿಲ್ದಾಣದ ವಕ್ತಾರರು ಮಾಹಿತಿ ನೀಡಿದ್ದಾರೆ.

ಗೃಹ ಸಚಿವ ಅಮಿತ್ ಶಾ ಪೋಸ್ಟ್: ಅಹಮದಾಬಾದ್ ವಿಮಾನ ದುರಂತ ತೀವ್ರ ನೋವು ತಂದಿದೆ. ರಕ್ಷಣಾ ತಂಡಗಳು ಅತ್ಯಂತ ತ್ವರಿತವಾಗಿ ಘಟನಾ ಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿವೆ. ನಾನು ಘಟನೆ ಬಗ್ಗೆ ಗುಜರಾತ್ ಸಿಎಂ ಭೂಪೇಂದ್ರ ಪಟೇಲ್ ಜತೆ ಮಾತನಾಡಿದ್ದೇನೆ. ಗೃಹ ಸಚಿವ ಶ್ರೀಹರ್ಷ ಸಾಂಘ್ವಿ, ಅಹಮದಾಬಾದ್ ಪೊಲೀಸ್ ಕಮಿಷನರ್ ಪರಿಸ್ಥಿತಿಯನ್ನು ಹತ್ತಿರದಿಂದ ನಿಗಾವಹಿಸಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ವಿಮಾನ ಪತನ ದುರದೃಷ್ಟಕರ, ಡಿಎನ್‌ಎಪರೀಕ್ಷೆ ಬಳಿಕ ಸಾವಿನ ಸಂಖ್ಯೆ ಘೋಷಣೆ: ಅಮಿತ್ ಶಾ



ಅಹಮದಾಬಾದ್, ಜೂ.12– ಗುಜರಾತ್‌ನ ಅಹಮದಾಬಾದ್‌ನಲ್ಲಿ ಗುರುವಾರ ಮಧ್ಯಾಹ್ನ ಏರ್ ಇಂಡಿಯಾ ವಿಮಾನ ಪತನವಾಗಿದ್ದು, 241 ಜನರನ್ನು ಬಲಿ ಪಡೆದಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಸಂಜೆ ಏರ್ ಇಂಡಿಯಾ ವಿಮಾನ ಪತನವಾದ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು, ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಮತ್ತು ಗುಜರಾತ್ ಗೃಹ ಸಚಿವ ಹರ್ಷ ಸಾಂಘ್ವಿ ಅಮಿತ್ ಶಾ ಅವರಿಗೆ ಸಾಥ್ ನೀಡಿದರು. ಇದೇ ವೇಳೆ ಅಮಿತ್ ಶಾ, ವಿಮಾನ ದುರಂತ ಒಂದು ದುರಾದುಷ್ಟಕರ. ಅಪಘಾತದಲ್ಲಿ ಸಾಕಷ್ಟು ಜನರು ಮೃತಪಟ್ಟಿದ್ದಾರೆ ಎಂಬ ನಿಖರ ಸಂಖ್ಯೆ ಹೇಳಲು ಈಗ ಸಾಧ್ಯವಿಲ್ಲ. ಡಿಎನ್‌ಎ ಪರೀಕ್ಷೆಯ ಬಳಿಕವೇ ನಿಖರವಾದ ಸಾವಿನ ಸಂಖ್ಯೆ ತಿಳಿಯಲಿದೆ ಎಂದು ಅವರು ಹೇಳಿದ್ದಾರೆ.

ಜರ್ಮನಿ, ಚೀನಾ, ರಷ್ಯಾ, ಫ್ರಾನ್ಸ್‌ನಿಂದ ಸಂತಾಪ



ನವದೆಹಲಿ, ಜೂ.12– ಅಹಮದಾಬಾದ್ ವಿಮಾನ ದುರಂತದ ಕುರಿತಂತೆ ಜರ್ಮನಿ, ಚೀನಾ, ರಷ್ಯಾ, ಫ್ರಾನ್ಸ್ ದೇಶಗಳು ಸಂತಾಪ ಸೂಚಿಸಿದ್ದು, ಭಾರತದ ಜೊತೆ ಒಗ್ಗಟ್ಟು ಪ್ರದರ್ಶಿಸಿವೆ.

ಮಧ್ಯಾಹ್ನ 1.39ರ ಸುಮಾರಿಗೆ ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುತ್ತಿದ್ದ ಎಐ 171 ಏರ್ ಇಂಡಿಯಾ ವಿಮಾನವು ಟೇಕಾಫ್ ಬಳಿಕ ವಿಮಾನ ನಿಲ್ದಾಣದ ಹೊರವಲಯದಲ್ಲಿ ಪತನವಾಗಿದೆ. ವಿಮಾನದಲ್ಲಿ 242 ಪ್ರಯಾಣಿಕರಿದ್ದರು.

ಏರ್ ಇಂಡಿಯಾ ಪತನದ ಆಘಾತಕಾರಿ ಚಿತ್ರಗಳನ್ನು ನಾವು ಗಮನಿಸಿದ್ದೇವೆ. ಭಾರತದ ಜನರಿಗಾಗಿ ಪ್ರಾರ್ಥಿಸುತ್ತೇವೆ ಎಂದು ಜರ್ಮನಿಯ ವಿದೇಶಾಂಗ ಸಚಿವ ಜೋಹನ್ ವಡೆಫುಲ್ ಹೇಳಿದ್ದಾರೆ.

ಅಹಮದಾಬಾದ್‌ನಿಂದ ಟೇಕಾಫ್ ಆದ ನಂತರ ಏರ್ ಇಂಡಿಯಾ ವಿಮಾನ ಅಪಘಾತಕ್ಕೀಡಾದ ಆಘಾತಕಾರಿ ಚಿತ್ರಗಳನ್ನು ನಾವು ಗಮನಿಸಿದ್ದೇವೆ. ಈಗ ತಾನೇ ಘಟನೆಯ ವಿವರಗಳನ್ನು ಪಡೆಯುತ್ತಿದ್ದೇವೆ. ಭಾರತದಲ್ಲಿರುವ ನಮ್ಮ ಸ್ನೇಹಿತರು ಮತ್ತು ಪ್ರಸ್ತುತ ತಮ್ಮ ಪ್ರೀತಿಪಾತ್ರರಿಗಾಗಿ ಕಾಯುತ್ತಿರುವ ಪ್ರತಿಯೊಬ್ಬರಿಗಾಗಿ ನನ್ನ ಪ್ರಾರ್ಥನೆಗಳು ಎಂದು ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಭಾರತಕ್ಕೆ ಜರ್ಮನ್ ರಾಯಭಾರಿ ಫಿಲಿಪ್ ಅಕೆರ್ಮನ್, ಎಕ್ಸ್‌ನಲ್ಲಿ ಜೋಹಾನ್ ವಡೆಫುಲ್ ಅವರ ಹೇಳಿಕೆಯನ್ನು ಹಂಚಿಕೊಂಡಿದ್ದಾರೆ.

ವಿಮಾನ ಅಪಘಾತದ ಬಗ್ಗೆ ಭಾರತಕ್ಕೆ ಚೀನಾದ ರಾಯಭಾರಿ ಷು ಫೀಹಾಂಗ್ ದುಃಖ ವ್ಯಕ್ತಪಡಿಸಿದ್ದಾರೆ. ಅದರಿಂದ ಹಾನಿಗೊಳಗಾದ ಎಲ್ಲರಿಗೂ ಸಂತಾಪ ಸೂಚಿಸಿದ್ದಾರೆ. ಅಹಮದಾಬಾದ್‌ನ ವಿಮಾನ ದುರಂತದಿಂದ ತೀವ್ರ ದುಃಖಿತನಾಗಿದ್ದೇನೆ. ಪ್ರಯಾಣಿಕರು ಮತ್ತು ಅವರ ಕುಟುಂಬಗಳಿಗೆ ನಮ್ಮ ಹೃದಯಗಳು ಮಿಡಿಯುತ್ತವೆ. ಈ ಕಷ್ಟದ ಸಮಯದಲ್ಲಿ ಬಾಧಿತರಾದ ಎಲ್ಲರೊಂದಿಗೆ ನಾವು ನಿಲ್ಲುತ್ತೇವೆ ಎಂದು ಷು ಫೀಹಾಂಗ್ ಎಕ್ಸ್ ಪೋಸ್ಟ್ ಮಾಡಿದ್ದಾರೆ.

ಭಾರತಕ್ಕೆ ರಷ್ಯಾದ ರಾಯಭಾರಿ ಡೆನಿಸ್ ಅಲಿಪೋವ್ ಸಂತ್ರಸ್ತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅಲಿಪೋವ್, ಅಹಮದಾಬಾದ್‌ನಿಂದ ಹೃದಯ ವಿದ್ರಾವಕ ಸುದ್ದಿ ಬಂದಿದೆ. ಈ ದುರಂತದಲ್ಲಿ ಮೃತರ ಕುಟುಂಬಗಳು, ಎಲ್ಲಾ ಭಾರತೀಯರು ಹಾಗೂ ಭಾರತ ಸರ್ಕಾರಕ್ಕೆ ನನ್ನ ಹೃತ್ಪೂರ್ವಕ ಸಂತಾಪಗಳು ಎಂದು ಹೇಳಿದ್ದಾರೆ.

ಅಹಮದಾಬಾದ್‌ನಲ್ಲಿ ನಡೆದ ವಿಮಾನ ಅಪಘಾತದ ವರದಿಯಿಂದ ಫ್ರಾನ್ಸ್ ತೀವ್ರ ದುಃಖಿತವಾಗಿದೆ ಎಂದು ಭಾರತಕ್ಕೆ ಫ್ರೆಂಚ್ ರಾಯಭಾರಿ ಥಿಯೆರ್ರಿ ಮ್ಯಾಥೌ ಹೇಳಿದ್ದಾರೆ. ಈ ಕಷ್ಟದ ಸಮಯದಲ್ಲಿ ಸಂಪೂರ್ಣ ಸಂತ್ರಸ್ತ ಕುಟುಂಬಗಳ ಜೊತೆ ನಾವಿದ್ದೇವೆ ಎಂದಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮ್ಯಾಥೌ, ಅಹಮದಾಬಾದ್‌ನ ವಿಮಾನ ಅಪಘಾತದ ವರದಿಯಿಂದ ಫ್ರಾನ್ಸ್ ತೀವ್ರ ದುಃಖಿತವಾಗಿದೆ. ನಮ್ಮ ಹೃದಯ ಸಂತ್ರಸ್ತರು ಮತ್ತು ಅವರ ಪ್ರೀತಿಪಾತ್ರರಿಗೆ ಮಿಡಿಯುತ್ತಿದೆ. ಈ ಕಷ್ಟದ ಸಮಯದಲ್ಲಿ ನಾವು ನಮ್ಮ ಸಂಪೂರ್ಣ ಬೆಂಬಲವನ್ನು ಅವರಿಗೆ ನೀಡುತ್ತೇವೆ ಎಂದು ಹೇಳಿದ್ದಾರೆ.

ಮಂಗಳೂರು ಮೂಲದ ಕ್ಲೈವ್ ಕುಂದರ್ ಸಹ ಪೈಲಟ್



ನವದೆಹಲಿ: ಪತನಗೊಂಡ ಏರ್ ಇಂಡಿಯಾ ವಿಮಾನದಲ್ಲಿ ಮಂಗಳೂರು ಮೂಲದ ಕ್ಲೈವ್ ಕುಂದರ್ ಸಹ ಪೈಲಟ್. ಕ್ಲೈವ್ ಕುಂದರ್ ಮುಂಬೈನಲ್ಲಿ ನೆಲೆಸಿದ್ದು ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ತರಬೇತಿ ಪಡೆದಿದ್ದರು. ಒಟ್ಟು 1,100 ಗಂಟೆಗಳ ವಿಮಾನ ಹಾರಾಟದ ಅನುಭವವನ್ನು ಹೊಂದಿದ್ದರು.

ಕ್ಲೈವ್ ಕುಂದರ್ ಅವರು 8,200 ಗಂಟೆಗಳಿಗಿಂತ ಹೆಚ್ಚು ಹಾರಾಟದ ಅನುಭವ ಹೊಂದಿರುವ ಅನುಭವಿ ಪೈಲಟ್ ಕ್ಯಾಪ್ಟನ್ ಸುಮೀತ್ ಸಭರ್ವಾಲ್ ಅವರಿಗೆ ಸಹಾಯ ಮಾಡುತ್ತಿದ್ದರು.

ಪೈಲಟ್‌ಗಳಿಗಿತ್ತು 9,300 ಗಂಟೆಗಳ ಹಾರಾಟದ ಅನುಭವ

ನವದೆಹಲಿ, ಜೂ.12– ಅಹಮದಾಬಾದ್ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಕೆಲವೇ ನಿಮಿಷಗಳಲ್ಲಿ ಏರ್ ಇಂಡಿಯಾ ವಿಮಾನವು ದುರಂತಕ್ಕೀಡಾಗಿ, ಅದರಲ್ಲಿ ಪ್ರಯಾಣಿಸುತ್ತಿದ್ದ ಎಲ್ಲರೂ ಸಾವನ್ನಪ್ಪಿದ್ದಾರೆ.


ಕ್ಯಾ.ಸುಮೀತ್

ಲಂಡನ್‌ನ ಗ್ಯಾಟ್‌ವಿಕ್ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದ ಏರ್ ಇಂಡಿಯಾ ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನವು ಮಧ್ಯಾಹ್ನ 1.39ಕ್ಕೆ ಅಹಮದಾ ಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟಿತು. ಕ್ಯಾಪ್ಟನ್ ಸುಮೀತ್ ಸಭರ್ವಾಲ್ ಮತ್ತು ಫಸ್ಟ್ ಆಫೀಸರ್ ಕ್ಲೈವ್ ಕುಂದರ್ ವಿಮಾನದ ನೇತೃತ್ವ ಹೊಂದಿದ್ದರು. ಇಬ್ಬರಿಗೂ ಒಟ್ಟು 9,300 ಗಂಟೆಗಳ ಹಾರಾಟದ ಅನುಭವವಿತ್ತು ಎಂದು ವರದಿಯಾಗಿದೆ. ಕ್ಯಾಪ್ಟನ್ ಸುಮೀತ್ ಸಭರ್ವಾಲ್ ಲೈನ್ ಟ್ರೈನಿಂಗ್ ಕ್ಯಾಪ್ಟನ್ (LTC) ಆಗಿದ್ದಾರೆ.

ನೇತೃತ್ವ ವಹಿಸಿದ್ದ ಕ್ಯಾಪ್ಟನ್ ಸಭರ್ವಾಲ್ 8,200 ಗಂಟೆಗಳ ವಿಮಾನ ಹಾರಾಟದ ಅನುಭವ ಹೊಂದಿದ್ದರು. ಸಹಾಯಕ ಪೈಲಟ್ ಕ್ಲೈವ್ ಕುಂದರ್ 1,100 ಗಂಟೆಗಳ ಅನುಭವ ಹೊಂದಿದ್ದರು ಎಂದು ನಾಗರಿಕ ವಿಮಾನಯಾನ ನಿಯಂತ್ರಣ ಮಂಡಳಿ ಹೇಳಿದೆ.

ವಿಮಾನವು ಪ್ರತಿ ನಿಮಿಷಕ್ಕೆ 475 ಅಡಿಗಳಷ್ಟು ಕೆಳಗೆ ಬೀಳುತ್ತಿತ್ತು. 625 ಅಡಿ ಎತ್ತರದಿಂದ ವೇಗವಾಗಿ ಕೆಳಗೆ ಕುಸಿದ ಕಾರಣ ಪೈಲಟ್ ಗಳಿಗೆ ಪ್ರತಿಕ್ರಿಯಿಸಲು ಕೇವಲ ಒಂದು ನಿಮಿಷಕ್ಕಿಂತ ಕಡಿಮೆ ಸಮಯವಿತ್ತು.

ವಾಯು ಸಂಚಾರ ನಿಯಂತ್ರಣ ಘಟಕಕ್ಕೆ (ATC)ತುರ್ತು ಸಂದೇಶ ಬಂದಿದೆ. ಆದರೆ, ಮತ್ತೆ ಮತ್ತೆ ಪ್ರಯತ್ನಿಸಿದರೂ ATCಗೆ ಯಾವುದೇ ಪ್ರತಿಕ್ರಿಯೆ ಸಿಗಲಿಲ್ಲ. ಎಟಿಸಿ ಪ್ರಕಾರ, ವಿಮಾನವು ಅಹಮದಾಬಾದ್‌ನಿಂದ 13.39 IST (0809 UTC)ಕ್ಕೆ ರನ್‌ವೇ 23 ರಿಂದ ಹೊರಟಿತು. ಅದು ATCಗೆ 'MAYDAY'ಕರೆ ನೀಡಿತು. ಆದರೆ, ನಂತರ ATC ಮಾಡಿದ ಕರೆಗಳಿಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ರನ್‌ವೇ 23ರಿಂದ ಹೊರಟ ತಕ್ಷಣ, ವಿಮಾನ ನಿಲ್ದಾಣದ ಹೊರಗೆ ನೆಲಕ್ಕೆ ಅಪ್ಪಳಿಸಿತು. ಅಪಘಾತ ಸ್ಥಳದಿಂದ ದಟ್ಟವಾದ ಕಪ್ಪು ಹೊಗೆ ಬರುತ್ತಿರುವುದು ಕಂಡುಬಂದಿದೆ ಎಂದು ನಾಗರಿಕ ವಿಮಾನ ಯಾನ ನಿಯಂತ್ರಣ ಮಂಡಳಿ ತಿಳಿಸಿದೆ.

ಭಾರತದಲ್ಲಿ ಈವರೆಗೆ ಸಂಭವಿಸಿದ ಪ್ರಮುಖ ವಿಮಾನ ದುರಂತಗಳು

- **2020 ಆಗಸ್ಟ್ 7:** ದುಬೈ–ಕೋಯಿಕ್ಕೋಡ್ ಮಾರ್ಗದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಕ್ಯಾಲಿಕಟ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇ ನಲ್ಲಿ ಪತನಗೊಂಡಿತ್ತು. ಈ ದುರಂತದಲ್ಲಿ 18 ಜನ ಮೃತಪಟ್ಟಿದ್ದು, 172 ಜನ ಪಾರಾಗಿದ್ದರು.
- **2010 ಮೇ 22:** ದುಬೈ–ಮಂಗಳೂರು ಮಾರ್ಗದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ವೇಳೆ ರನ್‌ವೇನಲ್ಲಿ ಪತನಗೊಂಡಿತ್ತು. ಘಟನೆಯಲ್ಲಿ 158 ಪ್ರಯಾಣಿಕರು ಮೃತಪಟ್ಟಿದ್ದು, ಕೇವಲ 8 ಜನ ಬದುಕುಳಿದಿದ್ದರು.
- **2000 ಜುಲೈ 17:** ಪಟ್ನಾದ ವಸತಿ ಪ್ರದೇಶದಲ್ಲಿ ಅಲೈನ್ಸ್ ಏರ್ ವಿಮಾನ 7412 ಪತನವಾಗಿ 60 ಜನ ಮೃತಪಟ್ಟಿದ್ದರು.
- **1996 ನವೆಂಬರ್ 12:** ಸೌದಿ ಅರೇಬಿಯಾದ ವಿಮಾನ ಮತ್ತು ಕಜಕಿಸ್ತಾನದ ವಿಮಾನ ಹರಿಯಾಣದ ಚಕ್ರಿದಬ್ರಿ ಬಳಿ ಆಗಸದಲ್ಲಿ ಮುಖಾಮುಖಿ ಡಿಕ್ಕಿಯಾಗಿ ಎರಡೂ ವಿಮಾನದಲ್ಲಿದ್ದ 349 ಜನ ಸಾವಿಗೀಡಾಗಿದ್ದರು.
- **1993 ಏಪ್ರಿಲ್ 26:** ಔರಂಗಾಬಾದ್‌ನಲ್ಲಿ ಟೇಕ್‌ಆಫ್ ಆಗುವಾಗ ರನ್‌ವೇನಲ್ಲಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದು ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಘಾತಕ್ಕೀಡಾಗಿತ್ತು. ಘಟನೆಯಲ್ಲಿ 55 ಜನ ಮೃತಪಟ್ಟಿದ್ದರು.
- **1991 ಆಗಸ್ಟ್ 16:** ಇಂಫಾಲದಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಘಾತಕ್ಕೀಡಾಗಿ 69 ಜನ ಮೃತಪಟ್ಟಿದ್ದರು.
- **1990 ಫೆಬ್ರುವರಿ 14:** ಪ್ರೇಮಿಗಳ ದಿನದಂದು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಘಾತಕ್ಕೀಡಾಗಿ 92 ಜನ ಸಾವನ್ನಪ್ಪಿದ್ದರು.
- **1988 ಅಕ್ಟೋಬರ್ 19:** ಇಂಡಿಯನ್ ಏರ್‌ಲೈನ್ಸ್ ವಿಮಾನ ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಅಪಘಾತಕ್ಕೀಡಾಗಿ 133 ಜನ ಮೃತಪಟ್ಟಿದ್ದರು.
- **1982 ಜೂನ್ 21:** ಬಾಂಬೆಯಲ್ಲಿ ಪ್ರತಿಕೂಲ ಹವಾಮಾನದ ಕಾರಣ ಏರ್ ಇಂಡಿಯಾ ವಿಮಾನ ಅಪಘಾತಕ್ಕೀಡಾಗಿ 17 ಜನ ಮೃತಪಟ್ಟಿದ್ದರು.
- **1978 ಜನವರಿ 1:** ಏರ್ ಇಂಡಿಯಾ ವಿಮಾನ ಬಾಂದ್ರಾದ ಕರಾವಳಿ ಪ್ರದೇಶದಲ್ಲಿ ಅಪಘಾತಕ್ಕೀಡಾಗಿ ಹೊಸವರ್ಷದ ಸಂಭ್ರಮದಲ್ಲಿದ್ದ ಜನರಿಗೆ ಆಘಾತ ನೀಡಿತ್ತು. ಘಟನೆಯಲ್ಲಿ 213 ಜನ ಮೃತಪಟ್ಟಿದ್ದರು.

ಭಾರತದಲ್ಲಿ ನನ್ನ ಕೊನೆಯ ರಾತ್ರಿ...!

ವಿಮಾನ ಹತ್ತುವ ಮುನ್ನ ಬ್ರಿಟನ್ ಪ್ರಯಾಣಿಕನ ಭಾವುಕ ಪೋಸ್ಟ್



ಅಹಮದಾಬಾದ್, ಜೂ.12– ಲಂಡನ್ ಮೂಲದ ಜೇಮೀ ಮೀಕ್ ತಮ್ಮ ಗುಜರಾತ್ ಭೇಟಿ ಮುಗಿಸಿ, ಸ್ವದೇಶಕ್ಕೆ ಮರಳುವ ಮುನ್ನ ಭಾರತದಲ್ಲಿನ ತಮ್ಮ ಅನುಭವಗಳನ್ನು ಇನ್ಸ್ಟಾದಲ್ಲಿ ಪೋಸ್ಟ್ ಮಾಡಿದ್ದರು. ದುರಾದೃಷ್ಟವಶಾತ್ ಅವರಿದ್ದ ಏರ್ ಇಂಡಿಯಾ ವಿಮಾನ ಅಹಮದಾಬಾದ್‌ನಿಂದ ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ಪತನಗೊಂಡಿದೆ.

ಪೋಸ್ಟ್‌ನಲ್ಲಿ ಅವರು, ಭಾರತದಲ್ಲಿನ ತಮ್ಮ ಅದ್ಭುತ ಅನುಭವಗಳನ್ನು, ತಮ್ಮ ಗೆಳೆಯ ಫಿಯೊಂಗಲ್ ಗ್ರೀನ್‌ಲಾ–ಮೀಕ್ ಅವರೊಂದಿಗೆ ಹಂಚಿಕೊಂಡಿದ್ದರು. ಅಲ್ಲದೇ ಬುಧವಾರ ರಾತ್ರಿ ಇಂದು ಭಾರತದಲ್ಲಿ ನನ್ನ ಕೊನೆ ರಾತ್ರಿ ಎಂದು ಬೇಸರದಲ್ಲಿ ಹೇಳಿಕೊಂಡಿದ್ದರು.

ಜೇಮೀ ಸ್ವದೇಶಕ್ಕೆ ಮರಳಲು ಅಹಮದಾಬಾದ್ ವಿಮಾನ ನಿಲ್ದಾಣದಿಂದ ವಿಮಾನ ಹತ್ತುವ ಕೆಲವೇ ನಿಮಿಷಗಳ ಮುನ್ನ ಮತ್ತೊಂದು ವೀಡಿಯೊವನ್ನು ಪೋಸ್ಟ್ ಮಾಡಿದ್ದರು. ಅದರಲ್ಲಿ ಭಾರತಕ್ಕೆ ವಿದಾಯ ಎಂದು ಹೇಳಿಕೊಂಡಿದ್ದರು.

ಮದುವೆ ಬಳಿಕ ಮೊದಲ ಬಾರಿಗೆ ಗಂಡನ ಸೇರಲು ತೆರಳುತ್ತಿದ್ದ ನವ ವಧು!



ಅಹಮದಾಬಾದ್, ಜೂ.12– ಅಹಮದಾಬಾದ್‌ನಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾದ ಎಐ171 ವಿಮಾನದಲ್ಲಿ ತನ್ನ ಪತಿಯನ್ನು ಸೇರಲು ಲಂಡನ್‌ಗೆ ತೆರಳುತ್ತಿದ್ದ ಇತ್ತೀಚೆಗೆ ವಿವಾಹವಾಗಿದ್ದ ನವವಧು ಖುಷ್ಬೂ ರಾಜ್‌ಪುರೋಹಿತ್ ಕೂಡ ಇದ್ದರು.

ರಾಜಸ್ಥಾನದ ಬಲೋತಾರಾ ಜಿಲ್ಲೆಯ ಅರಬಾ ಗ್ರಾಮದ ನಿವಾಸಿ ಖುಷ್ಬೂ, ಈ ವರ್ಷದ ಜನವರಿಯಲ್ಲಿ ಮನ್ಫೂಲ್ ಸಿಂಗ್ ಅವರನ್ನು ವಿವಾಹವಾಗಿದ್ದರು. ಅವರ ಪತಿ ಲಂಡನ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಮದುವೆಯ ನಂತರ ಮೊದಲ ಬಾರಿಗೆ ಪತಿಯನ್ನು ಭೇಟಿಯಾಗಲು ಲಂಡನ್‌ಗೆ ತೆರಳುತ್ತಿದ್ದರು ಎಂದು ಹೇಳಲಾಗಿದೆ.

ಅರಬಾ ಗ್ರಾಮದ ಮದನ್ ಸಿಂಗ್ ರಾಜ್‌ಪುರೋಹಿತ್ ಎಂಬುವವರ ಪುತ್ರಿ ಖುಷ್ಬೂ. ಈ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ರಾಜಸ್ಥಾನದ 11 ಮಂದಿ ಪೈಕಿ ಷೆಫ್ ಆಗಿ ಕೆಲಸ ಮಾಡಲು ತೆರಳುತ್ತಿದ್ದ ಇಬ್ಬರು ಮತ್ತು ಮಾರ್ಬಲ್ ವ್ಯಾಪಾರಿಯ ಮಗ ಮತ್ತು ಮಗಳು ಸೇರಿದ್ದಾರೆ.

ಟ್ರಾಫಿಕ್‌ನಲ್ಲಿ 10 ನಿಮಿಷ ಸಿಲುಕಿ ಬಚಾವ್ ಆದ ಲಕ್ಕಿ ಮಹಿಳೆ!

ಅಹಮದಾಬಾದ್, ಜೂ.12– ಮಹಿಳೆಯೊಬ್ಬರು ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿದ್ದರಿಂದ ಏರ್ ಇಂಡಿಯಾ ವಿಮಾನ ಅಪಘಾತದಿಂದ ಪಾರಾಗಿದ್ದಾರೆ. ಅಹಮದಾಬಾದ್‌ನ ಭೂಮಿ ಚೌಹಾಣ್ ಲಂಡನ್‌ಗೆ ಹೊರಟಿದ್ದರು. ಆದರೆ, ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿದ್ದರಿಂದ ಅಹಮದಾಬಾದ್ ವಿಮಾನ ನಿಲ್ದಾಣವನ್ನು 10 ನಿಮಿಷ ತಡವಾಗಿ ತಲುಪಿದ್ದರು. ಇದರಿಂದ ಅವರಿಗೆ ವಿಮಾನ ಏರಲು ಅನುಮತಿ ನಿರಾಕರಿಸಲಾಗಿತ್ತು. ಇದಾದ ಕೆಲವೇ ನಿಮಿಷಗಳಲ್ಲಿ ವಿಮಾನ ಅಪಘಾತದ ಸುದ್ದಿ ಬಂದಿದ್ದು, ಮಹಿಳೆ, ಮಾಧ್ಯಮಗಳ ಮುಂದೆ ಗದ್ಗದಿತರಾಗಿದ್ದಾರೆ.



ಈ ವಿಚಾರ ಕೇಳಿ ನನಗೆ ಭಯವಾಗಿ ಕೈಕಾಲುಗಳು ನಡುಗಲು ಪ್ರಾರಂಭಿಸಿದವು. ನಾನು ತುಂಬಾ ಹೊತ್ತು ಅದೇ ಆಘಾತದಲ್ಲಿದ್ದೆ. ಕೇವಲ 10 ನಿಮಿಷ ತಡವಾಗಿ ಬಂದಿದ್ದರಿಂದ ವಿಮಾನ ತಪ್ಪಿಸಿಕೊಂಡು ಬದುಕುಳಿದೆ. ನನ್ನ ನೆಚ್ಚಿನ ದೇವರಾದ ಗಣಪತಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಗಣಪತಿ ಬಪ್ಪಾ ನನ್ನನ್ನು ಉಳಿಸಿದ ಎಂದು ಹೇಳಿಕೊಂಡಿದ್ದಾರೆ. ಭೂಮಿ ತಮ್ಮ ಪತಿಯೊಂದಿಗೆ ಲಂಡನ್‌ನಲ್ಲಿ ವಾಸವಾಗಿದ್ದರು. ರಜೆ ಇದ್ದ ಕಾರಣ ಭಾರತಕ್ಕೆ ಬಂದಿದ್ದರು. ಭೂಮಿ ಎರಡು ವರ್ಷಗಳ ಹಿಂದೆ ಲಂಡನ್‌ಗೆ ತೆರಳಿದ್ದರು. ಇದಾದ ಬಳಿಕ ಮೊದಲ ಬಾರಿಗೆ ಅವರು ಭಾರತಕ್ಕೆ ಬಂದಿದ್ದರು.

ನಕ್ಕರೆ ಅದೇ ಸ್ವರ್ಗ

ಕೆಲಸದಾಕೆ : ಅಮ್ಮಾವರೇ ನನಗೆ ಹುಚ್ಚಾಸ್ಪತ್ರೆಯಲ್ಲಿ ಕೆಲಸ ಸಿಕ್ಕಿದೆ.
ಮನೆಯೊಡತಿ : ಅಲ್ಲ ಕಣೇ, ನಿನಗೆ ಅಲ್ಲಿ ಕೆಲಸ ಮಾಡಲು ನಿನಗೇನು ಅನುಭವವಿದೆ.
ಕೆಲಸದಾಕೆ : ಏನ್ ಅಮ್ಮಾವರೇ ಹಾಗಂತೀರಿ... ನಿಮ್ಮನೇಲಿ 10 ವರ್ಷದಿಂದ ಕೆಲಸ ಮಾಡ್ತೀವ್ನಿ!

ಮೈಸೂರು ಮಿತ್ರ

ಶುಕ್ರವಾರ, 13 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸಣ್ಣ ಸಣ್ಣ ತೂತುಗಳು ಕೂಡ ದೊಡ್ಡ ದೋಣಿ ಮುಳುಗಿಸಬಹುದು. ಹಾಗೆಯೇ ಚಿಕ್ಕ ಚಿಕ್ಕ ಮಾತುಗಳು ಕೂಡ ದೊಡ್ಡ ಸಂಬಂಧಗಳನ್ನೇ ದೂರ ಮಾಡಬಲ್ಲದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಗ್ಗದ ಆಸೆಗೆ ಹೋಗಿ ಮುಗ್ಗಳ ಜೋಳ ತಂದ

ನಿಮ್ಮ ಪತ್ರಗಳು

ಮೈಸೂರಿನ ಆನೆಗುಡಿ ರಸ್ತೆ ಸ್ವಚ್ಛಗೊಳಿಸಿ

ಮಾನ್ಯರೆ,



ಮೈಸೂರಿನ ಈದ್ಗಾ ಮೈದಾನದಿಂದ ಆನೆಗುಡಿ ರಸ್ತೆ ಕಸದ ರಾಶಿಯಿಂದ ತುಂಬಿದೆ. ಇಲ್ಲಿ ಮೈಸೂರು ಮಹಾನಗರ ಪಾಲಿಕೆ ಪೌರ ಕಾರ್ಮಿಕ ಸಿಬ್ಬಂದಿ ಯಾವುದೇ ನಿರ್ವಹಣೆ ಮಾಡುತ್ತಿಲ್ಲ. ಈ ರಸ್ತೆಯಲ್ಲಿ ಕಸ ಸ್ವಚ್ಛಗೊಳಿಸಿ ಎಷ್ಟು ದಿನಗಳಾಗಿದೆಯೋ ತಿಳಿಯುತ್ತಿಲ್ಲ. ಸೊಳ್ಳೆಗಳ ಕಾಟದಿಂದ ಇಲ್ಲಿನ ನಿವಾಸಿಗಳು ವಾಸಿಸಲು ತುಂಬಾ ಕಷ್ಟವಾಗಿದ್ದು, ರೋಗ ಹರಡುವ ಭೀತಿಯಲ್ಲಿದ್ದಾರೆ. ಅಲ್ಲದೆ ದುರ್ವಾಸನೆ ಕೂಡಾ ಹೇಳತೀರದಾಗಿದೆ. ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ವಯಸ್ಸಾದವರು, ಮಕ್ಕಳು ಡೆಂಗ್ಯೂ ಇನ್ನಿತರೆ ರೋಗ ರುಜಿನಗಳಿಗೆ ತುತ್ತಾಗುವ ಭೀತಿಯುಂಟಾಗಿದೆ. ಕೂಡಲೇ ನಗರ ಪಾಲಿಕೆ ಸಿಬ್ಬಂದಿ ರಸ್ತೆ ಸ್ವಚ್ಛಗೊಳಿಸಿ ನಿವಾಸಿಗಳು ನೆಮ್ಮದಿಯಿಂದ ವಾಸಿಸಲು ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ಎಂ. ಪ್ರತಿಭಾ, ಮೈಸೂರು.


ಸರಿಯಾಗಿ ಕೆಲಸ ಮಾಡದ ಪಾಲಿಕೆ?



ಮಾನ್ಯರೆ,

ಮೈಸೂರಿನ ಚಾಮರಾಜಪುರಂ ಬಿಜೆಪಿ ಕಚೇರಿಯ ಹಿಂಭಾಗ ಒಳಚರಂಡಿ ಕೊಳವೆ ಕಟ್ಟಿಕೊಂಡಿದ್ದನ್ನು ಪರಿಶೀಲಿಸಲು ತೆಗೆದಿದ್ದ ಗುಂಡಿಯನ್ನು, ಹದಿನೈದು ದಿವಸಗಳ ನಂತರ ಬುಧವಾರ (ಜೂ.11) ಮುಚ್ಚಿದ ಪಾಲಿಕೆಯ ಸಿಬ್ಬಂದಿ ಎಷ್ಟರಮಟ್ಟಿಗೆ ಗುಂಡಿ ಮುಚ್ಚಿದಾರೆ ನೋಡಿ? ಯಾರಾದರೂ ವಾಹನ ಚಾಲಕರು ಕಣ್ತಪ್ಪಿ ವಾಹನವನ್ನು ಗುಂಡಿಗಿಳಿಸಿದರೆ ಆಗುವ ಅನಾಹುತ ಪ್ರಾಣಹಾನಿಯಲ್ಲೂ ಕೊನೆಗೊಳ್ಳಬಹುದು. ಪಾಲಿಕೆಯ ಸಿಬ್ಬಂದಿ ಹಳ್ಳವನ್ನು ಸರಿಯಾಗಿ ಮುಚ್ಚಲಿ. **–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.**

ಇದ್ದು ಸತ್ತಂತೆ ಇರುವ ಬಸ್ ಶೆಲ್ಟರ್



ಮಾನ್ಯರೆ,

ಮೈಸೂರು ನಗರ ಪಾಲಿಕೆ 56ನೇ ವಾರ್ಡಿನ ಅಶೋಕಪುರಂ, ಕೃಷ್ಣಮೂರ್ತಿಪುರಂ ಜನತೆಯ ಅನುಕೂಲಕ್ಕಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರ ಬಸ್ ಶೆಲ್ಟರ್ ನಿರ್ಮಿಸಲಾಗಿತ್ತು. ಆದರೆ ಅದು ಭಿಕ್ಷೆ ಬೇಡುವವರ, ಹಸು, ಕರು, ಕುರಿ, ಕೋಳಿಗಳ ತಂಗುದಾಣವಾಗಿದೆ. ಇದರಿಂದ ಯಾವುದೇ ಪ್ರಯೋಜನವಿಲ್ಲದಂತಾಗಿದೆ. ಹಿಂದೆ ರೂಟ್ ನಂಬರ್ 61, 62, 129, 130 ಬಸ್‌ಗಳು ಸಂಚರಿಸುತ್ತಿದ್ದವು. ಇದನ್ನು ಕೂಡ ಇದ್ದಕ್ಕಿದ್ದಂತೆ ನಿಲ್ಲಿಸಿದ್ದಾರೆ. ಊರಿನ ಮುಖಂಡರು, ಹಿರಿಯರು, ವಿದ್ಯಾರ್ಥಿಗಳು, ಜನಪ್ರತಿನಿಧಿಗಳು ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಜೊತೆ ಚರ್ಚಿಸಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಈಗಲಾದರೂ ಇದಕ್ಕೆ ಸಂಬಂಧಿಸಿದವರು ಕೂಡಲೇ ಕ್ರಮ ಕೈಗೊಳ್ಳಿ ಅಥವಾ ಈ ಬಸ್ ಶೆಲ್ಟರ್ ತೆರವುಗೊಳಿಸುವಂತೆ ಸಾರಿಗೆ ಅಧಿಕಾರಿಗಳಲ್ಲಿ ಮನವಿ.

–ಶಿವಣ್ಣ, ಪ್ರಧಾನ ಕಾರ್ಯದರ್ಶಿ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು.

ಗಿಡ ನೆಟ್ಟರಷ್ಟೇ ಸಾಲದು ಪೋಷಣೆ ಮಾಡಬೇಕಿದೆ

ಮಾನ್ಯರೆ,

ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆ ನಿಮಿತ್ತ ರಾಜ್ಯದ ಶಾಲಾ ಕಾಲೇಜು, ಸರ್ಕಾರಿ ಕಚೇರಿಗಳು, ಸಂಘ ಸಂಸ್ಥೆಗಳು ಸೇರಿದಂತೆ ವಿವಿಧೆಡೆ ಹಲವಾರು ಮಂದಿ ಸಸಿಗಳನ್ನು ನೆಟ್ಟು ಸೆಲ್ಫಿಯೊಂದಿಗೆ ಸಂಭ್ರಮಾಚರಣೆಯನ್ನು ಮಾಡಿದ್ದಾರೆ. ಪರಿಸರ ದಿನದಂದು ಸಸಿಗಳನ್ನು ನೆಟ್ಟು ಅವುಗಳ ಜೊತೆ ಫೋಟೋ, ಸೆಲ್ಫಿ ತೆಗೆಸಿಕೊಂಡು ವಾಟ್ಸಪ್ ಸ್ಟೇಟಸ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಅವುಗಳನ್ನು ಅಪ್ಲೋಡ್ ಮಾಡುವುದು ಎಲ್ಲವೂ ಸಂತೋಷಕರ ವಿಚಾರವೇ ಆಗಿದೆ.

ಆದರೆ ಕೇವಲ ಸೆಲ್ಫಿ ಹಾಗೂ ಫೋಟೋಗೋಸ್ಕರ ಸಸಿಗಳನ್ನು ನೆಡುವ, ಪ್ರಚಾರ ಪಡೆಯುವ ಗೀಳು ಹಲವರಲ್ಲಿದೆ. ಕೆಲವರು ಗಿಡ ನೆಟ್ಟು ವಾರನೆಯ ದಿನಕ್ಕೆ ಅದನ್ನು ಮರೆತು ಬಿಡುತ್ತಾರೆ. ಗಿಡ ನೆಡುವುದು ಕೇವಲ ಪರಿಸರ ದಿನಾಚರಣೆಗಷ್ಟೇ ಸೀಮಿತವಾಗಿರದೆ, ತಾವು ನೆಟ್ಟ ಗಿಡಕ್ಕೆ ಒಂದಷ್ಟು ತಿಂಗಳು ನೀರೆರೆಯುವ, ಪೋಷಿಸಿ ಕಾಪಾಡುವ ಪ್ರಕ್ರಿಯೆಯನ್ನು ನಿರಂತರವಾಗಿ ಮಾಡಿದ್ದೇ ಆದರೆ ತಾವು ಪರಿಸರ ದಿನದಂದು ಗಿಡ ನೆಟ್ಟಿದ್ದಕ್ಕೂ ಒಂದು ಅರ್ಥ ಕಲ್ಪಿಸಿದಂತೆ. ಗಿಡ ನೆಡುವ ಸಂಭ್ರಮದಲ್ಲಿ ಇದ್ದ ಹುಮ್ಮಸ್ಸು, ಸಡಗರ, ಸಂಭ್ರಮವನ್ನು, ಗಿಡದ ಬೆಳವಣಿಗೆಯ ಉದ್ದಕ್ಕೂ ತೋರುವುದು ಉತ್ತಮ. ಏಕೆಂದರೆ ಪ್ರತಿಯೊಂದು ಗಿಡಕ್ಕೂ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇದೆ. ಇದನ್ನು ಗಿಡ ನೆಟ್ಟ ವ್ಯಕ್ತಿಗಳು ಅರ್ಥ ಮಾಡಿಕೊಂಡು ಒಂದಷ್ಟು ತಿಂಗಳ ಮಟ್ಟಿಗಾದರೂ ಗಿಡಗಳನ್ನು ಆರೈಕೆ ಮಾಡಿದರೆ ಪ್ರತಿ ವರ್ಷ ಜೂನ್ ಐದರಂದು ನಾವು ಮಾಡುವ ವಿಶ್ವ ಪರಿಸರ ದಿನಾಚರಣೆಯ ಆಚರಣೆ ಸಾರ್ಥಕವಾದಂತೆ! **–ಹರಳ ಹಳ್ಳಿಪುಟ್ಟರಾಜು, ಪಾಂಡವಪುರ.**



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಯಾರಿಗೆ ಯಾವುದು ಬೇಕೋ ಅದು ಅವರ ಬಳಿ ಇರುವುದಿಲ್ಲ!!

ಮನುಷ್ಯನ ಜೀವನದಲ್ಲಿ ಈ ಬೇಕುಗಳ ಬೇಡಿಕೆ ಎಂದಿಗೂ ಮುಗಿಯುವುದಿಲ್ಲ. ಒಂದು ದೊರೆತರೆ ಮತ್ತೊಂದು ಬೇಕು... ಅದು ಬೇಕು... ಇದು ಬೇಕು... ಬೇಕು... ಬೇಕು... ಬೇಕು... ಇಡೀ ಜೀವನ ನಮಗೆ ನೆಮ್ಮದಿಯಿಲ್ಲದಂತೆ ಮಾಡಿಬಿಡುತ್ತದೆ. ಒಂದು ಹಂತದಲ್ಲಿ ನನಗಿರುವುದು, ನನಗೆ ದೊರಕಿರುವುದು, ನನ್ನ ಬಳಿ ಇರುವುದು ಸಾಕು ಎಂದು ಎನಿಸಿದರೆ ಜೀವನದಲ್ಲಿ ನೆಮ್ಮದಿ ಖಚಿತ. ಆದರೆ, ಅದು ಅಷ್ಟು ಸುಲಭವಲ್ಲ. ಒಂದಕ್ಕೆ ಆಸೆ ಪಡುವ ಮನಸ್ಸು ಅದು ದೊರಕಿದಾಗ ಇನ್ನೊಂದು ಇದ್ದಿದ್ದರೆ ಚೆನ್ನಾಗಿತ್ತು ಎನಿಸುತ್ತದೆ. ಅದೂ ದೊರಕಿದರೆ ಮನಸ್ಸು ಮತ್ತೊಂದರ ಕಡೆಗೆ ಯೋಚಿಸುತ್ತದೆ. ಇದರಿಂದಾಗಿ ಜೀವನಪೂರ್ತಿ ಒಂದು ರೀತಿಯ ಕೊರಗು ಉಳಿದೇ ಇರುತ್ತದೆ. ಜೀವನವೂ ಹಾಗೆಯೇ ನಮ್ಮ ದುರಾಸೆಗೆ ಬೇಕೆನಿಸಿದ್ದೆಲ್ಲಾ ನಮಗೆ ಸಿಗದಂತೆ ಮಾಡಿ ಮಸ್ತ್ ಮಜಾ ನೋಡುತ್ತದೆ.

ನಮಗೆ ಸಾಮಾನ್ಯವಾಗಿ ಹಣವೊಂದಿದ್ದರೆ ಎಲ್ಲವೂ ದೊರಕುತ್ತದೆ ಎಂಬ ಭಾವನೆ ಸಹಜವಾಗೇ ಇರುತ್ತದೆ. ಆದರೆ ಯಾವುದಾದರೂ ಒಂದು ಹಂತದಲ್ಲಿ ಹಣದಿಂದ ಎಲ್ಲವೂ ಸಿಗುವುದಿಲ್ಲ ಎಂಬುದೂ ಮನವರಿಕೆಯಾಗುತ್ತದೆ. ಆದರೆ, ಅಷ್ಟರಲ್ಲಿ ಹಣ ಸಂಪಾದಿಸಲು ಜೀವನದ ಬಹುಪಾಲು ಸಮಯವನ್ನು ಕಳೆದುಕೊಂಡಿರುತ್ತೇವೆ. ಇತ್ತೀಚೆಗೆ ಒಬ್ಬ ಅಧಿಕಾರಿ ಹೇಳಿದ ಮಾತೆಂದರೆ ನನಗೆ ನಿವೃತ್ತಿಯಾಗುವ ಸಮಯದಲ್ಲಿ ದೊಡ್ಡ ಹುದ್ದೆಗೆ ಪದೋನ್ನತಿ ದೊರಕಿತು. ಅದರ ಸವಿ ಸವಿಯುವುದರಲ್ಲೇ ನಿವೃತ್ತಿಯಾಗಿ ಹೋಯಿತು ಎಂದು. ಆದರೆ ಹುದ್ದೆಗಳು ಇರುವುದು ಸವಿಯುವುದಕ್ಕಲ್ಲ, ಬದಲಾಗಿ ಜವಾಬ್ದಾರಿಯುತವಾಗಿ ಕೆಲಸ ಮಾಡಲು ಎಂದು ಅರಿವಾಗಬೇಕು. ಈ ಹಿಂದೆ ಒಬ್ಬ ವ್ಯಕ್ತಿಯನ್ನು ಒಂದು ಸಂಸ್ಥೆಗೆ ನಾಮನಿರ್ದೇಶನ ಮಾಡಲಾಯಿತು. ಆಗವರಿಗೆ ಸುಮಾರು 65 ರ ಪ್ರಾಯ. ಅವರು ಹೇಳಿದ್ದೂ ಇದೇ ಧಾಟಿಯಲ್ಲೇ. ನನಗೆ ಯೌವನ ಇರುವಾಗ ಈ ಹುದ್ದೆ ಸಿಕ್ಕಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಈಗ ಆರೋಗ್ಯ ಕಾಪಾಡಿಕೊಳ್ಳುವುದೇ ಕಷ್ಟವಾಗಿರುವಾಗ ಈ ಹುದ್ದೆಯನ್ನು ಹೇಗೆ ಸಂಭ್ರಮಿಸುವುದು ಎಂದು. ಹೀಗೆ ಒಂದು ದೊರಕಿದಾಗಲೂ ಅದನ್ನು ಅನುಭವಿಸುವ ಮನಸ್ಸು ಇಲ್ಲದಿದ್ದಾಗ ಕೊರಗು ಹಾಗೇ ಉಳಿಯುತ್ತದೆ.

ಇದೊಂದು ವಿಪರ್ಯಾಸ. ನಮ್ಮ ಬಳಿ ಇರುವುದಕ್ಕಿಂತ ನಾವು ಮತ್ತೊಂದನ್ನೇ ಬಯಸುತ್ತೇವೆ. ಅವಿವಾಹಿತರನ್ನು ಕೇಳಿದಾಗ ತನಗೆ ಮದುವೆಯಾಗಿ, ಉತ್ತಮ ಮಡದಿ ದೊರಕಿದರೆ ಜೀವನ ಸುಂದರ ಎನ್ನುತ್ತಾರೆ. ಆದರೆ ಎಷ್ಟೋ ಜನರು ಮದುವೆಯ ನಂತರ, ವಿಚ್ಛೇದನದ ಬಗ್ಗೆ ಆಲೋಚಿಸುತ್ತಾರೆ. ಜೀವನ ಎಂದರೆ ಪಾಲಿಗೆ ಬಂದದ್ದು ಪಂಚಾಮೃತ ಎಂದು ಭಾವಿಸಿದಾಗ ಅದರ ಸವಿ ಸಾಧ್ಯ. ಈ ಹಿಂದೆ ಮದುವೆ ಎಂದರೆ ಹುಡುಗ ಹಾಗೂ ಹುಡುಗಿ ಪರಸ್ಪರ ಮುಖಾಮುಖಿ ಮದುವೆಯ ಮನೆಯಲ್ಲಿಯೇ ಹೆಣ್ಣು ನೋಡುವ ಶಾಸ್ತ್ರದಲ್ಲಿ ನಾಮಕಾವಸ್ತೆ ಅಷ್ಟೆ. ಅಲ್ಲಿಯವರೆಗೆ ಒಂದು ರೀತಿಯ ಕೌತುಕ ಅವರಲ್ಲಿ ಮನೆ ಮಾಡಿರುತ್ತಿತ್ತು.

ಮದುವೆಯ ನಂತರ ಹೊಂದಾಣಿಕೆಗೆ ಹಿರಿಯರು ಸಹಕರಿಸುತ್ತಿದ್ದರು. ಆದರೆ ಇಂದು ಹಿರಿಯರ ಒಪ್ಪಿಗೆ ಬೇಕು ಎಂಬುದನ್ನು ಪಕ್ಕಕ್ಕಿರಿಸಿ, ಪರಸ್ಪರ ಪ್ರೀತಿಸಿ ಮದುವೆಯಾಗುತ್ತಾರೆ. ಅಲ್ಲಿ 'ಪ್ರೀತಿ ಎಂದರೆ ಏನು' ಎಂಬುದೇ ಗೊತ್ತಿಲ್ಲದ, ಕೇವಲ ದೈಹಿಕ ಆಸಕ್ತಿಯದ್ದಾಗಿರುತ್ತದೆ. ಅದು ಕಡಿಮೆಯಾದಂತೆ ಒಬ್ಬರಲ್ಲಿ ಮತ್ತೊಬ್ಬರಿಗೆ ತಪ್ಪುಗಳೇ ದೊಡ್ಡದಾಗಿ ಕಾಣಸಿಗುತ್ತದೆ. ಇದು ಘರ್ಷಣೆಗೆ ಕಾರಣವಾಗುತ್ತಾ ವಿವಾಹ ವಿಚ್ಛೇದನದವರೆಗೆ ಹೋಗುತ್ತದೆ. ಈ ಹಿಂದೆ ವಿಚ್ಛೇದನೆಯ ಬಗ್ಗೆ ನಾವು ಕೇಳುತ್ತಿದ್ದುದು ಅಪರೂಪ. ಈಗ ಮದುವೆ ಎಂದರೆ ಯಾವಾಗ ವಿಚ್ಛೇದನೆಗೆ ಮನಸ್ಸು ಮಾಡುತ್ತಾರೋ ಎಂದು ಅಲೋಚಿಸುವಂತಹ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಅವಿವಾಹಿತರು ಈ ಬಗ್ಗೆ ಗಮನಿಸುವುದಿಲ್ಲ. ಅವರಿಗೆ ಮದುವೆಯಾದರೆ ಸಾಕು ಎಂಬ ಧಾವಂತವಿರುತ್ತದೆ.



> “ ನಮಗೆ ಸಾಮಾನ್ಯವಾಗಿ ಹಣವೊಂದಿದ್ದರೆ ಎಲ್ಲವೂ ದೊರಕುತ್ತದೆ ಎಂಬ ಭಾವನೆ ಸಹಜವಾಗೇ ಇರುತ್ತದೆ. ಆದರೆ ಯಾವುದಾದರೂ ಒಂದು ಹಂತದಲ್ಲಿ ಹಣದಿಂದ ಎಲ್ಲವೂ ಸಿಗುವುದಿಲ್ಲ ಎಂಬುದೂ ಮನವರಿಕೆಯಾಗುತ್ತದೆ. ಆದರೆ, ಅಷ್ಟರಲ್ಲಿ ಹಣ ಸಂಪಾದಿಸಲು ಜೀವನದ ಬಹುಪಾಲು ಸಮಯವನ್ನು ಕಳೆದುಕೊಂಡಿರುತ್ತೇವೆ. ಇತ್ತೀಚೆಗೆ ಒಬ್ಬ ಅಧಿಕಾರಿ ಹೇಳಿದ ಮಾತೆಂದರೆ ನನಗೆ ನಿವೃತ್ತಿಯಾಗುವ ಸಮಯದಲ್ಲಿ ದೊಡ್ಡ ಹುದ್ದೆಗೆ ಪದೋನ್ನತಿ ದೊರಕಿತು. ಅದರ ಸವಿ ಸವಿಯುವುದರಲ್ಲೇ ನಿವೃತ್ತಿಯಾಗಿ ಹೋಯಿತು ಎಂದು. ಆದರೆ ಹುದ್ದೆಗಳು ಇರುವುದು ಸವಿಯುವುದಕ್ಕಲ್ಲ, ಬದಲಾಗಿ ಜವಾಬ್ದಾರಿಯುತವಾಗಿ ಕೆಲಸ ಮಾಡಲು ಎಂದು ಅರಿವಾಗಬೇಕು.

ವಿಚ್ಛೇದನೆ ಬಯಸಿರುವವರಿಗೆ ಈ ಅವಿವಾಹಿತರು ಸಿಕ್ಕಾಗ ನೀನೇ ಪುಣ್ಯವಂತ, ನಿನಗೆ ಮದುವೆ ಆಗಿಲ್ಲ! ಎಂದು ಅದೇನೋ ನರಕದಲ್ಲಿರುವವರಂತೆ ಹೇಳುತ್ತಾರೆ.

ಮತ್ತೊಂದೆಡೆ ಸಮಾಜದಲ್ಲಿನ ಅಪರಿಚಿತರೂ ತಾವು ಜನಪ್ರಿಯ ವ್ಯಕ್ತಿ ಆಗಬೇಕೆಂದು ಬಯಸುತ್ತಾರೆ. ಅದೂ ಆದಷ್ಟೂ ಬೇಗ. ಜನಪ್ರಿಯ ವ್ಯಕ್ತಿ ಎಂದರೆ ಜನರು ತಮ್ಮನ್ನು ಎಲ್ಲಾ ಸಭೆ, ಸಮಾರಂಭಗಳಿಗೆ ಆಹ್ವಾನಿಸಬೇಕು, ತಮ್ಮನ್ನು ಹಾಡಿ ಹೊಗಳಬೇಕು, ಸನ್ಮಾನಿಸಬೇಕು ಎಂದು ಬಯಸುತ್ತಾರೆ. ಆದರೆ ಹಾಗೆ ದಿಢೀರನೇ ಜನಪ್ರಿಯತೆಗಳಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಪೂರಕವಾದ ಶ್ರಮ ಬೇಕಾಗುತ್ತದೆ. ಅದು ಹಣ ಸಂಪಾದನೆ ಇರಲಿ, ಕಲೆಯ ಗಳಿಕೆಯಾಗಲೀ ಆಗಬೇಕಾದರೆ ಸತತ ಪ್ರಯತ್ನಗಳು ಬೇಕಾಗುತ್ತದೆ. ಶ್ರಮವಿಲ್ಲದೆ ತಿಂದಿದ್ದೂ ಅರಗುವುದಿಲ್ಲ ಎಂಬುದನ್ನು ಮನಗಾಣಬೇಕು. ಇದು ಒಂದು ಭಾಗವಾದರೆ ಹಾಗೆ ಜನಪ್ರಿಯರಾದವರು ನೆಮ್ಮದಿಯಾಗಿರುವರೇ! ಎಂದು ನೋಡಿದರೆ, ಬಹುತೇಕರು ಜನರ ಮಧ್ಯೆ ಇರುವುದಕ್ಕಿಂತ ಏಕಾಂತ ಬಯಸುತ್ತಾರೆ. ತಮ್ಮ ಸುತ್ತಾಮುತ್ತಾ ಯಾರೂ ಇಲ್ಲದಿದ್ದರೆ ಅವರು ಸಂತೋಷವಾಗಿರುತ್ತಾರೆ. ನನಗೆ ಪರಿಚಿತರಿರುವ ಒಬ್ಬ ಜನಪ್ರಿಯ ವ್ಯಕ್ತಿ ಹೇಳಿದ್ದು, ನಾನು ಸಾರ್ವಜನಿಕವಾಗಿ ಕಾಣಿಸಿಕೊಂಡರೆ ಜನರು ಸುತ್ತುವರಿಯುತ್ತಾರೆ. ಈಗಂತೂ ಈ ಸೆಲ್ಫಿ ಹುಚ್ಚಿನಿಂದಾಗಿ ನಾವು ಮುಂದೆ ಹೋಗಲೂ ಬಿಡುವುದಿಲ್ಲ. ಎಷ್ಟೋ ಸಲ ಹಸಿವಾಗಿ ಏನಾದರೂ ತಿನ್ನೋಣ ಎಂದರೂ ಇವರು ಬಿಡುವುದಿಲ್ಲ. ಕೊನೆಗೆ ಮಲ–ಮೂತ್ರ ವಿಸರ್ಜನೆಗೂ ಅವಕಾಶ ಕೊಡುವುದಿಲ್ಲ. ನಮಗೆ ಜನರ ನಡುವೆ ಇರುವುದಕ್ಕಿಂತ ಎಲ್ಲಾದರೂ ಏಕಾಂತವಾಗಿದ್ದರೆ ಸಾಕು ಎನಿಸುತ್ತದೆ.

ಇದು ನಿಜವೂ ಹೌದು. ಅವರು ಯಾವುದಾದರೂ ಸಾರ್ವಜನಿಕ ಕಾರ್ಯಕ್ರಮಕ್ಕೆ ತಮ್ಮ ಕುಟುಂಬದವರನ್ನು ಕರೆದುಕೊಂಡು ಹೋದರೆ, ಕಾರ್ಯಕ್ರಮದ ನಂತರ ಕುಟುಂಬದವರನ್ನು ಸೇರಬೇಕಾದರೆ ಹೆಣಗಾಡಬೇಕಾಗುತ್ತದೆ. ಅವರು ಹೇಳುತ್ತಿದ್ದುದು, ನಾನು ದೈವಭಕ್ತ. ಯಾವುದಾದರೂ ದೇವಸ್ಥಾನಕ್ಕೆ ಹೋದರೆ ಅಲ್ಲಿ ಭಕ್ತಿಯಿಂದ ದೇವರಲ್ಲಿ ಪ್ರಾರ್ಥಿಸಲು ಅಭಿಮಾನಿಗಳು ಬಿಡುವುದಿಲ್ಲ. ನನಗೆ ಸಾಕಾಗಿ ಹೋಗಿದೆ. ಇಲ್ಲೂ ನಾವು ವೈರುಧ್ಯ ಕಾಣುತ್ತೇವೆ. ಒಬ್ಬರಿಗೆ ಜನಪ್ರಿಯತೆ ಬೇಕು, ಜನಪ್ರಿಯರಾದವರಿಗೆ ಏಕಾಂತ ಬೇಕು.

ಮೊದಲಿನಿಂದಲೂ ಹಳ್ಳಿಗಳಲ್ಲಿ ಬೆಳೆದ ಹುಡುಗರು ಓದಿಗಾಗಿಯೋ, ಕೆಲಸಕ್ಕಾಗಿಯೋ ಪಟ್ಟಣ ಸೇರುತ್ತಾರೆ. ಆರಂಭದಲ್ಲಿ ಅವರಿಗೆ ಪಟ್ಟಣದ ಥಳಕು–ಬಳಕಿನ ಜೀವನ ಸುಂದರ ಎನಿಸುತ್ತದೆ. ಆದರೆ ಕ್ರಮೇಣ ಇದು ಬರೀ ಬೂಟಾಟಿಕೆ. ನಮ್ಮ ಊರು ಹಾಗಿಲ್ಲ. ಅಲ್ಲಿ ನೈಸರ್ಗಿಕತೆ ಇದೆ, ಅಲ್ಲಿ ನೆಮ್ಮದಿಯ ವಾತಾವರಣವಿದೆ. ನಾನು ಮತ್ತೆ ಅಲ್ಲಿಗೇ ಹೋಗಬೇಕು ಎಂದು ಹಂಬಲಿಸುತ್ತಾರೆ. ಇತ್ತೀಚೆಗೆ ಈ ಐಟಿ/ಬಿಟಿ ಯುವಕರು ಈ ಮನೋಭಾವ ತೋರುತ್ತಿರುವುದು ಅಚ್ಚರಿ ತರುತ್ತಿದೆ. ಕೈತುಂಬಾ ಸಂಪಾದನೆ ಇದ್ದರೂ ಅದನ್ನು ತ್ಯಜಿಸಿ, ಹಳ್ಳಿಯಲ್ಲಿ ವ್ಯವಸಾಯಕ್ಕೆ ಇಳಿಯುತ್ತಿರುವುದದನ್ನು ಕಾಣಬಹುದು. ಒಂದು ರೀತಿ ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಅವರ ಜೀವನ. ಆದರೆ ಇಲ್ಲೂ ಒಂದಷ್ಟು ತೊಡಕುಗಳಿವೆ. ಅವರು ಪಟ್ಟಣದ ಹುಡುಗಿಯನ್ನು ಮದುವೆಯಾಗಿದ್ದರೆ, ಪತ್ನಿಯನ್ನು ಒಪ್ಪಿಸಿ ಹಳ್ಳಿಗೆ ಕರೆದುಕೊಂಡು ಹೋಗುವುದು ಅಷ್ಟು ಸುಲಭವಲ್ಲ. ಹೀಗೆ ಕೈತುಂಬಾ ಹಣವಿದ್ದರೂ ನೆಮ್ಮದಿ ಕಾಣದ ಬದುಕು ಸಾಗಿಸುತ್ತಿರುವವರು ನಮಗೆ ಎಲ್ಲೆಲ್ಲೂ ಕಂಡುಬರುತ್ತಾರೆ.

ಇಂದು ಬಡವರಿಗೆ ಹೇಗಾದರೂ ಹಣ ಸಂಪಾದಿಸಿ ವೈಭವದ ಜೀವನ ನಡೆಸಬೇಕು ಎಂಬ ಹಂಬಲ. ಆದರೆ ಹಣ ಸಂಪಾದನೆ ಅಷ್ಟು ಸುಲಭವಲ್ಲ. ಆದರೂ ಮನಸ್ಸಿನಲ್ಲಿ ದಿಢೀರ್ ಶ್ರೀಮಂತರಾಗುವ ಬಯಕೆ ಅವರದ್ದು. ಹಣವೂ ಶ್ರಮವನ್ನೇ ಅವಲಂಭಿಸಿರುತ್ತದೆ. ಆದರೆ ತಕ್ಷಣ ಶ್ರೀಮಂತರಾಗಲು ಅವರಿಗೆ ಅಡ್ಡದಾರಿ ಕಾಣುತ್ತದೆ. ಅಂತಹವರೇ ಈಗ ಕೊಲೆ, ಸುಲಿಗೆ, ಕಳ್ಳತನಕ್ಕೆ ಇಳಿಯುತ್ತಾರೆ. ಹಾಗಾದರೆ ಶ್ರೀಮಂತಿಕೆ ಇರುವವರು ನೆಮ್ಮದಿಯಾಗಿ ಇದ್ದಾರೆಯೇ? ಹಣ ಹಾಗೂ ಆಸ್ತಿ ಹೆಚ್ಚು ಸಂಪಾದಿಸಿದಷ್ಟೂ ಅದನ್ನು ಜೋಪಾನ ಮಾಡಿಕೊಳ್ಳುವುದರಲ್ಲಿ ನೆಮ್ಮದಿ ಕಳೆದುಕೊಳ್ಳುತ್ತಾರೆ. ಇದ್ದುದನ್ನು ಕೊಟ್ಟು ನೆಮ್ಮದಿಯಾಗಬಹುದಾದರೂ ಹಾಗೆ ಮಾಡದೆ ಪರಿತಪಿಸುತ್ತಾರೆ. ಇತ್ತೀಚೆಗೆ ನಿಧನರಾದ ಪ್ರಸಿದ್ಧ ಕವಿ ಎಚ್.ಎಸ್.ವೆಂಕಟೇಶಮೂರ್ತಿಯವರ ಕವನ 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ, ಮಳೆಸುರಿಸಿ ಹಗುರಾದ ಮುಗಿಲಿನಂತೆ' ಎಂಬುದು ಪದೇಪದೆ ನೆನಪಾಗುತ್ತದೆ. ಮಳೆ ತುಂಬಿದ ಮೋಡಗಳು ಯಾವಾಗಲೂ ಭಾರವೇ. ಅವುಗಳ ಸಂಚಲನ ನಿಧಾನ. ಹೊರೆ ಹೊತ್ತು ಸುಸ್ತಾಗಿ ಸಾಗಿದಂತೆ. ಆದರೆ ಒಮ್ಮೆ ಮಳೆ ಸುರಿಸಿದರೆ, ಅವು ಹಗುರಾಗುತ್ತವೆ. ಆ ನಂತರ ಅವು ವೇಗವಾಗಿ, ಆನಂದದಿಂದ ಇಷ್ಟಬಂದೆಡೆ ಸಂಚರಿಸುತ್ತವೆ. ಅಂದರೆ ಇದ್ದುದನ್ನು ಕೊಟ್ಟಾಗ ನಾವು ಹಗುರಾಗುತ್ತೇವೆ ಎಂಬ ಭಾವನೆ ಇಲ್ಲಿ ವ್ಯಕ್ತವಾಗುತ್ತದೆ. ಇದು ಜೀವನಕ್ಕೂ ಅನ್ವಯವಾಗುವಂತಹುದು.

ಇಂದಿನ ಮಕ್ಕಳು ತಾವು ಬೇಗ ಬೆಳೆದು ದೊಡ್ಡವರಾಗಬೇಕು, ಹಣ ಸಂಪಾದಿಸಬೇಕು ಎಂದು ಬಯಸಿದರೆ ಯುವಕರು ನಾವು ಚಿಕ್ಕವರಿದ್ದಾಗ ಎಷ್ಟು ಖುಷಿಯಾಗಿದ್ದೆವು, ಈಗ ಅಂತಹ ಸಂತೋಷವೇ ಇಲ್ಲ. ನಾವು ಮತ್ತೆ ಮಕ್ಕಳೇ ಆದರೆ ಎಷ್ಟು ಚೆನ್ನಾಗಿರುತ್ತದೆ ಎಂದು ಬಯಸುತ್ತಾರೆ. ಅಂದರೆ ಯಾರಿಗೆ ಯಾವುದು ಬೇಕೋ ಅದು ಅವರ ಬಳಿ ಇರುವುದಿಲ್ಲ. ನಮ್ಮ ಬಳಿ ಇದ್ದುದು ನಮಗೆ ನೆಮ್ಮದಿ ನೀಡುವುದಿಲ್ಲ. ಇದು ಮನುಷ್ಯನ ಸ್ವಭಾವವಾಗುತ್ತಿದೆ.

ನಮಗೆ ನಮ್ಮಲ್ಲಿರುವುದು ಅಮೂಲ್ಯವಾದುದು ಎಂಬುದರ ಅರಿವಾಗಬೇಕು. ಆಸ್ಪತ್ರೆಗಳಿಗೆ ಹೋದಾಗ ಅಲ್ಲಿ ಖಾಯಿಲೆಗಳಿಂದ ನರಳುವವರನ್ನು ಕಂಡಾಗ, ಆ ದೇವರ ನನಗೆ ಆರೋಗ್ಯ ಕೊಟ್ಟಿದ್ದಾನೆ, ಅಷ್ಟು ಸಾಕು. ಅವನ ಕರುಣೆಗೆ ಧನ್ಯವಾದಗಳು ಎಂಬ ಮನೋಭಾವ ಮೂಡಬೇಕು. ಹಾಗೆಯೇ ಮೃತದೇಹವನ್ನು ಕಂಡಾಗ, ಈ ಜೀವನವೇ ಇಷ್ಟು, ಅದಕ್ಕೆ ಏಕಿಷ್ಟು ಬಡಿದಾಡುತ್ತಿದ್ದೇವೆ ಎಂಬುದು ಮನಸಿನಲ್ಲಿ ಮೂಡಿದಾಗ, ನಮ್ಮ ಜೀವನ ಸಾರ್ಥಕತೆಯ ಬಗ್ಗೆ ಯೋಚಿಸಬಹುದು.

ರಿಂಗ್ ರಸ್ತೆಬದಿ ಕಸ ಸುರಿಯುತ್ತಿದ್ದ ವಾಹನ ಚಾಲಕನಿಗೆ ದಂಡದ ಬರೆ!



ಬೋಗಾದಿ ಸಮೀಪ ರಿಂಗ್ ರಸ್ತೆಯಲ್ಲಿ ಕಸ ಸುರಿಯುತ್ತಿದ್ದ ವ್ಯಕ್ತಿಗೆ ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿಗಳು ಸ್ಥಳದಲ್ಲೇ ದಂಡ ವಿಧಿಸಿ, ಸುರಿದಿದ್ದ ಕಸ ತೆರವು ಮಾಡಿಸಿದರು.

ಮೈಸೂರು, ಜೂ.12(ಎಂಕೆ)– ಮೈಸೂರಿನ ರಿಂಗ್ ರಸ್ತೆಯಲ್ಲಿ ಹಾಡಹಗಲೇ ಬಾರೀ ಪ್ರಮಾಣದ ಕಸ ಸುರಿಯುತ್ತಿದ್ದ ವ್ಯಕ್ತಿಯೊಬ್ಬರಿಗೆ ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿಗಳು ಸ್ಥಳದಲ್ಲೇ 3 ಸಾವಿರ ದಂಡ ವಿಧಿಸುವ ಮೂಲಕ ರಿಂಗ್ ರಸ್ತೆ ಬದಿಯಲ್ಲಿ ಕಸ ಸುರಿಯದಂತೆ ಎಚ್ಚರಿಕೆ ನೀಡಿದ್ದಾರೆ.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಳೆದ ಮೂರು ದಿನಗಳಿಂದ ಬೋಗಾದಿ ಪಟ್ಟಣ ಪಂಚಾಯಿತಿ ವತಿಯಿಂದ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡಿದ್ದು, ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಸ್ತೆಗಳಲ್ಲಿ ಕಸ ಸುರಿಯುವವರಿಗೆ ಸ್ಥಳದಲ್ಲೇ ದಂಡ ವಿಧಿಸಲಾಗುತ್ತಿದೆ.

ಅದರಂತೆ ಗುರುವಾರ ಸಂಜೆ ವೇಳೆ ಗೂಡ್ಸ್ ವಾಹನದಲ್ಲಿ ಬಾರೀ ಪ್ರಮಾಣದ ಕಸತಂದು ರಿಂಗ್ ರಸ್ತೆ(ಬೋಗಾದಿ ಮತ್ತು ದಟ್ಟಗಳ್ಳಿ ನಡುವೆ)ಬದಿಯಲ್ಲಿ ಸುರಿಯುತ್ತಿದ್ದ ವ್ಯಕ್ತಿಯೊರ್ವನನ್ನು ಹಿಡಿದ, ಬೋಗಾದಿ ಪಪಂ ಮುಖ್ಯಾಧಿಕಾರಿ ಎಂ.ಬಸವರಾಜು ಹಾಗೂ ಕಿರಿಯ ಆರೋಗ್ಯ ಅಧಿಕಾರಿ ಪುನೀತ್ ಕುಮಾರ್, ಕಸ ಸುರಿಯುತ್ತಿದ್ದ ವ್ಯಕ್ತಿಗೆ ಸ್ಥಳದಲ್ಲೇ 3 ಸಾವಿರ ರೂ.ದಂಡ ವಿಧಿಸಿದರಲ್ಲದೆ ರಿಂಗ್ ರಸ್ತೆಯಲ್ಲಿ ಕಸ ಸುರಿಯದಂತೆ ಎಚ್ಚರಿಕೆ ನೀಡಿದ್ದಾರೆ.

ಫ್ಯಾಕ್ಟರಿಯೊಂದಕ್ಕೆ ಕಸವನ್ನು ತೆಗೆದುಕೊಂಡು ಹೋಗುತ್ತೇನೆ ಎಂದು ಕಸ ಸುರಿದ ವ್ಯಕ್ತಿ ಮನವಿ ಮಾಡಿದ್ದರಿಂದ ಸುರಿದಿದ್ದ ಕಸವನ್ನು ಮತ್ತೇ ಅದೇ ಗೂಡ್ಸ್ ವಾಹನಕ್ಕೆ ತುಂಬಿಸಿ ಕಳಿಸಿದ್ದೇವೆ. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲೆ ಕಸ ಸುರಿದರೂ ದಂಡ ವಿಧಿಸುವ ಜೊತೆಗೆ ವಾಹನವನ್ನು ಪೊಲೀಸರ ವಶಕ್ಕೆ ನೀಡಲಾಗುವುದು ಎಂದು ಕಿರಿಯ ಆರೋಗ್ಯ ಅಧಿಕಾರಿ ಪುನೀತ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ. ಈ ವೇಳೆ ಪೌರಕಾರ್ಮಿಕರಾದ ಮೂರ್ತಿ, ರಾಜು, ಮಂಜು ಇದ್ದರು.

ದೇವರಾಜ ಮಾರುಕಟ್ಟೆ ಕಟ್ಟಡ ಪರಿಶೀಲಿಸಿದ ಇಂಟ್ಯಾಕ್ ತಂಡ

ಮೈಸೂರು, ಜೂ. 12(ಎಂಕೆ)– ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲೊಂದಾದ ದೇವರಾಜ ಮಾರುಕಟ್ಟೆಗೆ ಗುರುವಾರ ಭೇಟಿ ನೀಡಿದ ಇಂಟ್ಯಾಕ್ (Indian National Trust for Art & Cultural Heritage) ತಜ್ಞರ ತಂಡ ಮಾರುಕಟ್ಟೆ ಕಟ್ಟಡ ಪರಿಶೀಲನೆ ನಡೆಸಿದರು.



ದೇವರಾಜ ಮಾರುಕಟ್ಟೆಗೆ ಗುರುವಾರ ಭೇಟಿ ನೀಡಿದ ಇಂಟ್ಯಾಕ್ ತಂಡ ಪರಿಶೀಲನೆ ನಡೆಸಿತು.

ಕಳೆದ ವಾರದ ಹಿಂದೆಯಷ್ಟೇ ವಿವಾದಾತ್ಮಕ ಲ್ಯಾನ್ಸ್‌ಡೌನ್ ಕಟ್ಟಡವನ್ನು ಪರಿಶೀಲನೆ ನಡೆಸಿದ್ದ ನಿವೃತ್ತ ಪ್ರಾಧ್ಯಾಪಕ ಪ್ರೊರಘುನಾಥ ನೇತೃತ್ವದ ಐವರು ಇಂಟ್ಯಾಕ್ ಪ್ರತಿನಿಧಿಗಳು, ದೇವರಾಜ ಮಾರುಕಟ್ಟೆಯ ಇಕ್ಕೆಲಗಳಲ್ಲಿಯೂ ಸಂಚರಿಸಿ ಕಟ್ಟಡದ ಸದೃಢತೆ ಪರಿಶೀಲಿಸಿದರು.

ಬೆಳಗ್ಗೆ 9 ಗಂಟೆಗೆ ಸುಮಾರಿಗೆ ದೇವರಾಜ ಮಾರುಕಟ್ಟೆಯ ಮಳಿಗೆಗಳಿಗೆ ಭೇಟಿ ನೀಡಿ, ಮಳಿಗೆದಾರರೊಂದಿಗೆ ಕಟ್ಟಡ ವಸ್ತುಸ್ಥಿತಿಯ ಬಗ್ಗೆ ಮಾಹಿತಿ ಪಡೆದ ತಜ್ಞರು, ಮಳೆ ಬಂದಾಗ ನೀರು ಸೋರುವಿಕೆ, ಮಳೆ ನೀರು ಹರಿಯಲು ಮಾಡಿರುವ ವ್ಯವಸ್ಥೆ ಸೇರಿದಂತೆ ಮಧ್ಯಾಹ್ನದವರೆಗೆ ಪ್ರತಿಯೊಂದನ್ನು ಗಮನಿಸಿದರು. ಇಂಟ್ಯಾಕ್ ತಜ್ಞರಿಗೆ ಪಾಲಿಕೆ ಜ್ಯೂನಿಯರ್ ಇಂಜಿನಿಯರ್ ಧನುಷ್, ಬಿಲ್ ಕಲೆಕ್ಟರ್ ಬಸವರಾಜು ಸಹಕರಿಸಿದರು.

ಕಟ್ಟಡ ಸುಭದ್ರವಾಗಿದೆ: ದೇವರಾಜ ಮಾರುಕಟ್ಟೆ ಮಹಾರಾಜರ ಮಹತ್ವದ ಕೊಡುಗೆಯಾಗಿದ್ದು, ಸಾವಿರಾರು ವ್ಯಾಪಾರಿಗಳ ಜೀವನಕ್ಕೆ ದಾರಿಮಾಡಿಕೊಟ್ಟಿದೆ. ಮಾರುಕಟ್ಟೆ ಕಟ್ಟಡ ಸುಭದ್ರವಾಗಿದೆ. ಆದರೂ ಪರಿಶೀಲನೆಗಳು ನಡೆಯುತ್ತಲೇ ಇವೆ. ಕೋರ್ಟ್ ಆದೇಶ ಪಾಲನೆಗೆ ಅವಕಾಶ ನೀಡಿದ್ದೇವೆ ಎಂದು ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷರಾದ ಎಸ್.ಮಹದೇವ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಳೆದ ದಸರಾದಲ್ಲಿ ಯುವ ದಸರಾಗೆ ಬರೋಬ್ಬರಿ ಶೇ.43ರಷ್ಟು ವ್ಯಯ

ಪ್ರಸಕ್ತ ದಸರಾಗೆ ಮೂರು ತಿಂಗಳಿರುವಂತೆ ಕಳೆದ ಸಾಲಿನ ದಸರಾ ಆಯವ್ಯಯ ಪ್ರಕಟ; ಸಂಗ್ರಹವಾಗಿದ್ದು 41 ಕೋಟಿ; ಉಳಿದಿರುವುದು 22 ಲಕ್ಷ!



ಮೈಸೂರು, ಜೂ.12– ಕಳೆದ ದಸರಾ ಮಹೋತ್ಸವದ ಆಯ–ವ್ಯಯ ಮಾಹಿತಿಯನ್ನು ಏಳು ತಿಂಗಳ ಬಳಿಕ ಜಿಲ್ಲಾಡಳಿತ ಪ್ರಕಟಿಸಿದ್ದು, ನವರಾತ್ರಿ ಉತ್ಸವಕ್ಕೆ 41 ಕೋಟಿಗೂ ಹೆಚ್ಚು ಹಣ ಖರ್ಚಾಗಿದೆ ಇದರಲ್ಲಿ ಶೇ.43 ರಷ್ಟನ್ನು ಯುವ ದಸರಾ ಕಾರ್ಯಕ್ರಮವೊಂದಕ್ಕೆ ವ್ಯಯಿಸಲಾಗಿದೆ.

ಅದ್ಧೂರಿಯಾಗಿ ದಸರಾ ಆಚರಿಸಲು ಜಿಲ್ಲಾಡಳಿತಕ್ಕೆ ಸರ್ಕಾರದ ಅನುದಾನ ಸೇರಿ ಒಟ್ಟು 41,91,81,479 ರೂ. ಸ್ವೀಕೃತಿಯಾಗಿದ್ದು, ನೆರೆ ಜಿಲ್ಲೆಗಳ ದಸರಾ ಆಚರಣೆ ವೆಚ್ಚ ಸೇರಿ ಒಟ್ಟು 41,69,81,479 ರೂ. ವ್ಯಯಿಸಲಾಗಿದೆ. ಇದರನ್ವಯ ಇನ್ನು 22 ಲಕ್ಷ ರೂ. ಉಳಿತಾಯವಾಗಿದೆ.

ಹಣ ಬಂದಿದ್ದಿಷ್ಟು: ದಸರಾ ಆಚರಣೆಗಾಗಿ ಸರ್ಕಾರವು 25 ಕೋಟಿ ಅನುದಾನ ನೀಡಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ– ಈಗಿನ ಎಂಡಿಎ)ದಿಂದ 10 ಕೋಟಿ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ಪ್ರಾಯೋಜಕತ್ವದಿಂದ 2,15,55,000 ರೂ. ಸ್ವೀಕೃತವಾಗಿದೆ. ಜೊತೆಗೆ ಯುವ ದಸರಾ ಕಾರ್ಯಕ್ರಮದ ಟಿಕೆಟ್ ಮಾರಾಟ, ಜಂಬೂಸವಾರಿ ಮೆರವಣಿಗೆ ಹಾಗೂ ಪಂಜಿನ ಕವಾಯತು ಕಾರ್ಯಕ್ರಮಗಳ ಟಿಕೆಟ್ ಮತ್ತು ಗೋಲ್ಡ್ ಕಾರ್ಡ್ ಮಾರಾಟದಿಂದ 4,76,26,479 ರೂ. ಸಂಗ್ರಹವಾಗಿದೆ. ಇದೆಲ್ಲಾ ಸೇರಿ ಜಿಲ್ಲಾಡಳಿತಕ್ಕೆ ಒಟ್ಟು 41,91,81,479 ರೂ. ಸ್ವೀಕೃತಿಯಾಗಿದೆ.

ಖರ್ಚಾದ ಹಣ: ದಸರಾ ಸಂಬಂಧ ರಚಿಸಲಾಗಿದ್ದ ಉಪಸಮಿತಿಗಳಿಗೆ ದಸರಾ ಕಾರ್ಯಕ್ರಮಗಳ ಆಯೋಜನೆಗಾಗಿ ಒಟ್ಟು 31,27,67,189 ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ದಸರಾ ಕಾರ್ಯಕ್ರಮಕ್ಕೆ ಅಗತ್ಯವಾದ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳಿಗಾಗಿ 5,91,14,290 ರೂ., ಇತರೆ ಜಿಲ್ಲೆ ಅಥವಾ ಪ್ರಾಧಿಕಾರಗಳಿಗೆ 4.51 ಕೋಟಿ ರೂ. ಅನುದಾನ ಹಂಚಿಕೆ ಮಾಡಲಾಗಿದ್ದು, ಒಟ್ಟಾರೆ 2024ರ ದಸರಾ ಮಹೋತ್ಸವಕ್ಕೆ 41,69,81,479 ರೂ. ವೆಚ್ಚವಾಗಿದೆ.

ಯಾವುದಕ್ಕೆ ಎಷ್ಟೆಷ್ಟು?: ಮೊದಲ ಬಾರಿ ಮೈಸೂರು ಹೊರವಲಯದಲ್ಲಿ ಐದು ದಿನಗಳ ಕಾಲ ನಡೆದ ಯುವ ದಸರಾಗೆ ಬರೋಬ್ಬರಿ 18.17 ಕೋಟಿ ರೂ. ವೆಚ್ಚವಾಗಿದೆ. ಇನ್ನು ಸ್ವಾಗತ ಆಮಂತ್ರಣ ಮತ್ತು ಸ್ಥಳಾವಕಾಶ ಉಪ ಸಮಿತಿಗೆ 3,80,16,189 ರೂ., ಮೆರವಣಿಗೆ 90 ಲಕ್ಷ, ಪಂಜಿನ ಕವಾಯತು 88 ಲಕ್ಷ, ಸ್ತಬ್ಧಚಿತ್ರ 24.10 ಲಕ್ಷ, ರೈತ ದಸರಾ 57 ಲಕ್ಷ, ಸಾಂಸ್ಕೃತಿಕ ದಸರಾ 2.20 ಕೋಟಿ, ಲಲಿತ ಕಲೆ 21.41 ಲಕ್ಷ, ಕವಿಗೋಷ್ಠಿ 51 ಲಕ್ಷ, ಯೋಗ ದಸರಾ 20 ಲಕ್ಷ ಯುವ ಸಂಭ್ರಮಕ್ಕೆ 1.99 ಕೋಟಿ, ಮಹಿಳಾ ಮತ್ತು ಮಕ್ಕಳ ದಸರಾಗೆ 40 ಲಕ್ಷ, ಚಲನಚಿತ್ರ 40 ಲಕ್ಷ, ಕುಸ್ತಿ 45 ಲಕ್ಷ, ಅರಣ್ಯ ಇಲಾಖೆ 25 ಲಕ್ಷ, ರಂಗಾಯಣದ ನವರಾತ್ರಿ ರಂಗೋತ್ಸವಕ್ಕೆ 10 ಲಕ್ಷ ಸೇರಿ ಕಾರ್ಯಕ್ರಮಗಳಿಗೆ ಒಟ್ಟು 31,27,67,189 ರೂ. ವೆಚ್ಚವಾಗಿದೆ.

ಇದಲ್ಲದೆ ಸಿವಿಲ್ ಕಾಮಗಾರಿಗಳಿಗೆ 5,91,14,290 ರೂ. ಖರ್ಚು ಮಾಡಲಾಗಿದೆ. ನೆರೆ ಜಿಲ್ಲೆಗಳ ದಸರಾ ಉತ್ಸವಕ್ಕಾಗಿ ಚಾಮರಾಜನಗರ ಜಿಲ್ಲಾಧಿಕಾರಿಗೆ 1.75 ಕೋಟಿ, ಮಂಡ್ಯ ಜಿಲ್ಲಾಧಿಕಾರಿಗಳಿಗೆ 2 ಕೋಟಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ 75 ಲಕ್ಷ ಹಾಗೂ ರಾಜ್ಯ ಮಟ್ಟದ ಕಾರ್ಯಾಗಾರ ಆಯೋಜನೆಗಾಗಿ ಹುಣಸೂರು ಉಪವಿಭಾಧಿಕಾರಿಗೆ 1 ಲಕ್ಷ ರೂ. ನೀಡಲಾಗಿದೆ. ಇದೆಲ್ಲಾ ಸೇರಿ ಒಟ್ಟು 41,69,81,479 ರೂ. ವೆಚ್ಚ ಮಾಡಲಾಗಿದೆ.

ಯುವ ದಸರಾ ಭಾರಿ ದುಬಾರಿ



ಉತ್ತನಹಳ್ಳಿ ರಿಂಗ್ ರಸ್ತೆ ಬಳಿ ಐದು ದಿನಗಳ ಕಾಲ ಯುವ ದಸರಾ ಅದ್ಧೂರಿಯಾಗಿ ನಡೆಯಿತು. ಜನಪ್ರಿಯ ಶ್ರೇಯಾ ಘೋಷಾಲ್, ರವಿ ಬಸ್ರೂರು, ಬಾದ್‌ಶಾ, ಎ.ಆರ್. ರೆಹಮಾನ್ ಹಾಗೂ ಇಳಯರಾಜ ಅವರು ಕಾರ್ಯಕ್ರಮ ನೀಡಿದ್ದರು. ಇದಕ್ಕಾಗಿ ಒಟ್ಟು 18.17 ಕೋಟಿ ರೂ. ವೆಚ್ಚವಾಗಿದೆ. ಇದು ದಸರಾ ಮಹೋತ್ಸವದ ಒಟ್ಟು ವೆಚ್ಚಕ್ಕೆ ಲೆಕ್ಕಾಚಾರ ಹಾಕಿದರೆ ಶೇ.43ರಷ್ಟಾಗುತ್ತದೆ. ಸಿವಿಲ್ ಕಾಮಗಾರಿ, ನೆರೆ ಜಿಲ್ಲೆಗಳಿಗೆ ನೀಡಿರುವ ಅನುದಾನವನ್ನು ಹೊರತುಪಡಿಸಿ ನಿರ್ದಿಷ್ಟವಾಗಿ ದಸರಾ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಿರುವ ಹಣ(31,27,67,189 ರೂ.)ಕ್ಕೆ ಲೆಕ್ಕ ಹಾಕಿದರೆ ಶೇ.58ರಷ್ಟು ಹಣ ಯುವ ದಸರಾಗೆ ಖರ್ಚಾಗಿದೆ.

ತಪ್ಪಿದ ಹುಲಿ ಬೇಟೆ...





ಬಂಡೀಪುರ ಅಭಯಾರಣ್ಯದ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಬೇಟೆಗೆ ತವಕಿಸುತ್ತಿದ್ದ ಹುಲಿ ದರ್ಶನವಾಗಿದೆ. ಕೆರೆ ಅಂಚಿನಲ್ಲಿದ್ದ ಸಾಂಬಾರ್ ಜಿಂಕೆಯೊಂದು ತನ್ನತ್ತ ದಾವಿಸುತ್ತಿದ್ದ ಹುಲಿಯನ್ನು ಕಂಡು ಅಲ್ಲಿಂದ ಕಾಲ್ಕಿತ್ತು ಪ್ರಾಣ ಉಳಿಸಿಕೊಂಡಿದೆ. /ಚಿತ್ರ: ಲಕ್ಷ್ಮಿನಾರಾಯಣ ಯಾದವ

‘ನವ ಮೈಸೂರು ನಿರ್ಮಾಣ’

● ಯೋಜನೆ ಅನುಷ್ಠಾನ ಸಂಬಂಧ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಉನ್ನತ ಸಭೆ; ಚರ್ಚೆ ● ನವ ಮೈಸೂರು ಯೋಜನೆಯಡಿ ಬರಲಿವೆ; ‘ಉದ್ಯಮ ಮೈಸೂರು’, ‘ನಿಪುಣ ಮೈಸೂರು’, ‘ಸುಖೀ ವಾಸ’ ಮೈಸೂರು’, ‘ಪ್ರವಾಸೋದ್ಯಮ ಮೈಸೂರು’, ‘ಸಂಚಾರ ಮೈಸೂರು’ ● ಇದರಿಂದ ಸುತ್ತಮುತ್ತಲಿನ ಪ್ರದೇಶಗಳ ಮೈಸೂರು ನಗರ ವ್ಯಾಪ್ತಿಗೆ ತಂದು ಸರ್ವಾಂಗೀಣ ಅಭಿವೃದ್ಧಿ ● ಪಿಪಿಪಿ ಮಾದರಿಯಲ್ಲಿ ಯೋಜನೆ ಅನುಷ್ಠಾನಕ್ಕೆ ನಿರ್ಧಾರ

ಬೆಂಗಳೂರು, ಜೂ.12(ಕೆಎಂಶಿ)– ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಸಾಂಸ್ಕೃತಿಕ ನಗರ ಮೈಸೂರನ್ನು ಸುಸಜ್ಜಿತವಾಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮಹತ್ವಾಕಾಂಕ್ಷೆಯ ‘ನವ ಮೈಸೂರು ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಗಂಭೀರ ಚಿಂತನೆ ನಡೆಸಿದೆ.



ಬೆಂಗಳೂರಿನಲ್ಲಿ ಈ ಸಂಬಂಧ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ಅವರು ಇಂದು ಉನ್ನತ ಮಟ್ಟದ ಸಭೆ ನಡೆಸಿ, ಯೋಜನೆಯ ಬಗ್ಗೆ ಚರ್ಚೆ ನಡೆಸಿದರು. ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ತಂದು ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ.

ಸಭೆಯ ಬಗ್ಗೆ ಮಾಹಿತಿ ನೀಡಿದ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ಅವರು, ರಾಜಧಾನಿ ಬೆಂಗಳೂರಿನಂತೆಯೇ ಮೈಸೂರು ಸಹ ವೇಗವಾಗಿ ಬೆಳೆಯುತ್ತಿರುವ ನಗರವಾಗಿದೆ. ಇಲ್ಲಿ ಐಟಿ, ಬಿಟಿ ಸೇರಿದಂತೆ ಕೈಗಾರಿಕೆಗಳು, ವಸತಿ ಯೋಜನೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ನಗರ ವಿಸ್ತರಣೆಯಾಗುತ್ತಿದ್ದು, ಇದಕ್ಕೆ ಪೂರಕವಾಗಿ ಸಮಗ್ರ ಯೋಜನೆಯನ್ನು ಸಿದ್ಧಪಡಿಸುವತ್ತ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಗಮನಹರಿಸಿದೆ ಎಂದು ತಿಳಿಸಿದರು.

ಉದ್ದೇಶಿತ ಯೋಜನೆಯಲ್ಲಿ ಏನಿರಲಿದೆ?: ನವ ಮೈಸೂರು ನಿರ್ಮಾಣ ಯೋಜನೆಗೆ ಪ್ರಮುಖವಾಗಿ ಐದು ಆಧಾರಸ್ತಂಭಗಳನ್ನು ಗುರುತಿಸಲಾಗಿದೆ. ಉದ್ಯಮ ಮೈಸೂರು, ನಿಪುಣ ಮೈಸೂರು, ಸುಖೀವಾಸ ಮೈಸೂರು, ಪ್ರವಾಸೋದ್ಯಮ ಮೈಸೂರು ಮತ್ತು ಸಂಚಾರ ಮೈಸೂರು ಎಂಬ ಪ್ರಮುಖವಾದ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಸಚಿವರು ತಿಳಿಸಿದರು.

ಉದ್ಯಮ ಮೈಸೂರು ಕ್ಷೇತ್ರದ ಯೋಜನೆಯಲ್ಲಿ ಅತ್ಯಾಧುನಿಕ ಉತ್ಪಾದನಾ ಹಬ್ ಸ್ಥಾಪನೆ ಮಾಡುವುದು, ಒಟ್ಟಾರೆ ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವುದು. ನಿಪುಣ ಮೈಸೂರು ಮೂಲಕ ಕೌಶಲ್ಯ ತರಬೇತಿ ಮತ್ತು ಕೌಶಲ್ಯಾಧಾರಿತ ಉದ್ಯೋಗಗಳಿಗೆ ಆದ್ಯತೆ ನೀಡುವುದು, ಉದ್ಯಮಶೀಲತ್ವ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವುದು. ಸುಖೀವಾಸದಡಿಯಲ್ಲಿ ಸುಸಜ್ಜಿತವಾದ ಸಮಗ್ರ ಟೆಕ್ ಸಿಟಿ ನಿರ್ಮಾಣ, ಪ್ರವಾಸೋದ್ಯಮ ಮೈಸೂರು ಅಡಿಯಲ್ಲಿ ಸಮಗ್ರ ಆರೋಗ್ಯ, ಕ್ಷೇಮ ಮತ್ತು ಪುನಶ್ಚೇತನ ಕೇಂದ್ರದ ಆರಂಭ ಮತ್ತು ಸಂಚಾರ ಮೈಸೂರು ಎಂಬ ಹೆಸರಿನ ಯೋಜನೆಯಡಿ ಮೈಸೂರು ತ್ವರಿತ (Rapid) ಮೆಟ್ರೋ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಈ ಸಮಗ್ರ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ. ಹೀಗಾಗಿ ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊರೆ ಬೀಳುವುದಿಲ್ಲ. ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ತಂದು ಸಾಂಸ್ಕೃತಿಕ ನಗರವನ್ನು ಸಮಗ್ರ ಅಭಿವೃದ್ಧಿಪಡಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ ಎಂದು ಸಚಿವರು ತಿಳಿಸಿದರು.

ಬಂಡವಾಳ ಆಕರ್ಷಣೆಯ ಪ್ರಮುಖ ನಗರ: ಬಂಡವಾಳ ಹೂಡಿಕೆಯಲ್ಲಿ ಬೆಂಗಳೂರಿನ ನಂತರದ ಸ್ಥಾನದಲ್ಲಿ ಮೈಸೂರು ನಗರವಿದ್ದು, ಇಲ್ಲಿ ಹೂಡಿಕೆಯಾಗುತ್ತಿರುವ ಬಂಡವಾಳದ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಬಂಡವಾಳ ಹೂಡಿಕೆಗೆ ನೆಚ್ಚಿನ ತಾಣವಾಗಿದ್ದು, ಉದ್ಯಮಿಗಳನ್ನು ಆಕರ್ಷಿಸುವ ದಿಸೆಯಲ್ಲಿ ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಸರ್ಕಾರದಿಂದ ಸಹಕಾರ: ಯಾವುದೇ ತೊಂದರೆ ಇಲ್ಲದೇ ಉದ್ಯಮಗಳನ್ನು ಸ್ಥಾಪಿಸಲು ಹೂಡಿಕೆದಾರರಿಗೆ ತ್ವರಿತವಾಗಿ ಭೂಮಿ ಹಂಚಿಕೆ, ಆವಿಷ್ಕಾರ ಆಧಾರಿತ ನೀತಿಗಳನ್ನು ರೂಪಿಸುವುದು ಮತ್ತು ಮೂಲಸೌಕರ್ಯ ಹೂಡಿಕೆಗೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಿದೆ ಎಂದು ಅವರು ತಿಳಿಸಿದರು.

ಇಂದು ಪೋಸ್ಟರ್ ಬಿಡುಗಡೆ

ಮೈಸೂರು, ಜೂ.12(ಪಿಎಂ)– ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಹಾಗೂ ಪ್ರಚಾರ ವಾಹನಕ್ಕೆ ಚಾಲನೆ ನೀಡುವ ಕಾರ್ಯಕ್ರಮವನ್ನು ಜೂ.13ರಂದು ಬೆಳಗ್ಗೆ 8.30ಕ್ಕೆ ಮೈಸೂರಿನ ಕುವೆಂಪುನಗರದ ಬಂದಂತಮ್ಮ ಕಾಳಮ್ಮ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್‌ಸಿಂಹ, ಮಾಜಿ ಸಚಿವ ಸಾ.ರಾ.ಮಹೇಶ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮುಖಂಡ ಕವೀಶ್‌ಗೌಡ ಸೇರಿದಂತೆ ಜನಪ್ರತಿನಿಧಿಗಳು, ಸಮಾಜದ ವಿವಿಧ ಕ್ಷೇತ್ರದ ಗಣ್ಯರು ಹಾಗೂ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಪಿ.ಪ್ರಶಾಂತ್‌ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಜೂ.27ರಂದು ನಗರದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮ ನಡೆಯಲಿದೆ.

‘ಮೈಸೂರು ಮಿತ್ರ’ ಸುದ್ದಿ ಸಂಪಾದಕ ಎ.ಸಿ.ಪ್ರಭಾಕರ್‌ಗೆ ಜೆಎಸ್‌ಎಸ್ ಮಾಧ್ಯಮ ಪ್ರಶಸ್ತಿ

ಮೈಸೂರು, ಜೂ.12(ಪಿಎಂ)– ಜೆಎಸ್‌ಎಸ್ ಮಹಾ ವಿದ್ಯಾ ಪೀಠದ ವತಿಯಿಂದ ಕೊಡಮಾಡುವ 2024ನೇ ಸಾಲಿನ ‘ಜೆಎಸ್‌ಎಸ್ ಮಾಧ್ಯಮ ಪ್ರಶಸ್ತಿ’ಗೆ ಹಿರಿಯ ಪತ್ರಕರ್ತ, ‘ಮೈಸೂರು ಮಿತ್ರ’ ಸುದ್ದಿ ಸಂಪಾದಕ ಎ.ಸಿ.ಪ್ರಭಾಕರ್ ಅವರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯ್ಕೆ ಮಾಡಿದೆ. ಇತ್ತೀಚೆಗೆ ನಡೆದ ಸಂಘದ ಕಾರ್ಯಕಾರಿಣಿ ಮಂಡಳಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಇದೇ ತಿಂಗಳು ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸುಮಾರು 35 ವರ್ಷಗಳಿಂದ ಪತ್ರಿಕಾ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರುವ ಎ.ಸಿ.ಪ್ರಭಾಕರ್ ಅವರು ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿ, ಹಲವು ವರ್ಷಗಳಿಂದ ‘ಮೈಸೂರು ಮಿತ್ರ’ದಲ್ಲಿ ಸೇವೆ ಮುಂದುವರೆಸಿದ್ದಾರೆ.



1990ರಿಂದ 2004ರವರಗೆ ಕಾಡುಗಳ್ಳ, ನರಹಂತಕ ವೀರಪ್ಪನ್ ಸೆರೆ ಕಾರ್ಯಾಚರಣೆ ಸಂದರ್ಭದಲ್ಲಿ ತಮಿಳುನಾಡು, ಕರ್ನಾಟಕ, ಕೇರಳ ಅರಣ್ಯಗಳಲ್ಲಿ ಸಂಚರಿಸಿ ವರದಿ ಮಾಡಿರುವುದು ಇವರ ವೃತ್ತಿ ಬದುಕಿನ ಮಹತ್ವದ ಮೈಲಿಗಲ್ಲು. ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಕರ್ನಾಟಕ ಮತ್ತು ತಮಿಳುನಾಡು ಪೊಲೀಸರಿಗೆ ಉಪಯುಕ್ತ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸರ್ಕಾರದಿಂದಲೂ ಇವರು ನಗದು ಬಹುಮಾನ ಪಡೆದಿದ್ದಾರೆ.

ಇವರು ಕೊಳ್ಳೇಗಾಲ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರು, ಕೊಳ್ಳೇಗಾಲ ವರದಿಗಾರರ ಕೂಟದ ಕಾರ್ಯದರ್ಶಿಗಳು, ಚಾಮರಾಜನಗರ ಪ್ರೆಸ್ ಕ್ಲಬ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕೊಳ್ಳೇಗಾಲ ದೇವಾಂಗ ಮಹಾಜನ ಸಂಘದ ಆಜೀವ ಸದಸ್ಯರಾಗಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ 2016ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಯೂ ಸಂದಿದೆ.

ಕಾಂತಾರ ಚಾಪ್ಟರ್–1ಗೆ ಸಾಲು ಸಾಲು ವಿಘ್ನ; ಮತ್ತೊಬ್ಬ ಕಲಾವಿದ ಸಾವು

ಶಿವಮೊಗ್ಗ, ಜೂ.12–ಕಾಂತಾರ ಚಾಪ್ಟರ್–1 ಚಿತ್ರದ ಸಹ ಕಲಾವಿದ ವಿಜು ವಿ.ಕೆ ಹೃದಯಾಘಾತದಿಂದ ಶಿವಮೊಗ್ಗದಲ್ಲಿ ಸಾವನ್ನಪ್ಪಿದ್ದಾರೆ. ಕೇರಳದ ತ್ರಿಶೂರ್ ಮೂಲದ ಮಿಮಿಕ್ರಿ ಕಲಾವಿದ ವಿಜು ಕಾಂತರ ಚಿತ್ರಕ್ಕಾಗಿ ಆಗುಂಬೆ ಸಮೀಪದ ಯಡೂರಿನ ಹೋಂ ಸ್ಟೇ ಒಂದರಲ್ಲಿ ತಂಗಿದ್ದರು. ಬುಧವಾರ ರಾತ್ರಿ ಏಕಾಏಕಿ ವಿಜು ಅವರಿಗೆ ಎದೆ ನೋವು ಕಾಣಿಸಿಕೊಂಡಿದೆ. ತೀರ್ಥಹಳ್ಳಿಯ ಆಸ್ಪತ್ರೆಗೆ ರವಾನಿಸುವ ವೇಳೆ ಮಾರ್ಗ ಮಧ್ಯೆ ವಿಜು ಕೊನೆಯುಸಿರೆಳೆದಿದ್ದಾರೆ.



ರಾಷ್ಟ್ರ ಪ್ರಶಸ್ತಿ ವಿಜೇತ ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸುತ್ತಿರುವ ಬಹುನಿರೀಕ್ಷಿತ ಚಿತ್ರ ಕಾಂತಾರ ಚಾಪ್ಟರ್ 1ಗೆ ಸಾಲು ಸಾಲು ವಿಘ್ನ ಎದುರಾಗುತ್ತಲೇ ಇದೆ. ಈ ಮೊದಲು ಹಾಸನದಲ್ಲಿ ನಡೆದ ಶೂಟಿಂಗ್‌ನಲ್ಲಿ ಬೆಂಕಿ ಹಾಕಿದ್ದಕ್ಕೆ ಮರಗಳಿಗೆ ಹಾನಿಯಾಗಿತ್ತು. ಇದಾದ ಬಳಿಕ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಹೇರೂರು ಗ್ರಾಮದ ಗವಿಗುಡ್ಡ ಪ್ರದೇಶದ ಅರಣ್ಯದಲ್ಲಿ ನಡೆಯುತ್ತಿದ್ದ ಚಿತ್ರೀಕರಣಕ್ಕೆ ಸ್ಥಳೀಯರಿಂದ ಭಾರೀ ವಿರೋಧ ವ್ಯಕ್ತವಾಗಿತ್ತು. ಇದಾದ ಬಳಿಕ ಕಾಂತಾರ ಚಿತ್ರತಂಡದ ವಿರುದ್ಧ ಅಕ್ರಮವಾಗಿ ಮರ ಕಡಿದು, ಸ್ಫೋಟಕ ಬಳಸಿ, ನಿಯಮ ಉಲ್ಲಂಘನೆ ಮಾಡಿದ ಆರೋಪ ಕೇಳಿಬಂದಿತು.

ಅಷ್ಟೇ ಅಲ್ಲ ಚಿತ್ರತಂಡದ ಕಲಾವಿದರನ್ನು ಕರೆದೊಯ್ಯುತ್ತಿದ್ದ ಬಸ್ ಕೊಲ್ಲೂರಿನಲ್ಲಿ ಅಪಘಾತವಾಗಿ, ಜ್ಯೂನಿಯರ್ ಆರ್ಟಿಸ್ಟ್ ಗಾಯಗೊಂಡಿದ್ದರು. ನಂತರ ಸೌಪರ್ಣಿಕಾ ನದಿಯಲ್ಲಿ ಈಜಲು ಹೋಗಿ ಸಹ ಕಲಾವಿದ ಕಪಿಲ್ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರು. ಮದುವೆ ಸಮಾರಂಭದಲ್ಲಿ ಭಾಗಿಯಾಗಿದ್ದ ನಟ ರಾಕೇಶ್ ಪೂಜಾರಿ ಹೃದಯಾಘಾತದಿಂದ ಕೆಲ ದಿನಗಳ ಹಿಂದೆ ಸಾವನ್ನಪ್ಪಿದ್ದರು.

ಸಿದ್ದರಾಮಯ್ಯ ಇನ್ನಾರು ತಿಂಗಳಲ್ಲಿ ಅಧಿಕಾರ ತೊರೆಯಲೇಬೇಕು! ಈ ಬಗ್ಗೆ ಸಬ್ ರಿಜಿಸ್ಟ್ರರ್ ಕಚೇರಿಯಲ್ಲೇ ಅಗ್ರಿಮೆಂಟ್ ಆಗಿದೆ!!

ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಅಚ್ಚರಿ ಭವಿಷ್ಯ!!!

ಮೈಸೂರು, ಜೂ.12(ಬಿಎಲ್‌ಯು) ಮುಖ್ಯಮಂತ್ರಿ ಸಿದ್ದರಾಮಯ್ಯ, ಇನ್ನು ಆರು ತಿಂಗಳಲ್ಲಿ ಅಧಿಕಾರ ತೊರೆಯಲೇಬೇಕು. ಈ ಬಗ್ಗೆ ಸಬ್ ರಿಜಿಸ್ಟ್ರರ್ ಕಚೇರಿಯಲ್ಲೆ ಅಗ್ರಿಮೆಂಟ್ ಆಗಿದ್ದು, ಅಧಿಕಾರ ಬಿಡುವ ಕಾಲ ಹತ್ತಿರ ಬಂದಿದೆ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಭವಿಷ್ಯ ನುಡಿದಿದ್ದಾರೆ.



ಮೈಸೂರಿನ ಸಿಪಾಯಿ ಗ್ರ್ಯಾಂಡೆ ಹೋಟೆಲ್‌ನಲ್ಲಿ ಗುರುವಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಿನ ಸಿಪಾಯಿ ಗ್ರ್ಯಾಂಡ್ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನ ಬೆಳಗಾದರೆ ಗ್ಯಾರಂಟಿ ಯೋಜನೆ ಜಪ ಮಾಡುವ ಸಿದ್ದರಾಮಯ್ಯ ಅವರಿಗೆ ಇನ್ನು ಆರು ತಿಂಗಳಲ್ಲಿ ಅಧಿಕಾರ ಹೋಗೆ ಹೋಗುತ್ತದೆ ಎಂಬ ಗ್ಯಾರಂಟಿಯೇ ಗೊತ್ತಿಲ್ಲ ಎಂದು ಗೇಲಿ ಮಾಡಿದರು.

ಸಿದ್ದರಾಮಯ್ಯ ಅಧಿಕಾರ ತೊರೆಯುವುದು ನೋಟರಿ ಅಗ್ರಿಮೆಂಟ್ ಅಲ್ಲ. ಸಬ್ ರಿಜಿಸ್ಟ್ರರ್ ಕಚೇರಿಯಲ್ಲೇ ಅಗ್ರಿಮೆಂಟ್ ಆಗಿದೆ. ಸಿಎಂ ಖುರ್ಚಿ ಒದ್ದು ಕಿತ್ತುಕೊಳ್ಳುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಗಾಗಲೇ ನೀಡಿರುವ ಹೇಳಿಕೆಯನ್ನು ಈ ವೇಳೆ ಉಲ್ಲೇಖಿಸಿದರು.

ಪ್ರಧಾನಿ ಮೋದಿ ಸರ್ಕಾರಕ್ಕೆ ಶೂನ್ಯ ಅಂಕ ನೀಡಿರುವ ಸಿದ್ದರಾಮಯ್ಯ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅಶೋಕ್, ಸಿದ್ದರಾಮಯ್ಯ ಔಟ್ ಗೋಯಿಂಗ್ ಸಿಎಂ. ಇನ್ನು ಆರು ತಿಂಗಳಲ್ಲಿ ಸಿಎಂ ಕುರ್ಚಿಯಿಂದ ಇಳಿಯುತ್ತಾರೆ. ಹಾಗಾಗಿ ಅವರು ನೀಡುವ ಮಾರ್ಕ್ಸ್ ಯಾರಿಗೆ ಬೇಕು ಎಂದು ಲೇವಡಿ ಮಾಡಿದರು.

ಡಿ.ಕೆ.ಶಿವಕುಮಾರ್, ಸತೀಶ್ ಜಾರಕಿಹೊಳಿ, ಎಂ.ಬಿ.ಪಾಟೀಲ್ ಸೇರಿದಂತೆ ಹಲವರು ನಾನೂ ಸಿಎಂ ಆಗುತ್ತೇನೆ ಎನ್ನುತ್ತಾರೆ. ಸಿದ್ದರಾಮಯ್ಯ ಅವರು ಅಲಂಕರಿಸಿರುವ ಮುಖ್ಯಮಂತ್ರಿ ಖುರ್ಚಿ ಭದ್ರವಾಗಿದ್ದರೆ ಇವರೆಲ್ಲಾ ಬಹಿರಂಗವಾಗಿ ಏಕೆ ತಮ್ಮ ತಮ್ಮ ಆಕಾಂಕ್ಷೆ ವ್ಯಕ್ತಪಡಿಸುತ್ತಿದ್ದರು ಹೇಳಿ ಎಂದು ಮರು ಪ್ರಶ್ನಿಸಿದರು.

ನಾವು ರಾಜಕೀಯ ಸನ್ಯಾಸಿಗಳಲ್ಲ. ಹಾಗೆಂದ ಮಾತ್ರಕ್ಕೆ ನಾವು ರಾಜ್ಯ ಕಾಂಗ್ರೆಸ್ ಸರ್ಕಾರ ಬೀಳಿಸಲು ಹೋಗುವುದಿಲ್ಲ. ಮುಖ್ಯಮಂತ್ರಿ ಹುದ್ದೆಗಾಗಿ ಅವರೇ ಕಚ್ಚಾಡಿಕೊಂಡು ಸರ್ಕಾರ ಪತನಗೊಳಿಸುತ್ತಾರೆ. ಆದರೆ ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದಂತೆ ನಮ್ಮನ್ನು ಇವರು ಹೊಣೆಗಾರರನ್ನಾಗಿ ಮಾಡಬಾರದು. ಈ ಸರ್ಕಾರ ಬಿದ್ದು ಹೋದರೆ ಅದಕ್ಕೆ ಅವರೇ ಕಾರಣಕರ್ತರಾಗುತ್ತಾರೆ. ಒಟ್ಟಾರೆ ಈ ಸರ್ಕಾರ ನೆಗೆದು ಬಿದ್ದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ಬಿಡಿ ಎಂದು ಅಭಿಪ್ರಾಯಪಟ್ಟರು. ಸರ್ಕಾರದ ಒಳಗಿದ್ದು ಕೊಂಡೆ ರಾಜ ಕಾರಣ ಮಾಡುವುದರ ಬದಲು ರಾಜ್ಯದ ಕಾನೂನು ಸುವ್ಯವಸ್ಥೆ ಕಾಪಾಡಲಿ ಎಂದು ಅಶೋಕ್ ಸರ್ಕಾರದ ಪ್ರತಿನಿಧಿಗಳಿಗೆ ಸಲಹೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್, ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಯಶಸ್ವಿನಿ ಸೋಮಶೇಖರ್, ಮಹದೇವಯ್ಯ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಸಿದ್ದರಾಮಯ್ಯ ಯತೀಂದ್ರ ಬೇಲಿ: ರಾಮನಗರದಲ್ಲಿ ಡಿ.ಕೆ.ಶಿವಕುಮಾರ್ ಕಾಂಪೌಂಡ್!!

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪುತ್ರ ಯತೀಂದ್ರ ಮೈಸೂರಿಗೆ ಬೇಲಿ ಹಾಕಿಕೊಂಡಿದ್ದರೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಅವರ ಸಹೋದರ ಡಿ.ಕೆ.ಸುರೇಶ್ ರಾಮನಗರ, ಚನ್ನಪಟ್ಟಣದಲ್ಲಿ ಕಾಂಪೌಡ್ ನಿರ್ಮಾಣ ಮಾಡಿಕೊಂಡಿದ್ದಾರೆ ಎಂದು ಅಶೋಕ್ ಟೀಕಿಸಿದರು.

ಗೃಹ ಸಚಿವ ಡಾ.ಜಿ.ಪರಮೇಶ್ ಅವರು ತುಮಕೂರಿನ ಗೃಹದಲ್ಲಿದ್ದಾರೆ. ಇನ್ನು ಸತೀಶ್ ಜಾರಕಿಹೊಳಿ ಬೆಳಗಾವಿ ಸುತ್ತಮುತ್ತ ಅತಿಕ್ರಮಿಸಿಕೊಂಡಿದ್ದಾರೆ. ಎಂ.ಬಿ.ಪಾಟೀಲ್ ವಿಜಯಪುರ ಸುತ್ತಾಮುತ್ತ, ಮಲ್ಲಿಕಾರ್ಜುನ ಖರ್ಗೆ ಕಲಬುರಗಿ ಸುತ್ತಮುತ್ತ ಬೇಲಿ ನಿರ್ಮಾಣ ಮಾಡಿಕೊಂಡಿದ್ದಾರೆ. ಈ ಮೂಲಕ ತಮ್ಮ ವ್ಯಾಪ್ತಿಯಲ್ಲಿ ಬೇರೆಯವರು ಅಡ್ಡಾಡಲು ಬಿಡದೆ ಎಲ್ಲರೂ ತಾವು ರಚಿಸಿರುವ ವ್ಯೂಹದಲ್ಲಿ ದರ್ಬಾರು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಆರ್‌ಸಿಬಿ ವಿಜಯೋತ್ಸವಕ್ಕೆ ನಾನೇ ರಾಜ್ಯಪಾಲರನ್ನು ಆಹ್ವಾನಿಸಿದ್ದೆ ಎಂದು ಒಮ್ಮೆ ಸಿದ್ದರಾಮಯ್ಯ ಹೇಳುತ್ತಾರೆ. ಇದು ತಮ್ಮ ಕಾರ್ಯಕ್ರಮ ಅಲ್ಲ. ನಮಗೂ ಇದರ ಅರಿವಿರಲಿಲ್ಲ. ನನ್ನ ಆಹ್ವಾನಿಸಿದರೂ ಅನ್ನೋ ಕಾರಣಕ್ಕೆ ಹಾಜರಾದೆ ಎಂದು ಮತ್ತೊಮ್ಮೆ ಹೇಳುತ್ತಾರೆ. ಇದು ತಮ್ಮ ಕಾರ್ಯಕ್ರಮವಲ್ಲ ಎಂದ ಮೇಲೆ ರಾಜ್ಯಪಾಲರನ್ನು ಏಕೆ ಇವರು ಆಹ್ವಾನಿಸಿದರು ಎಂಬ ಪ್ರಶ್ನೆಗೆ ಉತ್ತರವಿಲ್ಲ. ಒಂದೊಂದು ಬಾರಿ ಒಂದೊಂದು ರೀತಿಯ ಗೊಂದಲಮಯ ಹೇಳಿಕೆ ನೀಡುತ್ತಿರುವ ಸಿದ್ದರಾಮಯ್ಯ ಅವರ ಮಾನಸಿಕ ಸ್ಥಿತಿ ಸರಿ ಇಲ್ಲ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ ಎಂದು ಅಶೋಕ್ ಹೇಳಿದರು.

ಕಾಲ್ತುಳಿತ ಪ್ರಕರಣದಲ್ಲಿ ಡಿಪಿಎಆರ್ ಕಾರ್ಯದರ್ಶಿ ಸತ್ಯವತಿ, ಗುಪ್ತಚರ ಎಡಿಜಿಪಿ ಆಗಿದ್ದ ಹೇಮಂತ್ ನಿಂಬಾಳ್ಕರ್ ಕೂಡ ಹೊಣೆಗಾರರಾಗಿದ್ದಾರೆ. ಆದರೆ ಇವರ ವಿರುದ್ಧ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಘಟನೆ ಬಗ್ಗೆ ತನಿಖೆ ನಡೆಯುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ಹೇಮಂತ್ ನಿಂಬಾಳ್ಕರ್ ವಿದೇಶಕ್ಕೆ ಹೋಗಲು ಸರ್ಕಾರ ಹೇಗೆ ಅನುಮತಿ ನೀಡಿತು ಎಂದು ಪ್ರಶ್ನಿಸಿದರು. ಈ ಪ್ರಕರಣದಲ್ಲಿ ಕಾಂಗ್ರೆಸ್ ಸರ್ಕಾರದ ವೈಫಲ್ಯತೆ ಖಂಡಿಸಿ ನಾಳೆ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕುತ್ತೇವೆ ಎಂದು ಅಶೋಕ್ ಎಚ್ಚರಿಸಿದರು.

ಪಾಕಿಸ್ತಾನದ ಆಕ್ಷನ್‌ಗೆ ಬಿಜೆಪಿ ಸರ್ಕಾರದ ರಿಯ್ಯಾಕ್ಷನ್, ಆದರೆ...!

ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಭಾರತದ ಮೇಲೆ ಪಾಕಿಸ್ತಾನ ಎಷ್ಟೇ ದಾಳಿ ಮಾಡಿದರೂ ಯಾವುದೇ ರಿಯ್ಯಾಕ್ಷನ್ ಇರುತ್ತಿರಲಿಲ್ಲ. ಆದರೆ, ಈಗ ಭಾರತದ ಮೇಲೆ ಪಾಕಿಸ್ತಾನ ಪಾಕ್ ಪ್ರಚೋದಿತ ಭಯೋತ್ಪಾದಕ ದಾಳಿಯ ಆಕ್ಷನ್‌ಗೆ ನರೇಂದ್ರ ಮೋದಿ ಸರ್ಕಾರ ತಕ್ಷಣವೇ ರಿಯ್ಯಾಕ್ಷನ್ ಕೊಟ್ಟು ಪಾಕಿಸ್ತಾನವನ್ನು ಸಿಂಹಸ್ವಪ್ನದಂತೆ ಕಾಡುತ್ತಿದ್ದಾರೆ ಎಂದು ಅಶೋಕ್ ಹೇಳಿದರು.

ಯುಪಿಎ ಅವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತಿದಿನ ಕಲ್ಲು ತೂರಾಟ, ಬಾಂಬ್ ಸ್ಫೋಟದಂತಹ ಕೃತ್ಯಗಳು ನಡೆಯುತ್ತಿತ್ತು. ಮುಂಬೈ ಮೇಲೆ ಪಾಕಿಸ್ತಾನದ ಉಗ್ರರು ದಾಳಿ ಮಾಡಿದಾಗ 200 ಕ್ಕೂ ಹೆಚ್ಚು ಮಂದಿ ಮೃತಪಟ್ಟರು. ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಪಾಕಿಸ್ತಾನಕ್ಕೆ ತಕ್ಕ ಪ್ರತ್ಯುತ್ತರ ನೀಡದೆ ಕೈ ಚೆಲ್ಲಿ ಕುಳಿತಿತ್ತು.

ಆದರೆ ನರೇಂದ್ರ ಮೋದಿ ಸರ್ಕಾರ ಪಾಕಿಸ್ತಾನಕ್ಕೆ ತಕ್ಕ ಪ್ರತ್ಯುತ್ತರ ನೀಡುತ್ತಿದೆ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ದಾಳಿಗೆ ಪ್ರಚೋದನೆ ನೀಡಿದ ಪಾಕಿಸ್ತಾನದ ಮೇಲೆ ಪ್ರತೀಕಾರದ ಮೂಲಕ ತಕ್ಕ ಉತ್ತರ ನೀಡಲಾಗಿದೆ. ಇದರಿಂದ ಹೆದರಿದ ಪಾಕಿಸ್ತಾನ ಸಂಧಾನಕ್ಕೆ ಬಂದಿತು. ಪಾಕಿಸ್ತಾನದ ಆಕ್ಷನ್‌ಗೆ ಕಾಂಗ್ರೆಸ್ ಸರ್ಕಾರ ಈ ರೀತಿಯ ಯಾವುದಾದರೂ ರಿಯ್ಯಾಕ್ಷನ್ ನೀಡಿದೆಯೇ ಎಂದು ಕಾಂಗ್ರೆಸಿಗರನ್ನು ಅಶೋಕ್ ಪ್ರಶ್ನಿಸಿದರು.

ಇದೇ ವೇಳೆ 11 ವರ್ಷದ ನರೇಂದ್ರ ಮೋದಿ ಸರ್ಕಾರದ ರಿಪೋರ್ಟ್ ಕಾರ್ಡ್ ಮಂಡಿಸಿದ ಅಶೋಕ್ ಅವರು, ನೆಹರುಯಿಂದ ಡಾ. ಮನಮೋಹನ್‌ಸಿಂಗ್ ಸರ್ಕಾರದ ತನಕ ನಡೆದಿರುವ ಅಭಿವೃದ್ಧಿಗಿಂತ ಕೇವಲ 11 ವರ್ಷದ ಅವಧಿಯಲ್ಲಿ ದೇಶದಲ್ಲಿ ನಾಲ್ಕು ಪಟ್ಟು ಅಭಿವೃದ್ಧಿಯಾಗಿದೆ ಎಂದು ಹೇಳಿದರು.

ಪ್ರಸ್ತುತ ಭಾರತ ಜಗತ್ತಿನಲ್ಲೇ ನಾಲ್ಕನೇ ಆರ್ಥಿಕ ಶಕ್ತಿಯಾಗಿದೆ. ಮುಂದಿನ ವರ್ಷದ ವೇಳೆಗೆ 3 ಸ್ಥಾನಕ್ಕೆ ಬರಲಿದೆ. ಈ ಮೊದಲು ವಿದೇಶದಿಂದ ಔಷಧಿ ಆಮದು ಮಾಡಿಕೊಳ್ಳುತ್ತಿದ್ದೆವು. ಆದರೆ ಈಗ ನಾವೇ ವಿದೇಶಕ್ಕೆ ಔಷಧಿ ರಫ್ತು ಮಾಡುತ್ತಿದ್ದೇವೆ. ಕೊರೊನಾ ವೇಳೆಯಲ್ಲಂತೂ ನೂರಾರು ದೇಶಕ್ಕೆ ಲಸಿಕೆ ನೀಡಲಾಗಿದೆ. ಭಾರತೀಯರ ತಲಾದಾಯ ಈ ಮೊದಲು 6 ಸಾವಿರ ಇತ್ತು, ಆದರೆ ಈಗ 20 ಸಾವಿರಕ್ಕೆ ಜಿಗಿದಿದೆ ಎಂದು ಹೇಳಿದರು.

ಈ ಮೊದಲು 377 ಇದ್ದ ಮೆಡಿಕಲ್ ಕಾಲೇಜುಗಳ ಸಂಖ್ಯೆ ಈಗ 704 ಕ್ಕೆ ಹೆಚ್ಚಳವಾಗಿದೆ. ಡಾ.ಮನಮೋಹನ್ ಸಿಂಗ್ ಸರ್ಕಾರದಲ್ಲಿ 17 ಲಕ್ಷ ಕೋಟಿ ಇದ್ದ ಬಜೆಟ್ ಗಾತ್ರ ಈಗ 50.65 ಲಕ್ಷ ಕೋಟಿಗೆ ಏರಿಕೆಯಾಗಿದೆ. ವಿದೇಶದಲ್ಲಿರುವ ಬುಲೆಟ್ ರೈಲು ಒಂದೆರಡು ವರ್ಷದಲ್ಲಿ ಭಾರತದಲ್ಲಿಯೂ ಸಂಚರಿಸಲಿವೆ. 11 ವರ್ಷದಲ್ಲಿ 4 ಕೋಟಿ ಮನೆ, 11 ಕೋಟಿ ಶೌಚಾಲಯ ನಿರ್ಮಾಣ ಮಾಡಿದ್ದು, 27 ಕೋಟಿ ಜನರು ಬಡತನ ರೇಖೆಯಿಂದ ಪಲ್ಲಟಗೊಳಿಸಿ ಅವರ ಆರ್ಥಿಕ ಸ್ಥಿತಿ ಉತ್ತಮವಾಗಿಸಲು ಶ್ರಮಿಸಿದೆ ಎಂದು ಮಾಹಿತಿ ನೀಡಿದರು.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಪ್ರತಿಯೊಬ್ಬ ಭಾರತೀಯನ ಕನಸಾಗಿತ್ತು. ಒಂದು ವೇಳೆ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾದರೆ ಅಲ್ಲೋಲ–ಕಲ್ಲೋಲವಾಗುತ್ತದೆ ಎನ್ನುತ್ತಿದ್ದರು. ಆದರೆ ನರೇಂದ್ರ ಮೋದಿ ಅವರು ರಾಮಮಂದಿರ ಕೂಡ ನಿರ್ಮಾಣ ಮಾಡಿದ್ದಾರೆ ಎಂದು ಅಶೋಕ್ ತಿಳಿಸಿದರು.

ಜೂ.16, ಪೆನ್‌ಷನ್ ಅದಾಲತ್

ಮೈಸೂರು,ಜೂ.12– ಮೈಸೂರು ವಿಭಾಗ ಅಂಚೆ ಇಲಾಖೆಯ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಜೂ.16 ರಂದು ಬೆಳಗ್ಗೆ 11 ಗಂಟೆಗೆ ಪೆನ್‌ಷನ್ ಅದಾಲತ್ ಏರ್ಪಡಿಸಲಾಗಿದ್ದು, ಇದಕ್ಕೆ ಸಂಬಂಧ ಪಟ್ಟಂತೆ ತಮ್ಮ ಅಹವಾಲುಗಳೇ ನಾದರೂ ಇದ್ದಲ್ಲಿ, ಜೂನ್ 14 ರೊಳಗೆ ಹಿರಿಯ ಅಂಚೆ ಅಧೀಕ್ಷಕರ ಕಚೇರಿಗೆ ಸಲ್ಲಿಸಲು ಅವಕಾಶವಿರುತ್ತದೆ. ಆಸಕ್ತ ಪಿಂಚಣಿದಾರರು ಅದಾಲತ್‌ನಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.12– ಜೂನ್ 13 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯ ನಿಮಿತ್ತ ಧನಗಳ್ಳಿ, ಸಾಲುಂಡಿ, ಕೆಲ್ಲಹಳ್ಳಿ, ಉಬ್ಬೂರು, ಟಿ.ಕಾಟೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ವಿರೋಧ ಆದರೆ ಕಾವೇರಿ ಆರತಿಗೆ ಬೆಂಬಲ

ಸಂಸದ ಯದುವೀರ್ ದ್ವಂದ್ವ ಹೇಳಿಕೆ

ರಾಜವಂಶಸ್ಥರ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುತ್ತೇನೆ

"ಮೈಸೂರು–ಕೊಡಗು ಸಂಸದನಾಗಿದ್ದರೂ ಮಂಡ್ಯ ಜಿಲ್ಲೆಯ ಮೇಲೆ ವಿಶೇಷ ಕಾಳಜಿ ಇದೆ. ಯಾಕೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಿಲ್ಲೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅಭಿವೃದ್ಧಿ ವಿಚಾರವಾಗಿ ನನ್ನ ಕ್ಷೇತ್ರಗಳೂ ಸೇರಿದಂತೆ ಮಂಡ್ಯ, ಹಾಸನ, ಚಾಮರಾಜನಗರ ಸೇರಿ ರಾಜ್ಯದ ಸಮಸ್ಯೆಗಳನ್ನು ಬಗೆಹರಿಸಲು ಸಿದ್ಧನಿದ್ದೇನೆ. ಇತ್ತೀಚೆಗೆ ಸಂಸತ್‌ನಲ್ಲಿ ಬಂಡೀಪುರ ರಾತ್ರಿ ಸಂಚಾರದ ಬಗ್ಗೆಯೂ ಸಹ ಧ್ವನಿ ಎತ್ತಿದ್ದೆ. ರಾಜ್ಯದ ಸಮಸ್ಯೆ ಬಂದಾಗ ರಾಜವಂಶಸ್ಥನಾಗಿ ಸಮಸ್ಯೆ ಬಗೆಹರಿಸಲು ಸಿದ್ಧನಿದ್ದೇನೆ"



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್.

ಎಚ್‌ಡಿಕೆ ಅವರೊಂದಿಗೆ ಸೇರಿ ಕೈಗಾರಿಕೆ ತರಲು ಪ್ರಯತ್ನ

"ನಾನು ಮೈಸೂರು–ಕೊಡಗು ಕ್ಷೇತ್ರ ಪ್ರತಿನಿಧಿಸಿದರೆ ಮಂಡ್ಯ ಕ್ಷೇತ್ರವನ್ನು ಎಚ್.ಡಿ.ಕುಮಾರಸ್ವಾಮಿ ಅವರು ಪ್ರತಿನಿಧಿಸುತ್ತಿದ್ದಾರೆ. ಅವರು ಉಕ್ಕು ಮತ್ತು ಭಾರಿ ಕೈಗಾರಿಕೆ ಮಂತ್ರಾಲಯದ ಸಚಿವರಾಗಿದ್ದಾರೆ. ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿ ಮಂಡ್ಯ, ಮೈಸೂರು ಜಿಲ್ಲೆ ಸೇರಿದಂತೆ ಹಳೇ ಮೈಸೂರು ಭಾಗದಲ್ಲಿ ಕೈಗಾರಿಕೆಗಳನ್ನು ತರಲು ಸಿದ್ಧವಿದ್ದೇವೆ."

ಮಂಡ್ಯ, ಜೂ.12– ರಾಜ್ಯ ಸರ್ಕಾರ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆಯ ಹಿತದೃಷ್ಟಿಯಿಂದ ಬೃಂದಾವನದಲ್ಲಿ ಸಾವಿರಾರೂ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ನಮ್ಮ ವಿರೋಧವಿದ್ದು, ಸಂಸ್ಕೃತಿ, ಪರಂಪರೆಯ ಪ್ರತೀಕವಾದ ಗಂಗಾರತಿ ಮಾದರಿಯ ಕಾವೇರಿ ಆರತಿಗೆ ನಮ್ಮ ಬೆಂಬಲವಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದ್ವಂದ್ವ ಹೇಳಿಕೆ ನೀಡಿದರು.

ಗುರುವಾರ ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆಯೇ ನಾನು ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ವಿರೋಧ ವ್ಯಕ್ತಪಡಿಸಿದ್ದೆ. ಇದಕ್ಕೆ ಪ್ರಮುಖ ಕಾರಣ ಮಂಡ್ಯ ಜಿಲ್ಲೆಯ ರೈತರು, ಸಾರ್ವಜನಿಕರು ಹಾಗೂ ಸ್ಥಳೀಯರು ವಿರೋಧ ವ್ಯಕ್ತಪಡಿಸುವಾಗ ಕಾಳಜಿವುಳ್ಳ ಜನಪ್ರತಿನಿಧಿಯಾಗಿ, ರಾಜವಂಶಸ್ಥನಾಗಿ ಜನರ ಭಾವನೆಗೆ ಸ್ಪಂದಿಸುವುದು ನಮ್ಮ ಕರ್ತವ್ಯ ಎಂದು ಸ್ಪಷ್ಟಪಡಿಸಿದರು.

ಕೆಆರ್‌ಎಸ್ ಡ್ಯಾಂಗೆ ನೂರು ವರ್ಷ ಕಳೆದಿದೆ. ಇದು ಸೂಕ್ಷ್ಮ ಪ್ರದೇಶವಾಗಿದ್ದು, ಪ್ರಕೃತಿದತ್ತವಾಗಿದೆ. ಡ್ಯಾಂನ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸಾರ್ವಜನಿಕರು ತಮ್ಮ ಭಾವನೆ ವ್ಯಕ್ತಪಡಿಸಿದ್ದಾರೆ. ಆ ಭಾವನೆಗೆ ಬೆಲೆ ಕೊಡಬೇಕಾದ್ದು ನಮ್ಮ ಆದ್ಯ ಕರ್ತವ್ಯ ಎಂದರು.

ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕೆಂಬುದು ನಮ್ಮ ಉದ್ದೇಶವೂ ಕೂಡ ಆಗಿದೆ. ಆದರೆ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಜಿಲ್ಲೆಯಲ್ಲಿ ಸಾಕಷ್ಟು ಪ್ರವಾಸಿತಾಣಗಳಿವೆ. ಕೆಆರ್‌ಎಸ್‌ನಂಥ ಸೂಕ್ಷ್ಮ ಪ್ರದೇಶದಲ್ಲಿ ಪಾರ್ಕ್ ನಿರ್ಮಾಣ ಸರಿಯಲ್ಲ. ಈಗಾಗಲೇ ಬೃಂದಾವನಕ್ಕೆ ನಿತ್ಯ ಸಾವಿರಾರು ಪ್ರವಾಸಿಗರು ಬರುತ್ತಾರೆ. ರಜಾ ದಿನಗಳಂತೂ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಅಲ್ಲಿಗೆ ಬರುವ ಪ್ರವಾಸಿಗರೇ ಸಾಕು, ಹೆಚ್ಚಿನ ಪ್ರವಾಸೋದ್ಯಮದ ಉತ್ತೇಜನ ಅವಶ್ಯಕತೆ ಇಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾವೇರಿ ಆರತಿಗೆ ಬೆಂಬಲ: ಗಂಗಾರತಿ ಮಾದರಿಯಲ್ಲಿ ರಾಜ್ಯ ಸರ್ಕಾರ ಕಾವೇರಿ ಆರತಿ ಮಾಡಲು ಹೊರಟಿರುವುದು ಒಳ್ಳೆಯ ವಿಚಾರ. ನಮ್ಮ ಸಂಸ್ಕೃತಿ, ಪರಂಪರೆ, ಹಿಂದೂ ಧರ್ಮವನ್ನು ಬಿಂಬಿಸುವ ಕಾರ್ಯಕ್ರಮವನ್ನು ಮಾಡಲು ಹೊರಟಾಗ ಬೆಂಬಲಿಸುವುದು ನಮ್ಮ ಕರ್ತವ್ಯ. ಆದರೆ ಈ ಆರತಿಗೆ ನೂರು ಕೋಟಿ ರೂ. ಖರ್ಚು ಮಾಡುತ್ತಿದ್ದಾರೆ ಎಂಬುದು ಹಾಸ್ಯಾಸ್ಪದ ವಿಚಾರ. ನಮ್ಮ ಬಿಜೆಪಿ ಪಕ್ಷಕ್ಕೆ ಆರತಿಯ ಜವಾಬ್ದಾರಿ ನೀಡಿದರೆ, ಉಚಿತವಾಗಿ ಕಾವೇರಿ ಆರತಿ ಮಾಡುವುದಾಗಿ ಹೇಳಿದರು.

ಶೀಘ್ರ ಎಕ್ಸ್‌ಪ್ರೆಸ್ ವೇ ಟೋಲ್ ಸಮಸ್ಯೆ ನಿವಾರಣೆ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನ ಟೋಲ್ ಸಮಸ್ಯೆ ಹೆಚ್ಚಾಗಿರುವ ಬಗ್ಗೆ ಪ್ರಯಾಣಿಕರು ಆಗಾಗ್ಗೆ ದೂರುಗಳು ನೀಡುತ್ತಿದ್ದು, ಈ ನಿಟ್ಟಿನಲ್ಲಿ ಟೋಲ್ ಸಮಸ್ಯೆ ನಿವಾರಣೆಗೆ ಸಂಬಂಧಿಸಿದವರೊಂದಿಗೆ ಮಾತುಕತೆ ನಡೆಸಿದ್ದು, ಶೀಘ್ರ ಸಮಸ್ಯೆ ನಿವಾರಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಮೈಸೂರಿನಿಂದ ಮಂಡ್ಯ ಅಥವಾ ಮೈಸೂರಿನಿಂದ ರಾಮನಗರಕ್ಕೆ ತೆರಳುವ ವರು ಬೆಂಗಳೂರಿನವರೆಗೆ ಟೋಲ್ ಕಟ್ಟಬೇಕಿದೆ. ಇದು ಪ್ರಯಾಣಿಕರ ಜೇಬಿಗೆ ಕತ್ತರಿ ಬೀಳುತ್ತಿದ್ದು, ಇದರ ಬಗ್ಗೆ ಸಾಕಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ ಆಯಾಯ ಪ್ರದೇಶಗಳಲ್ಲಿ ಟೋಲ್ ಬೂತ್‌ಗಳನ್ನು ನಿರ್ಮಿಸಲು ಹೆದ್ದಾರಿ ಪ್ರಾಧಿಕಾರ ಸಿದ್ಧತೆ ನಡೆಸಿದೆ ಎಂದು ತಿಳಿಸಿದರು.

ಕುಖ್ಯಾತ ಮನೆಗಳ್ಳನ ಬಂಧನ; 40 ಲಕ್ಷ ವೆಚ್ಚದ ಚಿನ್ನಾಭರಣ ವಶ

ಮಂಡ್ಯ, ಜೂ.12– ನಾಗಮಂಗಲ, ತುಮಕೂರು ಜಿಲ್ಲೆಯ ತುರುವೇಕೆರೆ ಹಾಗೂ ಕುಣಿಗಲ್ ತಾಲೂಕಿನ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಗಳ್ಳತನ ಮಾಡುತ್ತಿದ್ದ ಕುಖ್ಯಾತ ಕಳ್ಳನನ್ನು ಮಾಲು ಸಮೇತ ನಾಗಮಂಗಲ ಪೊಲೀಸರು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ನಗರದ ಎಸ್ಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಜಿಲ್ಲೆಯ ಹಾಲೂರು ತಾಲೂಕಿನ ಮುದಿಗೆರೆ ಗ್ರಾಮದ ರಂಗೇಗೌಡ ಆಲಿಯಾಸ್ ಸಂತೋಷ್ ಆಲಿಯಾಸ್ ಐಪಿಎಲ್ ಸಂತೋಷ ಬಂಧಿತ ಆರೋಪಿಯಾಗಿದ್ದು, ಈತನಿಂದ 40 ಲಕ್ಷ ರೂ. ಮೌಲ್ಯದ 490 ಗ್ರಾಂ ತೂಕದ ಚಿನ್ನಾಭರಣ, ಒಂದು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ವಿವರಿಸಿದರು.

ಮೇ 18ರಂದು ನಾಗಮಂಗಲ ತಾಲೂಕಿನ ಬಿದರಕೆರೆ ಗ್ರಾಮದ ಗಂಗೇಗೌಡ ಎಂಬುವರ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಮನೆಗೆ ನುಗ್ಗಿ ಬೀಗದ ಕೀ ತೆಗೆದು ಬೀರುವಿನಲ್ಲಿದ್ದ ಸುಮಾರು 20 ಗ್ರಾಂ ತೂಕದ ಚಿನ್ನಾಭರಣ ಮತ್ತು 97 ಸಾವಿರ ನಗದನ್ನು ಕಳ್ಳತನ ಮಾಡಿದ್ದರು. ಇದರ ಬಗ್ಗೆ ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಬಿಂಡಿಗನವಿಲೆ ಪೊಲೀಸರು ಎಎಸ್ಪಿಗಳಾದ ತಿಮ್ಮಯ್ಯ ಹಾಗೂ ಗಂಗಾಧರಸ್ವಾಮಿ ನೇತೃತ್ವದಲ್ಲಿ ಹಾಗೂ ಡಿವೈಎಸ್ಪಿ ಚಲುವರಾಜು ಮಾರ್ಗದರ್ಶನದಲ್ಲಿ ಸಿಪಿಐ ನಿರಂಜನ್, ಪಿಎಸ್‌ಐಗಳಾದ ರವಿಕುಮಾರ್, ಮಾರುತಿ, ಪ್ರಶಾಂತ್, ಪ್ರಶಾಂತ್ ಕುಮಾರ್, ಮಧುಕುಮಾರ್, ಇಂದ್ರಕುಮಾರ್, ಲೋಕೇಶ್, ದಿನೇಶ್ ನೇತೃತ್ವದ ತಂಡ ರಚನೆ ಮಾಡಲಾಗಿತ್ತು ಅದರಂತೆ ಆರೋಪಿಯನ್ನು ಜೂ.1ರಂದು ಹಾಸನ ಟೌನ್‌ನಲ್ಲಿ ಬಂಧಿಸಿ ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದು ತಪ್ಪೊಪ್ಪಿಕೊಂಡಿದ್ದಾನೆ.



ಮನೆಗಳ್ಳನನ್ನು ಬಂಧಿಸಿ ಅತನಿಂದ ವಶಪಡಿಸಿಕೊಂಡಿರುವ ಚಿನ್ನಾಭರಣಗಳು.

ಬಂಧಿತ ಆರೋಪಿಯ ವಿರುದ್ಧ ಬಿಂಡಿಗನವಿಲೆ ಠಾಣೆಯಲ್ಲಿ ಮೂರು ಪ್ರಕರಣ, ಬೆಳ್ಳೂರು ಠಾಣೆಯಲ್ಲಿ 4 ಪ್ರಕರಣ, ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಒಂದು ಪ್ರಕರಣ, ತುಮಕೂರು ಜಿಲ್ಲೆಯ ತುರುವೇಕೆರೆ ಮತ್ತು ಕುಣಿಗಲ್ ತಾಲೂಕಿನ ಹುಲಿಯೂರು ದುರ್ಗ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದೆ. ಆರೋಪಿಯನ್ನು ನ್ಯಾಯಾಂಗ ಒಪ್ಪಿಸಲಾಗಿದೆ ಎಂದು ತಿಳಿಸಿದರು. ಆರೋಪಿ ಪತ್ತೆ ಹಚ್ಚಿದ ತಂಡವನ್ನು ಎಸ್ಪಿ ಪ್ರಶಂಸಿಸಿದ್ದಾರೆ.

ನಿಂತ ನೀರು ಸೊಳ್ಳೆ, ರೋಗಗಳ ತಾಣ




ಕಿಕ್ಕೇರಿ: ಒಂದೆಡೆ ನಿಲ್ಲುವ ನೀರು ಕಲುಷಿತವಾಗಿ ಸೊಳ್ಳೆ ಗಳ ವಂಶಾಭಿವೃದ್ಧಿಗೆ ಅವಕಾಶ ನೀಡಿ, ವಿವಿಧ ರೋಗ ಹರಡಲು ಸಹಾಯವಾಗಲಿದೆ ಎಂದು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಾಗೇಂದ್ರ ಹೇಳಿದರು.

ಪಟ್ಟಣದ ಕೆಪಿಎಸ್ ಪದವಿಪೂರ್ವ ಕಾಲೇಜಿನಲ್ಲಿ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಕಾಲೇಜು ವಿಭಾಗದ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡೆಂಗ್ಯೂ, ಚಿಕನ್‌ಗೂನ್ಯಾ ಜಾಗ್ರತಿ ಕಾರ್ಯಕ್ರಮದಲ್ಲಿ ಮಾತನಾಡಿ, ಪರಿಸರ ಶುಚಿತ್ವ ನೈರ್ಮಲ್ಯತೆ ಬಲುಮುಖ್ಯ, ಮಳೆಗಾಲದಲ್ಲಿ ಸೊಳ್ಳೆಗಳ ಹಾವಳಿ ಹೆಚ್ಚಿದೆ. ವಾತಾವರಣ ಶೀತಮಯವಾಗುವುದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚು. ಡೆಂಘೆ ರೋಗ ಕಲುಷಿತ ನೀರಿಗಿಂತ ಶುದ್ಧವಾದ ನೀರಿನಲ್ಲಿ ಉತ್ಪತ್ತಿಯಾಗುವ ಸೊಳ್ಳೆಗಳಿಂದ ಬರಲಿದೆ ಸೊಳ್ಳೆಗಳು ಹಗಲುವೇಳೆ ಕಡಿಯಲಿವೆ. ಮೈಮುಚ್ಚುವ ಬಟ್ಟೆಗಳನ್ನು ಸಾಧ್ಯವಾದಷ್ಟು ಬಳಸಿ. ನಿಂತ ನೀರು, ರೆಫ್ರಿಜರೇಟರ್, ಏರ್ ಕೂಲರ್, ಹೂವಿನ ಕುಂಡ, ಪ್ಲಾಸ್ಟಿಕ್ ವಸ್ತು, ಟೈರ್, ತೆಂಗಿನ ಚಿಪ್ಪು ಸೊಳ್ಳೆಗಳ ಅವಾಸಸ್ಥಾನವಾಗಿದ್ದು ಎಚ್ಚರಿಕೆ ಇರಲಿ ಎಂದರು.

ಎನ್‌ಎಸ್‌ಎಸ್ ಘಟಕಾಧಿಕಾರಿ ಜಿ.ಎನ್. ಕುಮಾರಸ್ವಾಮಿ, ಉಪನ್ಯಾಸಕ ಎನ್. ರವೀಂದ್ರ ಎ.ಎಂ.ಮಂಜುನಾಥ್, ಎನ್.ಎ. ನಾಗೇಶ್, ಜಿ.ರಮೇಶ್, ಎಂ.ವಿನಾಯಕ ಇದ್ದರು.

ನಾಗರಾಜು ನಿಧನ



ಕೆ.ಆರ್.ಪೇಟೆ: ತಾಲೂಕಿನ ವೀರಶೈವ ಸಮಾಜದ ಮುಖಂಡರು, ಪಟ್ಟಣದ ಶ್ರೀ ಮಂಜುನಾಥ ಟ್ರೇಡರ್ಸ್ ಗೊಬ್ಬರದ ಅಂಗಡಿಯ ಮಾಲೀಕರಾದ ನಾಗರಾಜು(85) ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಜೂ.13ರಂದು ಮಧ್ಯಾಹ್ನ ಪಟ್ಟಣದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಕಸಿತ ಭಾರತಕ್ಕೆ ಪ್ರಧಾನಿ ಮೋದಿ ಭದ್ರ ಬುನಾದಿ

ಮಂಡ್ಯ,ಜೂ.12– ಕಳೆದ 2014ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಮೋದಿ ಅವರು, ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಅಡಿಯಲ್ಲಿ ವಿಕಸಿತ ಭಾರತಕ್ಕೆ ಭದ್ರ ಬುನಾದಿ ಹಾಕಿದ್ದು, ಭಯೋತ್ಪಾದನೆ ನಿರ್ಮೂಲನೆ, ಜಮ್ಮುಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ರದ್ದು, ಸ್ವಚ್ಛ ಭಾರತ್, ವಸತಿ, ವಿದೇಶಿ ನೇರ ಹೂಡಿಕೆ, ಉದ್ಯೋಗ ಸೃಷ್ಟಿ, ಹಣದುಬ್ಬರ ನಿಯಂತ್ರಣ, ಬಡತನ ನಿರ್ಮೂಲನೆ, ತೆರಿಗೆ ಸಂಗ್ರಹ ಸೇರಿದಂತೆ ಜನಪರ ಕೆಲಸಕ್ಕೆ ಭದ್ರ ಬುನಾದಿ ಹಾಕಿದ್ದಾರೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರಶಂಸಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 10 ವರ್ಷದ ಯುಪಿಎ ಸರ್ಕಾರದಲ್ಲಿ ಹಣದುಬ್ಬರ ಶೇ.8.2ರಷ್ಟು ಇತ್ತು. 11 ವರ್ಷಗಳ ಎನ್‌ಡಿಎ ಸರ್ಕಾರದಲ್ಲಿ ಶೇ.5ರಷ್ಟು ಕುಸಿದಿದೆ. ಎರಡು ಯುಪಿಎ ಸರ್ಕಾರದಲ್ಲಿ ಕೇವಲ 2 ಕೋಟಿ ಮಾತ್ರ ಉದ್ಯೋಗ ಸೃಷ್ಟಿಯಾಗಿತ್ತು. ಆದರೆ ನಮ್ಮ ಸರ್ಕಾರದಲ್ಲಿ 17 ಕೋಟಿ ಉದ್ಯೋಗ ಸೃಷ್ಟಿಯಾಗಿದೆ. ಯುಪಿಎ ಸರ್ಕಾರದಲ್ಲಿ ಬಡತನ ರೇಖೆ ಶೇ.29.2ರಷ್ಟಿತ್ತು. ಎನ್‌ಡಿಎ ಅವಧಿಯಲ್ಲಿ ಶೇ.11.3ರಷ್ಟು ಕಡಿಮೆಯಾಗಿದೆ. ಯುಪಿಎ ಅವಧಿಯಲ್ಲಿ ಆದಾಯ ತೆರಿಗೆ 3.9 ಕೋಟಿ ಇತ್ತು. ಎನ್‌ಡಿಎ ಅವಧಿಯಲ್ಲಿ 9.2 ಕೋಟಿಗೆ ಏರಿಕೆಯಾಗಿದೆ. ಎಫ್‌ಡಿಐ ಯುಪಿಎ ಅವಧಿಯಲ್ಲಿ 308 ಬಿಲಿಯನ್ ಇತ್ತು. ನಮ್ಮ ಅವಧಿಯಲ್ಲಿ 748 ಬಿಲಿಯನ್‌ಗೆ ಹೆಚ್ಚಿದೆ. ಯುಪಿಎ ಸರ್ಕಾರದಲ್ಲಿ ಮೆಟ್ರೋ ಕೇವಲ ಐದು ನಗರ ಸೇರಿದಂತೆ 248 ಕಿ.ಮೀ ಮಾತ್ರ ನಿರ್ಮಾಣವಾಗಿತ್ತು. ಆದರೆ ಎನ್‌ಡಿಎ ಅವಧಿಯಲ್ಲಿ ದೇಶದ 29 ನಗರಗಳಲ್ಲಿ 1013 ಕಿ.ಮೀ ನಿರ್ಮಾಣವಾಗಿದೆ ಎಂದು ವಿವರಿಸಿದರು.

ಮನ್‌ಮುಲ್ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಿ

ಪಾಂಡವಪುರ: ಮನ್‌ಮುಲ್ ಒಕ್ಕೂಟದಿಂದ ಹಾಲು ಉತ್ಪಾದಕ ರೈತರಿಗೆ ದೊರೆಯುವ ಎಲ್ಲಾ ಸೌಲಭ್ಯಗಳ ಬಗ್ಗೆ ಡೇರಿ ಕಾರ್ಯದರ್ಶಿಗಳು, ಅಧಿಕಾರಿಗಳು ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಪಟ್ಟಣದ ಮನ್‌ಮುಲ್ ಉಪ ಕಚೇರಿಯಲ್ಲಿ ನಡೆದ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಗುಂಪು ವಿಮೆ, ರಾಸುವಿಮೆ, ರೈತ ಕಲ್ಯಾಣ ಟ್ರಸ್ಟ್ ಹಾಗೂ ಶಿಕ್ಷಣ ಪ್ರೋತ್ಸಾಹ ಧನದ ಚೆಕ್‌ಗಳನ್ನು ವಿತರಣೆ ಮಾಡಿ ಬಳಿಕ ಮಾತನಾಡಿದರು.

ರೈತರು ರಾಸುಗಳಿಗೆ ವಿಮೆ ಹಾಗೂ ಷೇರುದಾರರಿಗೆ ಗುಂಪು ವಿಮೆ ಮಾಡಿಸುವುದರಿಂದ ಸಾಕಷ್ಟು ಅನುಕೂಲವಿದೆ. ರಾಸುಗಳ ಅಕಾಲಿಕ ಮರಣ ಹೊಂದಿದರೆ ಸಂಕಷ್ಟದ ಸಮಯದಲ್ಲಿ ವಿಮೆ ಹಣ ದೊರೆಯುತ್ತದೆ, ವಿಮೆ ಮಾಡಿಸದೆ ಹಸು ಸಾವನ್ನಪ್ಪಿದರೆ ನಯಾಪೈಸೆ ಪರಿಹಾರ ದೊರೆಯುವುದಿಲ್ಲ. ಜತೆಗೆ ಗುಂಪು ವಿಮೆ ಯೋಜನೆಯಡಿ ಹಾಲು ಉತ್ಪಾದಕ ಷೇರುದಾರರು 200 ರೂ. ಹಾಗೂ ಷೇರುದಾರರ 400 ವಿಮೆ ಪಾವತಿಸಿದರೆ ಷೇರುದಾರರ ಅಕಾಲಿಕ ಮರಣಕ್ಕೆ ಒಳಗಾಗದೆ 50 ಸಾವಿರ ವಿಮೆ ಸೌಲಭ್ಯ ದೊರೆಯಲಿದೆ ಹಾಗಾಗಿ ಇದರ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದರು.



ವಿಮೆ ಚೆಕ್‌ಗಳನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ವಿತರಿಸಿದರು.

ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್ ಮಾತನಾಡಿದರು. ಇದೇ ವೇಳೆ ಮನ್‌ಮುಲ್ ಒಕ್ಕೂಟದಿಂದ 4.45 ಲಕ್ಷ ಮೌಲ್ಯದ ಚೆಕ್‌ಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಹಾಯಕ ವ್ಯವಸ್ಥಾಪಕ ಡಾ.ಪ್ರಕಾಶ್ ಬೆಳಗಲಿ, ಮಾರ್ಗ ವಿಸ್ತರ್ಣಾಧಿಕಾರಿಗಳಾದ ಜಗದೀಶ್, ಮಧುಶಂಕರ್, ಉಷಾ, ಪ್ರಜ್ವಲ್‌ಗೌಡ, ನಾಗೇಂದ್ರ ಇದ್ದರು.

ಒಂದನೇ ಪುಟದಿಂದ

ಏರ್ ಇಂಡಿಯಾ ವಿಮಾನ ಪತನ; 241 ಮಂದಿ ಸಜೀವ ದಹನ



ಅದರ ಪೈಲಟ್ ಸುಮಿತ್ ಸಬರ್ವಾಲ್ ಅವರು ವಾಯುನಿಯಂತ್ರಣ ಘಟಕಕ್ಕೆ (ಎಟಿಸಿ) 'ಮೇಡೇ' 'ಮೇಡೇ' ಸಂದೇಶ ರವಾನಿಸುವ ಮೂಲಕ ವಿಮಾನ ಅಪಾಯದಲ್ಲಿದ್ದು, ನಮ್ಮ ಕೈಮೀರಿದೆ ಎಂಬ ಸಂದೇಶ ನೀಡಿದ್ದಾರೆ. ಅವರಿಗೆ ಎಟಿಸಿ ಅಧಿಕಾರಿಗಳು ಪ್ರತಿಕ್ರಿಯೆ ನೀಡುವಷ್ಟರಲ್ಲಿ ಸಂಪರ್ಕ ಕಡಿತಗೊಂಡಿದೆ.

ವಿಮಾನ ನಿಲ್ದಾಣದಿಂದ ಅನತಿ ದೂರದಲ್ಲಿಯೇ ಇರುವ ಫೊರೇನಿಕ್ಸ್ ಕ್ರಾಸ್ ರಸ್ತೆ ಬಳಿಯ ಬಿ.ಜೆ.ಮೆಡಿಕಲ್ ಕಾಲೇಜು ಹಾಸ್ಟೆಲ್‌ಗೆ ವಿಮಾನ ಅಪ್ಪಳಿಸಿದೆ. ಈ ರಭಸಕ್ಕೆ ವಿಮಾನವು ಹಾಸ್ಟೆಲ್‌ಗಳ ಗೋಡೆಗಳನ್ನು ಸೀಳಿಕೊಂಡು ಸುಮಾರು ಅರ್ಧ ಭಾಗ ಒಳ ನುಗ್ಗಿದ್ದಲ್ಲದೇ, ಕೆಲವೇ ಸೆಕೆಂಡ್‌ಗಳಲ್ಲಿ ಸ್ಫೋಟಗೊಂಡು ಬೆಂಕಿಯ ಜ್ವಾಲೆ ಮುಗಿಲೆತ್ತರಕ್ಕೆ ಹರಡಿದೆ. ಎಮರ್ಜೆನ್ಸಿ ಡೋರ್ ಮೂಲಕ ಹೊರ ಜಿಗಿದ ರಮೇಶ್ ವಿಶ್ವಾಸ್ ಕುಮಾರ್ ಹೊರತುಪಡಿಸಿ ವಿಮಾನದಲ್ಲಿದ್ದ 241 ಮಂದಿಯೂ ಸುಟ್ಟು ಕರಕಲಾಗಿದ್ದಾರೆ. ವಿಮಾನ ಹಾಸ್ಟೆಲ್ ಗೋಡೆ ಸೀಳಿಕೊಂಡು ಒಳ ನುಗ್ಗಿದ ವೇಳೆ, ಸುಮಾರು 20 ವಿದ್ಯಾರ್ಥಿಗಳು ಮೆಸ್‌ನಲ್ಲಿ ಮಧ್ಯಾಹ್ನದ ಊಟ ಮಾಡುತ್ತಿದ್ದರು ಎಂದು ಹೇಳಲಾಗುತ್ತಿದ್ದು, ಅವರಲ್ಲಿ ಐವರು ಸಾವನ್ನಪ್ಪಿದ್ದಾರೆ ಎಂದು ಪ್ರಾಥಮಿಕ ಮಾಹಿತಿಗಳು ತಿಳಿಸಿವೆ. ಹಲವರು ಗಾಯಗೊಂಡಿದ್ದು, ಎಲ್ಲರನ್ನೂ ಆಸ್ಪತ್ರೆಗೆ ಸೇರಿಸಲಾಗಿದೆ.

ಪರಿಹಾರ ಕಾರ್ಯ: ಪೈಲಟ್‌ನಿಂದ 'ಮೇಡೇ... ಮೇಡೇ...' ಸಂದೇಶ ಬರುತ್ತಿದ್ದಂತೆಯೇ ವಿಮಾನ ನಿಲ್ದಾಣದಲ್ಲಿದ್ದ ಅಗ್ನಿಶಾಮಕ ದಳ, ವೈದ್ಯಕೀಯ ತಂಡ ಹಾಗೂ ಭದ್ರತಾ ಸಿಬ್ಬಂದಿಯನ್ನು ಸಜ್ಜುಗೊಳಿಸಲಾಗಿತ್ತು. ಅಷ್ಟರಲ್ಲಾಗಲೇ ವಿಮಾನ ನಿಲ್ದಾಣಕ್ಕೆ ಅನತಿ ದೂರದಲ್ಲೇ ದುರಂತ ಸಂಭವಿಸಿದ್ದರಿಂದ ದುರಂತದ ಸ್ಥಳ ಪತ್ತೆ ಹಚ್ಚಲು ಹೆಚ್ಚು ಸಮಯ ಹಿಡಿದಿಲ್ಲ. ಅಹಮದಾಬಾದ್‌ನ ಎಲ್ಲಾ ಅಗ್ನಿಶಾಮಕ ದಳದ ಕಚೇರಿಗಳು, ಪ್ರಮುಖ ಆಸ್ಪತ್ರೆಗಳು ಹಾಗೂ ಎನ್‌ಡಿಆರ್‌ಎಫ್ ತಂಡಗಳಿಗೆ ಮಾಹಿತಿ ರವಾನಿಸಿದ್ದು, ಕೆಲ ನಿಮಿಷಗಳಲ್ಲೇ 500ಕ್ಕೂ ಹೆಚ್ಚು ರಕ್ಷಣಾ ಸಿಬ್ಬಂದಿ ಹಾಗೂ 7ಕ್ಕೂ ಹೆಚ್ಚು ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ದೌಡಾಯಿಸಿವೆ. ಆದರೆ, ವಿಮಾನ ಹೊತ್ತಿ ಉರಿಯುತ್ತಿದ್ದರಿಂದ ತಕ್ಷಣಕ್ಕೆ ರಕ್ಷಣಾ ಕಾರ್ಯ ನಡೆಸಲು ತೊಡಕುಂಟಾಗಿದ್ದು, ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿವೆ. ಅಷ್ಟರಲ್ಲೇ 20ಕ್ಕೂ ಹೆಚ್ಚು ಆಂಬುಲೆನ್ಸ್‌ಗಳು ಆಗಮಿಸಿದ್ದು, ಎಮರ್ಜೆನ್ಸಿ ಡೋರ್‌ನಿಂದ ಜಿಗಿದಿದ್ದ ರಮೇಶ್ ವಿಶ್ವಾಸ್ ಕುಮಾರ್ ಅವರನ್ನು ತಕ್ಷಣವೇ ರಕ್ಷಣಾ ಸಿಬ್ಬಂದಿ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ದರು. ಬೆಂಕಿ ನಂದಿಸಿದ ನಂತರ ವಿಮಾನದೊಳಗೆ ಸುಟ್ಟು ಕರಕಲಾಗಿದ್ದ ಶವಗಳನ್ನು ಹೊರ ತೆಗೆದು ಶವಾಗಾರಕ್ಕೆ ಸಾಗಿಸುವ ಕಾರ್ಯದಲ್ಲಿ ಪರಿಹಾರ ಕಾರ್ಯಾಚರಣೆ ಪಡೆ ತೊಡಗಿಸಿಕೊಂಡಿತು.

ಈ ವಿಮಾನದಲ್ಲಿ 169 ಭಾರತೀಯ ಪ್ರಜೆಗಳು, 53 ಬ್ರಿಟನ್ ಪ್ರಜೆಗಳು, ಕೆನಡಾದ ಓರ್ವ ಪ್ರಜೆ, 7 ಪೋರ್ಚುಗೀಸ್ ಪ್ರಜೆಗಳಿದ್ದರು. ಜೊತೆಗೆ ಪೈಲಟ್ ಸುಮಿತ್ ಸಬರ್ವಾಲ್, ಕೋ–ಪೈಲಟ್ ಕ್ಲೈವ್ ಕುಂದರ್ ಮತ್ತು 10 ಮಂದಿ ವಿಮಾನ ಸಿಬ್ಬಂದಿ ಇದ್ದರು. ಅಹಮದಾಬಾದ್‌ನಿಂದ ನೇರವಾಗಿ ಲಂಡನ್‌ಗೆ ತೆರಳುತ್ತಿದ್ದ ಈ ವಿಮಾನ 6859 ಕಿ.ಮೀ. ಕ್ರಮಿಸಬೇಕಿತ್ತು. ಅದಕ್ಕಾಗಿ ವಿಮಾನಕ್ಕೆ 80ರಿಂದ 90 ಟನ್ ದಹನಶೀಲ ವಾಯು ಯಾನ ಇಂಧನವನ್ನು ತುಂಬಲಾಗಿತ್ತು. ವಿಮಾನವು 825 ಅಡಿ ಎತ್ತರದಲ್ಲಿರುವಾಗಲೇ ತಾಂತ್ರಿಕ ದೋಷವುಂಟಾಗಿ ಕುಸಿದು, ಹಾಸ್ಟೆಲ್ ಗೋಡೆಗೆ ಅಪ್ಪಳಿಸಿದ ಪರಿಣಾಮ ವಿಮಾನದಲ್ಲಿದ್ದ ಭಾರೀ ಪ್ರಮಾಣದ ಇಂಧನಕ್ಕೆ ಬೆಂಕಿ ಹೊತ್ತಿಕೊಂಡು ಬಾಂಬ್ ಸ್ಫೋಟ ಮಾದರಿ, ಅಗ್ನಿಜ್ವಾಲೆ ಮುಗಿಲು ಮುಟ್ಟಿತ್ತು.

ಈ ದುರಂತದಲ್ಲಿ ಸಾವಿಗೀಡಾದ ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರು ಲಂಡನ್‌ನಲ್ಲಿ ಇರುವ ತಮ್ಮ ಮಗಳನ್ನು ನೋಡಿಕೊಂಡು ಪತ್ನಿಯನ್ನು ವಾಪಸ್ ಕರೆತರಲು ಹೋಗುತ್ತಿದ್ದರು ಎಂದು ಹೇಳಲಾಗಿದೆ.

ಸಹಾಯವಾಣಿ: ವಿಮಾನ ದುರಂತಕ್ಕೆ ಸಂಬಂಧಿಸಿದಂತೆ ಎಲ್ಲಾ ವಿವರಗಳನ್ನು ಸಂಗ್ರಹಿಸಲು ನಾಗರಿಕ ವಿಮಾನ ಯಾನ ಸಚಿವಾಲಯದಲ್ಲಿ ಕಾರ್ಯಾಚರಣಾ ನಿಯಂತ್ರಣ ಕೊಠಡಿಯನ್ನು ಸಕ್ರಿಯಗೊಳಿಸಲಾಗಿದೆ. ಅದಕ್ಕಾಗಿಯೇ ವಿಶೇಷವಾಗಿ 011–24610843 ಮತ್ತು 9650391859 ದೂರವಾಣಿ ಸಂಖ್ಯೆಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದು ವಿಮಾನಯಾನ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಸಂತ್ರಸ್ತರಿಗೆ ಸಹಾಯವಾಣಿ: ಇತ್ತ ಸಂತ್ರಸ್ತ ಕುಟುಂಬಗಳಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡಲು ಏರ್ ಇಂಡಿಯಾ ವಿಮಾನ ಯಾನಾ ಸಂಸ್ಥೆ ಹಾಟ್‌ಲೈನ್ ಸಂಖ್ಯೆ ಬಿಡುಗಡೆ ಮಾಡಿದೆ. ಟೋಲ್‌ಫ್ರೀ ಸಂಖ್ಯೆ 1800 5691 444 ಸಂಖ್ಯೆಯನ್ನು ಸಾರ್ವಜನಿಕರು ಸಂಪರ್ಕಿಸಬಹುದು ಎಂದು ಏರ್ ಇಂಡಿಯಾ ತಿಳಿಸಿದೆ.

ಎಎಐಬಿಯಿಂದ ತನಿಖೆ: ಏರ್ ಇಂಡಿಯಾ ವಿಮಾನ ಎಐ–171 ಪತನ ಕುರಿತು ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ತನಿಖೆ ನಡೆಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಎಐಬಿ ಮಹಾ ನಿರ್ದೇಶಕ ಮತ್ತು ಸ್ಥಳೀಯ ತನಿಖಾ ನಿರ್ದೇಶಕ ಸೇರಿದಂತೆ ಇತರ ಅಧಿಕಾರಿಗಳು ಇಂದು ರಾತ್ರಿಯೇ ಅಹಮದಾಬಾದ್ ತಲುಪಿದ್ದಾರೆ.

ಭಾರತದ ವಾಯು ಪ್ರದೇಶದಲ್ಲಿ ಸಂಭವಿಸುವ ವಿಮಾನಗಳ ಅಪಘಾತ ಮತ್ತು ಗಂಭೀರ ಸ್ವರೂಪದ ಘಟನೆಗಳಿಗೆ ಸಂಬಂಧಿಸಿದಂತೆ ಸುರಕ್ಷತಾ ಮಾನದಂಡಗಳ ಹಂಚಿಕೆಯ ಹೊಣೆ ಎಎಐಬಿಗೆ ಸೇರಿದ್ದು ಎಂದು ನಾಗರಿಕ ವಿಮಾನ ಯಾನ ಸಚಿವಾಲಯ ತಿಳಿಸಿದೆ. ಅಪಘಾತಗಳ ಕುರಿತು ಸಮಗ್ರ ತನಿಖೆ ನಡೆಸಲಿರುವ ಎಎಐಬಿ ಸುರಕ್ಷತಾ ಮಾನದಂಡಗಳನ್ನು ಸುಧಾರಿಸಲು ನಿರ್ದೇಶನ ನೀಡಲಿದೆ.

ತಲಾ ಕೋಟಿ ರೂ. ಪರಿಹಾರ: ವಿಮಾನ ಪತನದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ಒಂದು ಕೋಟಿ ರೂ. ಪರಿಹಾರ ನೀಡುವುದಾಗಿ ಏರ್ ಇಂಡಿಯಾ ವಾಯು ಯಾನಾ ಸಂಸ್ಥೆಯ ಮಾಲೀಕತ್ವ ಹೊಂದಿರುವ ಟಾಟಾ ಗ್ರೂಪ್ ಘೋಷಿಸಿದೆ. ಅಲ್ಲದೇ ಗಾಯಾಳುಗಳ ವೈದ್ಯಕೀಯ ವೆಚ್ಚವನ್ನು ಭರಿಸುವುದಾಗಿ ತಿಳಿಸಿದೆ. ಇದರ ಹೊರತಾಗಿಯೂ ವಿಮಾನ ಡಿಕ್ಕಿಯಿಂದ ಹಾನಿಗೊಳಗಾಗಿರುವ ಬಿ.ಜೆ.ಮೆಡಿಕಲ್ ಹಾಸ್ಟೆಲ್ ಕಟ್ಟಡದ ಕಾಮಗಾರಿ ನಡೆಸಲು ಸಹಾಯ ಮಾಡುವುದಾಗಿ ಭರವಸೆ ನೀಡಿದೆ.

ಬ್ರಿಟನ್ ಪ್ರಜೆ ರಮೇಶ್ ವಿಶ್ವಾಸ್ ಪಾರು

ಸಹೋದರನು ಬೇರೆ ಸೀಟಿನಲ್ಲಿ ಪ್ರಯಾಣಿಸುತ್ತಿದ್ದ. ಅವನು ಎಲ್ಲಿದ್ದಾನೋ ಹುಡುಕಬೇಕಿದೆ ಎಂದೂ ವಿಶ್ವಾಸ್ ಹೇಳಿದ್ದಾರೆ. ವಿಮಾನ ಟೇಕಾಫ್ ಆಗಿ ಸುಮಾರು 30 ಸೆಕೆಂಡ್‌ಗಳಲ್ಲೇ ನೆಲಕ್ಕೆ ಅಪ್ಪಳಿಸಿತು. ಆ ಸಂದರ್ಭದಲ್ಲಿ ನಾನು ತುರ್ತು ನಿರ್ಗಮನ ದ್ವಾರದಿಂದ ಹೊರಗೆ ಜಿಗಿದೆ. ಏಳುವಷ್ಟರಲ್ಲಿ ಸುತ್ತಲೂ ವಿಮಾನದ ಅವಶೇಷಗಳು ಚೆಲ್ಲಾಪಿಲ್ಲಿ ಯಾಗಿ ಬಿದ್ದಿದ್ದವು. ಶವಗಳು ಕೂಡ ಕಂಡವು. ಭಯಗೊಂಡು, ಎದ್ದು ಓಡಲಾರಂಭಿಸಿದೆ. ಆಗ ಕೆಲವರು ನನ್ನನ್ನು ಹಿಡಿದುಕೊಂಡು, ಆಂಬುಲೆನ್ಸ್‌ನಲ್ಲಿ ಕರೆದೊಯ್ದರು ಎಂದು ವಿಶ್ವಾಸ್ ಮಾಹಿತಿ ನೀಡಿದ್ದಾರೆ. ವಿಮಾನವು ನೆಲಕ್ಕೆ ಅಪ್ಪಳಿಸಿದಾಗ ಉಂಟಾದ ಪರಿಣಾಮದಿಂದಾಗಿ ಅವರ ಮುಖದ ಮೇಲೆ ಗಾಯಗಳಾಗಿವೆ. ಎದೆ, ಕಣ್ಣು ಹಾಗೂ ಪಾದಗಳಿಗೂ ಪೆಟ್ಟಾಗಿದೆ ಎಂದು ರಾಷ್ಟ್ರೀಯ ಪತ್ರಿಕೆ ವರದಿ ಮಾಡಿದೆ. ಇಪ್ಪತ್ತು ವರ್ಷಗಳಿಂದ ವಿಶ್ವಾಸ್ ಅವರು ಬ್ರಿಟನ್‌ನಲ್ಲಿ ನೆಲಸಿದ್ದು, ಅವರ ಪತ್ನಿ ಹಾಗೂ ಮಗು ಅಲ್ಲಿಯೇ ಇದ್ದಾರೆ.

ವಿಜಯ್ ರೂಪಾನಿ ಸಾವು

ಕ್ಲೈವ್ ಕುಂದರ್ ಸಹ–ಪೈಲಟ್ ಆಗಿ ಸೇವೆ ಸಲ್ಲಿಸುತ್ತಿದ್ದರು. ವಿಮಾನದಲ್ಲಿ 232 ಪ್ರಯಾಣಿಕರು ಮತ್ತು 12 ಸಿಬ್ಬಂದಿ ಸೇರಿ ಒಟ್ಟು 242 ಜನರು ಇದ್ದರು. ವಿಜಯ್ ರೂಪಾನಿ ಅವರು ಆಗಸ್ಟ್ 2016ರಿಂದ ಸೆಪ್ಟೆಂಬರ್ 2021ರವರೆಗೆ ಗುಜರಾತ್‌ನ 16ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ಆಗಸ್ಟ್ 2, 1956ರಂದು ರಂಗೂನ್‌ನಲ್ಲಿ (ಈಗ ಮ್ಯಾನ್ಮಾರ್‌ನ ಯಾಂಗೋನ್) ಜನಿಸಿದರು, ಅವರು ಭಾರತೀಯ ಜನತಾ ಪಕ್ಷದ (ಬಿಜೆಪಿ) ಪ್ರಮುಖ ನಾಯಕರಾಗಿದ್ದಾರೆ. ಅಹಮದಾಬಾದ್‌ನಿಂದ ಲಂಡನ್ ಗ್ಯಾಟ್ವಿಕ್‌ಗೆ ಮಧ್ಯಾಹ್ನ 3.38ಕ್ಕೆ ಹೊರಟ ವಿಮಾನವು ಬೋಯಿಂಗ್ 787–8 ವಿಮಾನದಲ್ಲಿ 242 ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿತ್ತು. ಪ್ರಯಾಣಿಕರ ಪೈಕಿ 169 ಭಾರತೀಯ ಪ್ರಜೆಗಳು, 53 ಬ್ರಿಟಿಷ್ ಪ್ರಜೆಗಳು, 1 ಕೆನಡಾ ಪ್ರಜೆ ಮತ್ತು 7 ಪೋರ್ಚುಗೀಸ್ ಪ್ರಜೆಗಳು ಇದ್ದರು. ಪ್ರಧಾನಿ ಮೋದಿ ಗೃಹ ಸಚಿವ ಅಮಿತ್ ಶಾ ಮತ್ತು ನಾಗರಿಕ ವಿಮಾನ ಯಾನ ಸಚಿವ ರಾಮ್ ಮೋಹನ್ ನಾಯ್ಡು ಅವರೊಂದಿಗೆ ಮಾತನಾಡಿದ್ದು, ಅಹಮದಾಬಾದ್‌ಗೆ ಹೋಗಿ ಸಾಧ್ಯವಿರುವ ಎಲ್ಲ ಪರಿಹಾರದ ಕಾರ್ಯದ ನೇತೃತ್ವ ವಹಿಸುವಂತೆ ಸೂಚಿಸಿದ್ದಾರೆ.

'ಮೇಡೇ ಮೇಡೇ' ಎನ್ನುತ್ತಿದ್ದಂತೆ ಪತನಗೊಂಡ ವಿಮಾನ!

ಇನ್ನೂ ಎಟಿಸಿಯ ಸಂಪರ್ಕವನ್ನು ಉಳಿಸಿಕೊಂಡಿತ್ತು. ಆದರೆ, ಪೈಲಟ್ ಟೇಕ್ ಆಫ್ ಆದ ಸ್ವಲ್ಪ ಸಮಯದ ನಂತರ ಅಪಘಾತದ ಸೂಚನೆ ಕಂಡುಕೊಂಡಿದ್ದರು. ಈ ಹಿನ್ನೆಲೆಯಲ್ಲಿ 'ಮೇಡೇ' ಸಂದೇಶ ಕಳುಹಿಸಿದ್ದರು. ಈ ಸಂದೇಶ ರವಾನಿಸಿದ ಬೆನ್ನಲ್ಲೇ ತುರ್ತು ಸಂದರ್ಭ ದಲ್ಲಿ ಕೈಗೊಳ್ಳಬೇಕಾದ ಪ್ರೋಟೋಕಾಲ್‌ಗಳನ್ನು ತಕ್ಷಣವೇ ಸಕ್ರಿಯಗೊಳಿಸಲಾಗಿತ್ತು. ಅಗ್ನಿಶಾಮಕ, ವೈದ್ಯಕೀಯ ತಂಡಗಳು ಮತ್ತು ಭದ್ರತಾ ಸಿಬ್ಬಂದಿಗಳನ್ನು ತಕ್ಷಣವೇ ಸ್ಥಳಕ್ಕೆ ರವಾನಿಸಲಾಗಿತ್ತು.



ಈ ಮೇಡೇ ಕಾಲ್ ಕೆಲಸ ಮಾಡುವುದು ಹೇಗೆ?: ಒಂದೊಮ್ಮೆ ಯಾವುದೇ ವಿಮಾನದ ಪೈಲಟ್ 'ಮೇಡೇ, ಮೇಡೇ, ಮೇಡೇ' ಎಂದು ಹೇಳುತ್ತಿದ್ದಾನೆ ಎಂದರೆ ಆತ ತಕ್ಷಣದ ಸಹಾಯ ಕೇಳುತ್ತಿದ್ದಾನೆ. ಮಾರಣಾಂತಿಕ ತುರ್ತು ಪರಿಸ್ಥಿತಿಯನ್ನು ಘೋಷಿಸುತ್ತಿದ್ದಾನೆ ಎಂದು ಅರ್ಥ. ಈ ಸಂದರ್ಭದಲ್ಲಿ ಎಲ್ಲಾ ಅನಿವಾರ್ಯವಲ್ಲದ ರೇಡಿಯೋ ಸಂವಹನಗಳೂ ಸ್ಥಗಿತಗೊಳ್ಳಬೇಕು ಹಾಗೂ ಎಟಿಸಿ ಎಂದು ಕರೆಯಲ್ಪಡುವ ವಾಯು ಸಂಚಾರ ನಿಯಂತ್ರಣವು ಆ ಕರೆಗೆ ಆದ್ಯತೆಯನ್ನು ನೀಡುತ್ತದೆ. ಇದಾದ ಬಳಿಕ ಪೈಲಟ್‌ಗಳು ಅಪಾಯದ ಪರಿಸ್ಥಿತಿ, ಸ್ಥಳ, ತುರ್ತುಸ್ಥಿತಿಯ ಸ್ವರೂಪ, ವಿಮಾನದಲ್ಲಿರುವ ಜನರ ಸಂಖ್ಯೆ ಮತ್ತು ಮನವಿಗಳೇನಾದರೂ ಇದ್ದಲ್ಲಿ ಅದನ್ನು ತಿಳಿಸುತ್ತಾರೆ. ಇದರಿಂದ ರಕ್ಷಣಾ ತಂಡಗಳಿಗೆ ವೇಗವಾಗಿ ಕಾರ್ಯನಿರ್ವಹಿಸಲು ಸಹಾಯವಾಗುತ್ತದೆ.

ಮತ್ತೊಮ್ಮೆ ಜಾತಿ ಗಣತಿ

ಮಧುಸೂದನ್ ನಾಯಕ್ ಅವರನ್ನು ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇನ್ನೆರಡು–ಮೂರು ದಿನಗಳಲ್ಲಿ ಉಳಿದ ಸದಸ್ಯರ ನೇಮಕ ಮಾಡಲಾಗುವುದು, ಗೆಜೆಟ್ ಅಧಿಸೂಚನೆ ಹೊರಡಿಸಿದ ನಂತರದ 90 ದಿನಗಳೊಳಗೆ ವರದಿ ನೀಡುವಂತೆ ತಿಳಿಸಲಾಗುವುದು.

ಕಾಂತರಾಜ್ ವರದಿ ಏನು ಮಾಡುತ್ತೀರಿ ಎಂಬ ಪ್ರಶ್ನೆಗೆ ಹಾರಿಕೆ ಉತ್ತರ ನೀಡಿದ ಮುಖ್ಯಮಂತ್ರಿ, ಕಾನೂನಿನ ಪ್ರಕಾರ ಹೊಸ ಸಮೀಕ್ಷೆ ಮಾಡುತ್ತಿದ್ದೇವೆ. 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 6.11 ಕೋಟಿ ಜನಸಂಖ್ಯೆ ಇತ್ತು, 2015 ರಲ್ಲಿ 6.35 ಕೋಟಿ ಜನಸಂಖ್ಯೆ ಇದೆ ಎಂಬುದಾಗಿ ಅಂದಾಜಿಸಲಾಗಿತ್ತು. ನಾನು ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಅಂದರೆ 2015ರಲ್ಲಿ ಜಾತಿಗಣತಿ ನಡೆಸಲು ಆಯೋಗವನ್ನು ಕೋರಲಾಗಿತ್ತು. 2011ರಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿ ಬಗ್ಗೆ ಸರ್ವೆ ನಡೆಸಲಾಗಿತ್ತು, 54 ಮಾನದಂಡ ಇಟ್ಟುಕೊಂಡು ಮನೆ ಮನೆಗೆ ತೆರಳಿ ಸರ್ವೆ ಮಾಡಿ ವರದಿ ಪಡೆದಿದ್ದೆವು, 1.60 ಲಕ್ಷ ಸಿಬ್ಬಂದಿ ಸಮೀಕ್ಷೆಯಲ್ಲಿ ಭಾಗಿಯಾಗಿದ್ದರು.

ಆಯೋಗ 5.98 ಕೋಟಿ ಜನರ ಸಮೀಕ್ಷೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆದರೆ, ಅಂತಿಮ ವರದಿ ಶಿಫಾರಸು ಸಲ್ಲಿಸುವ ವೇಳೆಗೆ ನಾನು ಅಧಿಕಾರದಲ್ಲಿ ಇರಲಿಲ್ಲ. ನಂತರ ಬಂದಂತಹ ಸರ್ಕಾರಗಳು ವರದಿ ಸ್ವೀಕರಿಸಿರಲಿಲ್ಲ. ನಂತರ ಕಾಂತರಾಜು ಸರ್ವೆ ದತ್ತಾಂಶ ಪಡೆದು ಜಯಪ್ರಕಾಶ್ ಹೆಗ್ಡೆ 2024ರ ಫೆಬ್ರವರಿ 29ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದರು. ಲೋಕ ಸಭಾ ಚುನಾವಣೆ ಹಿನ್ನೆಲೆಯಲ್ಲಿ ವರದಿ ಕುರಿತು ಚರ್ಚಿಸಲಿಲ್ಲ. ಬಳಿಕ ವರದಿ ಸ್ವೀಕರಿಸಿ 2025ರಲ್ಲಿ ಸಂಪುಟದ ಮುಂದೆ ಮಂಡಿಸಲಾಯಿತು. ಸಚಿವರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ ಎಂದರು. ಮೂರ್‍ನಾಲ್ಕು ಸಚಿವ ಸಂಪುಟ ಸಭೆಗಳಲ್ಲಿ ಚರ್ಚೆ ಮಾಡಿದ್ದೆವು. ವರದಿ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ಇಂದು ವಿಶೇಷ ಸಂಪುಟ ಸಭೆ ಕರೆಯಲಾಗಿತ್ತು.

ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ 10 ವರ್ಷಗಳ ಹಿಂದಿನ ವರದಿ ಜಾರಿಗೊಳಿಸುವುದರಿಂದ ಎಲ್ಲರಿಗೂ ನ್ಯಾಯ ದೊರಕಿಸಲು ಸಾಧ್ಯವಿಲ್ಲ, ಅಲ್ಲದೆ, ಕಾನೂನಿನಲ್ಲೂ ಇದಕ್ಕೆ ಅವಕಾಶ ಇಲ್ಲವೆಂದ ನಂತರ ಮರುಸಮೀಕ್ಷೆ ನಡೆಸಲು ಸಂಪುಟ ತೀರ್ಮಾನ ಮಾಡಿದೆ. ತೆಲಂಗಾಣ ಸರ್ಕಾರ 70 ದಿನಗಳಲ್ಲಿ ಸಮೀಕ್ಷೆ ನಡೆಸಿ ವರದಿ ಅನುಷ್ಠಾನಗೊಳಿಸಿದೆ. ನಾವೂ 90 ದಿನಗಳಲ್ಲಿ ಸಮೀಕ್ಷೆ ನಡೆಸಿ, ಹಿಂದುಳಿದ ವರ್ಗದವರನ್ನು ಗುರುತಿಸಿ ನ್ಯಾಯ ಕಲ್ಪಿಸಲಾಗುವುದು. ಯಾವ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸಬಹುದು ಅಥವಾ ಕೈಬಿಡಬಹುದು ಎಂಬ ನಿರ್ಧಾರ ಕೈಗೊಳ್ಳುವ ಪರಮಾಧಿಕಾರ ಆಯೋಗದ್ದಾಗಿರುತ್ತದೆ ಎಂದು ವಿವರಿಸಿದರು.

ಬಂಧಿತರಿಗೆ ಜಾಮೀನು

ರಿಟ್ ಅರ್ಜಿ ಸಲ್ಲಿಸಿದ್ದರು. ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಪರ ಅವರ ಪತ್ನಿ ಮಾಳವಿಕಾ ನಾಯಕ್, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಡೆಟ್ ಕಂಪನಿ ನಿರ್ದೇಶಕ ಸುನೀಲ್ ಮ್ಯಾಥ್ಯೂ ಪರವಾಗಿ ಅವರ ಪತ್ನಿ ರೋಷನಿ ಸುನೀಲ್, ಕಿರಣ್‌ಕುಮಾರ್ ಪರವಾಗಿ ಅವರ ಪತ್ನಿ ನಂದಿನಿ ಮತ್ತು ಶಮಂತ್ ಎನ್‌ಪಿ ಮಾವಿನಕೆರೆ ಅವರ ತಾಯಿ ನಿರ್ಮಲಾ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್‌ಆರ್ ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ಪೀಠ, ಬಂಧಿತರಿಗೆ ಷರತ್ತುಬದ್ಧ ಮಧ್ಯಂತರ ಜಾಮೀನು ನೀಡಿದ್ದು, ಅರ್ಜಿದಾರರು ತಮ್ಮ ಪಾಸ್‌ಪೋರ್ಟ್ ಅನ್ನು ಒಪ್ಪಿಸುವಂತೆ ಸೂಚಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಮಧ್ಯಂತರ ಆದೇಶವನ್ನು ಪೀಠವು ಗುರುವಾರ ಮಧ್ಯಾಹ್ನ ಪ್ರಕಟಿಸಿತು. ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ್ದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್‌ನ ಸುನಿಲ್ ಮ್ಯಾಥ್ಯೂ, ಕಿರಣ್‌ಕುಮಾರ್ ಎಸ್ ಮತ್ತು ಶಮಂತ್ ಎನ್‌ಪಿ ಮಾವಿನಕೆರೆ ಅವರನ್ನು ಜೂನ್ 6ರಂದು ಬಂಧಿಸಲಾಯಿತು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.12(ಎಸ್‌ಪಿಎನ್)– ಬಿಲ್ಡರ್ಸ್ ಅಸೋಸಿಯೇಷನ್ ಮೈಸೂರು ಘಟಕದ ವತಿಯಿಂದ ಕಟ್ಟಡ ಕಾರ್ಮಿಕರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಜು.5ರಂದು ಏರ್ಪಡಿಸಲಾಗಿದೆ. ಮೈಸೂರು ನಗರ ಮತ್ತು ಜಿಲ್ಲೆಯ ಕಟ್ಟಡ ಕಾರ್ಮಿಕರ ಮಕ್ಕಳು 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು 2ನೇ ಪಿಯುಸಿ ಪರೀಕ್ಷೆಯಲ್ಲಿ ಶೇ.80 ಅಥವಾ ಮೇಲ್ಪಟ್ಟು ಅಂಕಗಳನ್ನು ಗಳಿಸಿರುವವರು ಅವರ ಅಂಕಪಟ್ಟಿ, ಭಾವಚಿತ್ರ, ಕಾರ್ಮಿಕರ ಗುರುತಿನ ಚೀಟಿಯ ನಕಲು ಪ್ರತಿ, ಸರಿಯಾದ ವಿಳಾಸ ಮತ್ತು ಸಂಪರ್ಕ ದೂರವಾಣಿ ಸಂಖ್ಯೆಯನ್ನು 2025ರ ಜು.1ರೊಳಗೆ ಬಿಎಐ ಕಚೇರಿಗೆ ತಲುಪಿಸಬೇಕು. ವಿವರಗಳಿಗೆ ದೂ.ಸಂ: 0821–2483333, ಮೊ.ಸಂ: 9448057016 ಅನ್ನು ಸಂಪರ್ಕಿಸಬಹುದು ಬಿಎಐ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯಾದ್ಯಂತ ಕುಸುಮ್ ಸಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ



ಗೌರಿಬಿದನೂರಿನ ನೇತಾಜಿ ತಾಲೂಕು ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನ ಮಂತ್ರಿ ಕುಸುಮ್ ಸಿ ಸೌರ ಯೋಜನೆ ಉದ್ಘಾಟಿಸಿದರು.

ಗೌರಿಬಿದನೂರು, ಜೂ.12– ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ನೇತಾಜಿ ತಾಲೂಕು ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನ ಮಂತ್ರಿ ಕುಸುಮ್ ಸಿ ಸೌರ ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಿದರು.

ಯೋಜನೆಗೆ ಚಾಲನೆ ನೀಡಿದ ನಂತರ ಮಾತನಾಡಿದ ಅವರು, ಕುಸುಮ್ ಸಿ ಯೋಜನೆಯ ಮೊದಲ ಹಂತದಡಿ ಡಿಸೆಂಬರ್ ಅಂತ್ಯದ ವೇಳೆಗೆ ಪ್ರತಿದಿನ 2,400 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ರಾಜ್ಯವು ಹೊಂದಿದ್ದು, ಪ್ರಸ್ತುತ 200 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ ಎಂದು ಹೇಳಿದರು.

ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ರಾಜ್ಯ ಸರ್ಕಾರ 19,000 ಕೋಟಿ ರೂಪಾಯಿ ಸಬ್ಸಿಡಿ ನೀಡುತ್ತಿದೆ. ಕುಸುಮ್ ಸಿ ಯೋಜನೆಯಡಿ, ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನಲ್ಲಿ 7 ಗಂಟೆ ಕಾಲ 3–ಹಂತದ ವಿದ್ಯುತ್ ಒದಗಿಸಲಾಗುವುದು ಎಂದರು.

ಕುಸುಮ್ ಸಿ ಯೋಜನೆಗೆ ಶೇಕಡಾ 80ರಷ್ಟು ಸಬ್ಸಿಡಿ: ರೈತರು ತಮ್ಮ ಭೂಮಿಯಲ್ಲಿ ವಿದ್ಯುತ್ ಉತ್ಪಾದಿಸಿ ಪಂಪ್‌ಸೆಟ್‌ಗಳಿಗೆ ಬಳಸುವ ಕುಸುಮ್ ಸಿ ಯೋಜನೆ ಈಗಾಗಲೇ ಚಾಲನೆಯಲ್ಲಿದ್ದು, ರಾಜ್ಯ ಸರ್ಕಾರವು ಶೇ.50ರಷ್ಟು ಸಬ್ಸಿಡಿಯನ್ನು ನೀಡುತ್ತದೆ. ಕೇಂದ್ರ ಸರ್ಕಾರವು ಈ ಯೋಜನೆಗೆ ಶೇ.30ರಷ್ಟು ಸಬ್ಸಿಡಿ ನೀಡುತ್ತದೆ. ಉಳಿದ ಮೊತ್ತವನ್ನು ರೈತರು ಭರಿಸಬೇಕಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಸುಮಾರು 4,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗಿದೆ ಎಂದು ಹೇಳಿದರು.

ಪ್ರಸ್ತುತ, ರಾಜ್ಯದಲ್ಲಿ 35,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, 2030ರ ವೇಳೆಗೆ 60,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ನೀಡಲಾಗುವ ಸಬ್ಸಿಡಿಯನ್ನು ನಿಲ್ಲಿಸಲಾಗುವುದಿಲ್ಲ. 2024–25ರಲ್ಲಿ ಗೃಹ ಜ್ಯೋತಿ ಯೋಜನೆಯಡಿ 1.64 ಲಕ್ಷ ಕುಟುಂಬಗಳಿಗೆ ಉಚಿತ ವಿದ್ಯುತ್ ಒದಗಿಸಲಾಗಿದ್ದು, 9,200 ಕೋಟಿ ರೂಪಾಯಿ ನೀಡಲಾಗಿದೆ ಎಂದು ಹೇಳಿದರು.

ಅದೇ ನಿಟ್ಟಿನಲ್ಲಿ, ಪ್ರಸ್ತುತ ಸರ್ಕಾರವು ಸಹ ಒಂದು ಹೆಜ್ಜೆ ಮುಂದೆ ಇಟ್ಟಿದ್ದು, ಕುಸುಮ್ ಸಿ ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೆ ತರುತ್ತಿದೆ. ವಿಕೇಂದ್ರೀಕೃತ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸುತ್ತಿದೆ, ಸ್ಥಳೀಯವಾಗಿ ವಿದ್ಯುತ್ ಉತ್ಪಾದಿಸುವ ಮೂಲಕ ಪರಿಸರ ಸ್ನೇಹಿ ಹೆಜ್ಜೆಯನ್ನು ಇಡುತ್ತಿದೆ.

ಈ ರೀತಿಯಾಗಿ, ಭವಿಷ್ಯದಲ್ಲಿ ಉಂಟಾಗಬಹುದಾದ ವಿದ್ಯುತ್ ಕೊರತೆಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಅದು ಬದ್ಧವಾಗಿದೆ. ಪಾವಗಡ ತಾಲೂಕಿನಲ್ಲಿ, ಈಗಾಗಲೇ 10,000 ಎಕರೆಗಳಲ್ಲಿ ಸೌರ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ಸೌರ ವಿದ್ಯುತ್ ಉತ್ಪಾದನೆಗೆ ಇನ್ನೂ 10,000 ಎಕರೆಗಳನ್ನು ನೀಡಿರುವುದು ಭರವಸೆಯ ಬೆಳವಣಿಗೆಯಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ಸೌರ ವಿದ್ಯುತ್ ಉತ್ಪಾದನೆಗೆ ಯೋಜನೆಗೆ 287 ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದೆ. ಈ ಪ್ರದೇಶದ ರೈತರ ಪರವಾಗಿ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರಿಗೆ ಕೃತಜ್ಞತೆಗಳು ಎಂದರು.

ಚಾಮುಂಡಿವಿಹಾರ ಸ್ಟೇಡಿಯಂ ಆವರಣದಲ್ಲಿ ಫುಟ್‌ಬಾಲ್ ಮೈದಾನ ನಿರ್ಮಾಣಕ್ಕೆ ಶಾಸಕ ತನ್ವೀರ್ ಸೇಠ್ ಶಂಕುಸ್ಥಾಪನೆ





ಮೈಸೂರಿನ ಚಾಮುಂಡಿವಿಹಾರ ಸ್ಟೇಡಿಯಂನಲ್ಲಿ ಫುಟ್‌ಬಾಲ್ ಮೈದಾನ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ಕೆ ಶಾಸಕ ತನ್ವೀರ್ ಸೇಠ್ ಶಂಕುಸ್ಥಾಪನೆ ನೆರವೇರಿಸಿದರು(ಎಡಚಿತ್ರ). ಫುಟ್‌ಬಾಲ್ ಮೈದಾನ ನಿರ್ಮಾಣ ಮಾಡುತ್ತಿರುವ ಪ್ರದೇಶದಲ್ಲಿ ಸ್ಥಳ ಪರಿಶೀಲನೆ ನಡೆಸುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.12(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ಚಾಮುಂಡಿ ವಿಹಾರ ಸ್ಟೇಡಿಯಂ ಆವರಣದಲ್ಲಿ (ಸ್ಟೇಡಿಯಂನ ಬ್ಲಾಕ್ ಬಿ) 70 ಲಕ್ಷ ರೂಪಾಯಿ ವೆಚ್ಚದ ಫುಟ್‌ಬಾಲ್ ಮೈದಾನ ನಿರ್ಮಾಣಕ್ಕೆ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಗುರುವಾರ ಶಂಕುಸ್ಥಾಪನೆ ನೆರವೇರಿಸಿದರು.

ಇದೇ ವೇಳೆ ಚಾಮುಂಡಿ ವಿಹಾರ ಸ್ಟೇಡಿಯಂ ಆವರಣದಲ್ಲಿ ನಿರ್ಮಾಣ ಮಾಡುತ್ತಿರುವ ಕುಡಿಯುವ ನೀರು ಹಾಗೂ ಶೌಚಾಲಯ ನಿರ್ಮಾಣಕ್ಕೂ ಅವರು ಭೂಮಿಪೂಜೆ ನೆರವೇರಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಸರ್ಕಾರದ ವಿವಿಧ ಅನುದಾನದಲ್ಲಿ ಈ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ.

ನಂತರ ಮಾತನಾಡಿದ ತನ್ವೀರ್ ಸೇಠ್, ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಕ್ರೀಡಾಪಟುಗಳು ಸಮಸ್ಯೆ ಹೇಳಿಕೊಂಡಿದ್ದರು. ಈ ಹಿನ್ನೆಲೆ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮಹಾರಾಜ ಕಾಲೇಜು ಮೈದಾನ, ವಿಶ್ವವಿದ್ಯಾನಿಲಯ ಮೈದಾನದಲ್ಲಿ ಫುಟ್‌ಬಾಲ್ ಪಂದ್ಯಗಳನ್ನು ಆಯೋಜಿಸಲಾಗುತ್ತಿತ್ತು. ಆದರೆ ಅದು ಫುಟ್ ಬಾಲ್ ಆಟವಾಡಲು ನಿರ್ಮಾಣ ಮಾಡಿರುವ ಮೈದಾನವಲ್ಲ. ಈ ಹಿನ್ನೆಲೆಯಲ್ಲಿ ಫುಟ್‌ಬಾಲ್ ಕ್ರೀಡೆಗಾಗಿ ಪ್ರತ್ಯೇಕವಾದ ಮೈದಾನ ನಿರ್ಮಾಣಕ್ಕೆ ಇಂದು ಶಂಕುಸ್ಥಾಪನೆ ನೆರವೇರಿಸಿದ್ದೇನೆ ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, 3.5 ಎಕರೆ ಪ್ರದೇಶದಲ್ಲಿ 69.75 ಲಕ್ಷ ವೆಚ್ಚದಲ್ಲಿ ಫುಟ್‌ಬಾಲ್ ಮೈದಾನ ನಿರ್ಮಾಣ ಮಾಡಲಾಗುತ್ತಿದೆ. ಆದಷ್ಟು ಬೇಗ ಫುಟ್‌ಪಾಲ್ ಮೈದಾನ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಶಂಕುಸ್ಥಾಪನೆ ನೆರವೇರಿಸಿದ ನಂತರ ತನ್ವೀರ್ ಸೇಠ್, ಭಾಸ್ಕರ್ ನಾಯಕ್, ಮೈಸೂರು ಫುಟ್ ಅಸೋಸಿಯೇಷನ್ ಅಧ್ಯಕ್ಷ ಕುಶಾಲ್‌ಕುಮಾರ್, ಕಾರ್ಯದರ್ಶಿ ಮಂಜುನಾಥ್ ಇತರರು ಫುಟ್‌ಬಾಲ್ ಮೈದಾನದ ಸ್ಥಳ ಪರಿಶೀಲಿಸಿದರು.

ಕುಡಿಯುವ ನೀರು, ಶೌಚಾಲಯ ನಿರ್ಮಾಣಕ್ಕೂ ಶಾಸಕರಿಂದ ಭೂಮಿಪೂಜೆ

ಮೈದಾನದಲ್ಲಿರುವ ಸಾಯಿಬಾಬ ದೇವಾಲಯ ಸರ್ಕಾರದ ಸುಪರ್ದಿಗೆ

“ಈಗ ಫುಟ್‌ಬಾಲ್ ಮೈದಾನ ನಿರ್ಮಾಣ ಮಾಡುತ್ತಿರುವ ಜಾಗದಲ್ಲಿ ಸಾಯಿಬಾಬ ದೇವಾಲಯ ನಿರ್ಮಾಣ ಮಾಡಿರುವುದು ವಿವಾದಕ್ಕೆಡೆಯಾಗಿದೆ. 3.5 ಎಕರೆ ಜಾಗದಲ್ಲಿ ಅನಧಿಕೃತವಾಗಿ ದೇವಾಲಯ ನಿರ್ಮಾಣ ಮಾಡಲಾಗಿದೆ. ಆದರೆ ಈಗ ದೇವಸ್ಥಾನದ ತೆರವು ಸೇರಿದಂತೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಇದರ ಬದಲು ದೇವಸ್ಥಾನವನ್ನೇ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲು ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ 'ಮೈಸೂರು ಮಿತ್ರ'ಗೆ ತಿಳಿಸಿದರು.

ದೇವಸ್ಥಾನದ ಜಾಗ ನಮಗೆ ಸೇರಿದ್ದು, ಅದನ್ನು ತೆರವು ಮಾಡುವ ಪ್ರಶ್ನೆ ಇಲ್ಲ ಎಂದು ದೇವಸ್ಥಾನ ನಿರ್ಮಾಣ ಮಾಡಿರುವ ಅರುಣ್‌ಕುಮಾರ್ 'ಮೈಸೂರು ಮಿತ್ರ'ಗೆ ತಿಳಿಸಿದರು.

ವಿವಾಹ ವಾರ್ಷಿಕೋತ್ಸವದ ಶುಭಾಶಯ



ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡರು ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಗೌರಿ ಅವರಿಗೆ ಮೋಹನ್, ನವೀನ್, ಸಂದೀಪ್, ಪ್ರಮೋದ್, ಹಿರೇಗೌಡ ವಿವಾಹ ವಾರ್ಷಿಕೋತ್ಸವದ ಶುಭಾಶಯ ಕೋರಿದರು.

ಮಹಾರಾಜ, ಯುವರಾಜ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಜೂ.12– ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದ ಮಹಾರಾಜ ಮತ್ತು ಯುವರಾಜ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ 5 ವರ್ಷಗಳ ಅವಧಿಗೆ ನೇಮಕಾತಿ ಮಾಡುವ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ. ಇದರ ಸಂಪೂರ್ಣ ವಿವರವು www.uni-mysore.ac.inನಲ್ಲಿ ಲಭ್ಯವಿರುತ್ತದೆ. ಆಸಕ್ತ ಅಭ್ಯರ್ಥಿಗಳು ವಿವರಗಳನ್ನು ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಮೇಲ್ಕಂಡ ವಿವಿ ಅಧಿಕೃತ ವೆಬ್‌ಸೈಟ್‌ನಿಂದ ಪಡೆದು ಅರ್ಜಿ ಸಲ್ಲಿಸಬಹುದು ಎಂದು ಮೈಸೂರು ವಿವಿ ಉಪಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್ ಪರೀಕ್ಷೆ ಹೆಸರಿನಲ್ಲಿ ದುಬಾರಿ ಶುಲ್ಕ ವಿಧಿಸಿದರೆ ಕಾನೂನು ಕ್ರಮ

ಖಾಸಗಿ ಆಸ್ಪತ್ರೆಗಳಿಗೆ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ



ಬೆಂಗಳೂರು, ಜೂ.12– ಕೋವಿಡ್ ಪರೀಕ್ಷೆ ಹೆಸರಿನಲ್ಲಿ ಖಾಸಗಿ ಆಸ್ಪತ್ರೆಗಳು ದುಬಾರಿ ಶುಲ್ಕ ವಿಧಿಸುತ್ತಿರುವ ದೂರುಗಳು ಬಂದರೆ ಪರಿಶೀಲನೆ ನಡೆಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿ ಕುರಿತು ಮುಖ್ಯಮಂತ್ರಿಗಳು ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಈವರೆಗೆ 11 ಸಾವು ಸಂಭವಿಸಿವೆ. ಆದರೂ ಇದರಲ್ಲಿ 10 ಪ್ರಕರಣಗಳಲ್ಲಿ ಕೋವಿಡ್ ಕಾರಣದಿಂದ ಸಾವು ಸಂಭವಿಸಿಲ್ಲ. ವಿವಿಧ ರೀತಿಯ ದೀರ್ಘಕಾಲದ ಅನಾರೋಗ್ಯಕ್ಕೆ ತುತ್ತಾಗಿದ್ದ ರೋಗಿಗಳು ಸಾವನ್ನಪ್ಪಿದ್ದು, ಸಾವು ಸಂಭವಿಸಿದಾಗ ಅವರಿಗೆ ಕೊರೊನಾ ಪಾಸಿಟಿವ್ ಇತ್ತು ಅಷ್ಟೇ ಎಂದು ಹೇಳಿದರು.

ಮತ್ತೊಂದು ಡೆತ್ ಆಡಿಟ್ ವರದಿ ಬರಬೇಕಾಗಿದೆ ಎಂದು ತಿಳಿಸಿದ್ದೀರಿ. ಹೀಗಾಗಿ ಪ್ರತಿ ಬಾರಿ ಕೊರೊನಾ ಸಾವು ಆದಾಗಲೂ ಅದು ಕೊರೊನಾ ಸಾವೇ ಅಥವಾ ಅಲ್ಲವೇ ಎಂಬುದನ್ನು ಸ್ಪಷ್ಟವಾಗಿ ಜನರಿಗೆ ತಿಳಿಸಬೇಕು. ಜನರಲ್ಲಿ ಇರುವ ಆತಂಕವನ್ನು ಕಡಿಮೆ ಮಾಡಬೇಕು ಎಂದು ಸೂಚಿಸಿದರು.

ರಾಜ್ಯದಲ್ಲಿ ಕೋವಿಡ್ ಪರೀಕ್ಷೆಯನ್ನು ಹೆಚ್ಚಿಸಲಾಗಿದ್ದು, ಪ್ರತಿದಿನ ಸರಾಸರಿ 500 ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ ಒಟ್ಟಾರೆಯಾಗಿ, ಕಳೆದ 10 ದಿನಗಳಲ್ಲಿ 5,000ಕ್ಕೂ ಹೆಚ್ಚು ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಇದರ ಪರಿಣಾಮವಾಗಿ 862 ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ. ಇದೂವರೆಗೆ 11 ಸಾವು ಸಂಭವಿಸಿದೆ. ಆದರೂ ಇದರಲ್ಲಿ 10 ಪ್ರಕರಣಗಳಲ್ಲಿ ಕೋವಿಡ್ ಕಾರಣದಿಂದ ಸಾವು ಸಂಭವಿಸಿಲ್ಲ. ವಿವಿಧ ರೀತಿಯ ಅನಾರೋಗ್ಯಕ್ಕೆ ತುತ್ತಾಗಿದ್ದ ರೋಗಿಗಳು ಈ ಪ್ರಕರಣಗಳಲ್ಲಿ ಸಾವನ್ನಪ್ಪಿದ್ದಾರೆ. ಒಂದು ಪ್ರಕರಣದ ಆಡಿಟ್ ವರದಿ ಬರಬೇಕಾಗಿದೆ. ಕೋವಿಡ್ ಬಗ್ಗೆ ಯಾರೂ ಅನಗತ್ಯ ಗೊಂದಲ ಮೂಡಿಸಬಾರದು. ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಪ್ರಕರಣಗಳನ್ನು ನಿಭಾಯಿಸಲು ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎಂಬ ಸೂಚನೆ ನೀಡಿದರು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಅನಗತ್ಯವಾಗಿ ಕೋವಿಡ್ ಪರೀಕ್ಷೆ ಹೆಸರಿನಲ್ಲಿ ದುಬಾರಿ ಶುಲ್ಕ ವಿಧಿಸುತ್ತಿರುವ ದೂರುಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಸೂಚಿಸಿದರು.

ಮಾಜಿ ಸಚಿವ ಆರ್.ವಿ.ದೇಶಪಾಂಡೆಗೆ ಸನ್ಮಾನ



ಕಾರ್ಯನಿಮಿತ್ತ ಮೈಸೂರಿಗೆ ಆಗಮಿಸಿದ್ದ ಮಾಜಿ ಸಚಿವ ಆರ್.ವಿ.ದೇಶಪಾಂಡೆ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಜೆಎಸ್‌ಎಸ್ ಮಠದ ಕಾರ್ಯದರ್ಶಿ ಬೆಟಸೂರ್ ಮಠ ಆತ್ಮೀಯವಾಗಿ ಅಭಿನಂದಿಸಿದರು.

ಅನುಪಮಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಕೆ.ಪ್ರಭು ಅವರ ಮಾರ್ಗದರ್ಶನದಲ್ಲಿ ಸಿ.ಎಸ್. ಅನುಪಮಾ ಅವರು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡಾ.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದವರ ಅಮಾನತಿಗೆ ಆಗ್ರಹಿಸಿ

ಮಾನಸಗಂಗೋತ್ರಿಯಲ್ಲಿ ಮುಂದುವರೆದ ಪ್ರತಿಭಟನೆ





ಡಾ.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದವರನ್ನು ಹುದ್ದೆಯಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿ ಮೈಸೂರು ವಿಶ್ವವಿದ್ಯಾಲಯದ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರು ಮಾನಸಗಂಗೋತ್ರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಮತ್ತೊಂದು ಚಿತ್ರದಲ್ಲಿ ವಿವಿಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮತ್ತು ಕುಲಸಚಿವರಾದ ಸವಿತಾ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಮನವೊಲಿಸಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದು.

ಮೈಸೂರು, ಜೂ.12(ಜಿಎ)– ಡಾ.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದವರನ್ನು ಹುದ್ದೆಯಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿ ಮೈಸೂರು ವಿಶ್ವವಿದ್ಯಾಲಯದ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರು ಮಾನಸಗಂಗೋತ್ರಿ ಆವರಣದಲ್ಲಿ ಪ್ರತಿಭಟನೆ ಮುಂದುವರಿಸಿದ್ದಾರೆ.

ಸಂಶೋಧಕರ ಸಂಘಟನೆಯು ವಿಶ್ವವಿದ್ಯಾಲಯ ಆವರಣದಲ್ಲಿ ಅಂಬೇಡ್ಕರ್ ಜಯಂತಿಗೆ ಶುಭ ಕೋರಿ ಬ್ಯಾನರ್ ಅಳವಡಿಸಿತ್ತು. ಬುಧವಾರ ಸಂಜೆ ಕಾಲೇಜು ಆಡಳಿತ ಮಂಡಳಿ ಸಿಬ್ಬಂದಿ ಬ್ಯಾನರ್ ತೆರವು ಮಾಡಿದ್ದರು. ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಸಂಘಟನೆ ಪದಾಧಿಕಾರಿಗಳು ರಾತ್ರಿಯಿಡೀ ಪ್ರತಿಭಟಿಸಿದರು. ತಡರಾತ್ರಿ ಟಯರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.


ಸಂಘಟನೆ ಪ್ರಮುಖರು ಬ್ಯಾನರ್ ತೆರವುಗೊಳಿಸಿದ್ದವರನ್ನು ಅಮಾನತು ಮಾಡುವವರೆಗೂ ಪ್ರತಿಭಟನೆ ನಿಲ್ಲಸಲ್ಲ ಎಂದು ಗುರುವಾರ ಬೆಳಿಗ್ಗಿನಿಂದಲೇ ಕ್ಲಾಕ್ ಟವರ್ ಮುಂಭಾಗದ ರಸ್ತೆ ತಡೆಗಟ್ಟಿ ಪ್ರತಿಭಟಿಸಿದರು. 'ಕುಲಪತಿಗಳನ್ನು ರಾಜ್ಯ ಸರ್ಕಾರ ವಜಾಗೊಳಿಸಬೇಕು', 'ಆಡಳಿತಾಧಿಕಾರಿ ರಾಮಚಂದ್ರ ಅವರನ್ನು ಅಮಾನತು ಮಾಡಬೇಕು', 'ದಲಿತ ವಿರೋಧಿಗಳ ವಿರುದ್ಧ ಕ್ರಮವಹಿಸಬೇಕು', 'ಘಟನಾ ಸ್ಥಳಕ್ಕೆ ಬಾರದ ಕುಲಪತಿ, ಕುಲಸಚಿವರಿಗೆ ಧಿಕ್ಕಾರ' ಇತ್ಯಾದಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾನಸಗಂಗೋತ್ರಿ ಆವರಣದ ಸುತ್ತ ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದು, ಆವರಣಕ್ಕೆ ಪ್ರವೇಶಿಸುವವರನ್ನು ಪರಿಶೀಲಿಸಿ ವಿಶ್ವವಿದ್ಯಾಲಯ ಆವರಣಕ್ಕೆ ಪ್ರವೇಶ ನೀಡಲಾಗುತ್ತಿತ್ತು.

ಪ್ರತಿಭಟನೆಯ ಕಾವು ಹೆಚ್ಚಾದಂತೆ ವಿವಿಯ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮತ್ತು ಕುಲಸಚಿವರಾದ ಸವಿತಾ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಮನವೊಲಿಸಲು ಪ್ರಯತ್ನಿಸಿದರು. ಆದರೆ, ವಿದ್ಯಾರ್ಥಿಗಳು ಯಾವುದಕ್ಕೂ ಜಗ್ಗಲಿಲ್ಲ. ನಂತರ ಕುಲಪತಿಗಳು ಆಡಳಿತಾಧಿಕಾರಿ ವಿರುದ್ಧ ಸಂಜೆ 5 ಗಂಟೆಯೊಳಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು. ಸಂಜೆ 5 ಗಂಟೆ ಆಗುತ್ತಿದ್ದಂತೆ ರಾಮಚಂದ್ರರನ್ನು ಆಡಳಿತಾಧಿಕಾರಿ ಹುದ್ದೆಯಿಂದ ತೆರವುಗೊಳಿಸಿ, ಅವರನ್ನು ಮೂಲ ಹುದ್ದೆಗೆ ವರ್ಗಾಹಿಸಲಾಯಿತು. ಈ ವಿಷಯ ತಿಳಿದ ವಿದ್ಯಾರ್ಥಿಗಳು ಅಮಾನತುಗೊಳಿಸುವವರೆಗೂ ನಾವು ಪ್ರತಿಭಟನೆಯಿಂದ ಹಿಂದೆ ಸರೆಯುವುದಿಲ್ಲ ಅಹೋರಾತ್ರಿ ಧರಣಿ ಮಾಡುತ್ತೇವೆ ಎಂದು ಪ್ರತಿಭಟನೆ ಮುಂದುವರೆಸಿದರು.

ದೇಶ – ವಿದೇಶ

ಪಾಕ್ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್‌ಗೆ ಅಮೆರಿಕಾ ಆಹ್ವಾನ



ವಾಷಿಂಗ್ಟನ್: ಅಮೆರಿಕ ಸೇನೆಯ 250ನೇ ವಾರ್ಷಿಕೋತ್ಸವ ಆಚರಣೆಯಲ್ಲಿ ಭಾಗವಹಿಸಲು ಅಮೆರಿಕದಿಂದ ಆಹ್ವಾನ ಬಂದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಜನರಲ್ ಸೈಯದ್ ಅಸಿಮ್ ಮುನೀರ್ ಶುಕ್ರವಾರ ವಾಷಿಂಗ್ಟನ್ ಡಿಸಿಗೆ ಭೇಟಿ ನೀಡಲಿದ್ದಾರೆ.

ಆಪರೇಷನ್ ಸಿಂದೂರ್‌ನಲ್ಲಿ ಹೀನಾಯ ಸೋಲನುಭವಿಸಿದ ಪಾಕಿಸ್ತಾನಿ ಸೇನಾ ಫೀಲ್ಡ್ ಮಾರ್ಷಲ್ ಮತ್ತು ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರು ಅಮೆರಿಕದಲ್ಲಿ ನಡೆಯುವ ಸೇನಾ ದಿನಾಚರಣೆ ಜೊತೆಗೆ ಡೊನಾಲ್ಡ್ ಟ್ರಂಪ್ ಹುಟ್ಟುಹಬ್ಬ ಆಚರಣೆಯಲ್ಲಿಯೂ ಭಾಗವಹಿಸುವ ಸಾಧ್ಯತೆಯಿದೆ. ಭಾರತದ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಭಯೋತ್ಪಾದಕ ಗುಂಪುಗಳನ್ನು ಎದುರಿಸಲು ಪಾಕಿಸ್ತಾನಕ್ಕೆ ಒತ್ತಡ ಹೇರಲು ಅಮೆರಿಕ ಈ ಉನ್ನತ ಮಟ್ಟದ ಮಿಲಿಟರಿ ಕಾರ್ಯಕ್ರಮವನ್ನು ಬಳಸಿಕೊಳ್ಳುವ ನಿರೀಕ್ಷೆಯಿದೆ. ಪಾಕಿಸ್ತಾನದ ನೆಲದಲ್ಲಿ ಭಯೋತ್ಪಾದಕರು ಅಭಿವೃದ್ಧಿ ಹೊಂದುತ್ತಿರುವ ಬಗ್ಗೆಯೂ ಈ ಭೇಟಿಯ ಸಮಯದಲ್ಲಿ ಚರ್ಚಿಸಬಹುದು ಎಂದು ವರದಿ ಹೇಳಿದೆ. ಅಫ್ಘಾನಿಸ್ತಾನ ಮತ್ತು ಭಾರತದಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸುವ ಭಯೋತ್ಪಾದಕ ಗುಂಪುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಚರ್ಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಹಾವು ಕಡಿತದಿಂದ ಭಾರತದಲ್ಲಿ ವರ್ಷಕ್ಕೆ 58 ಸಾವಿರ ಸಾವು!



ನವದೆಹಲಿ: ಭಾರತದಲ್ಲಿ ಹಾವು ಕಡಿತದಿಂದ ಸಾಯುವವರ ಸಂಖ್ಯೆ ಹೆಚ್ಚುತ್ತಿದೆ ಎಂದು ಇತ್ತೀಚಿನ ವರದಿಯೊಂದು ಹೇಳುತ್ತದೆ. ಇತ್ತೀಚಿನ ಜಾಗತಿಕ ವರದಿ ಪ್ರಕಾರ ಹೆಚ್ಚಿನ ಹಾವು ಸಾಂದ್ರತೆ, ಗ್ರಾಮೀಣ ಜನಸಂಖ್ಯೆ ಮತ್ತು ಸಾಂಪ್ರದಾಯಿಕ ಔಷಧಿ ನೀಡುವ ವೈದ್ಯರ ಮೇಲಿನ ಹೆಚ್ಚಿನ ಅವಲಂಬನೆಯಿಂದಾಗಿ ಭಾರತದಲ್ಲಿ ಹಾವು ಕಡಿತದಿಂದ ಸಾಯುವವರ ಸಂಖ್ಯೆ ಹೆಚ್ಚುತ್ತಿದೆ.

ಭಾರತದಲ್ಲಿ ವರ್ಷಕ್ಕೆ ಅಂದಾಜು 58,000 ಸಾವುಗಳು ವರದಿಯಾಗುತ್ತಿವೆ. ಬಡ ಮತ್ತು ಸ್ಥಳೀಯ ಸಮುದಾಯಗಳಲ್ಲಿ ಇದರ ಪರಿಣಾಮ ತೀವ್ರವಾಗಿದೆ. ಅಲ್ಲಿ ಗುಣಮಟ್ಟದ ಆರೋಗ್ಯ ಸೇವೆ ದುರ್ಲಭವಾಗಿದೆ. ಸಾಂಪ್ರದಾಯಿಕ ಔಷಧದ ಮೇಲಿನ ನಂಬಿಕೆಯಿಂದಾಗಿ ಚಿಕಿತ್ಸೆಯಲ್ಲಿ ವಿಳಂಬ, ಕೆಲವು ದೇಶೀಯ ವಿಷ ವಿರೋಧಿ ಉತ್ಪಾದಕರಲ್ಲಿ ಗುಣಮಟ್ಟದ ನಿಯಂತ್ರಣದ ಕೊರತೆ, ಹೆಚ್ಚಿನ ಔಷದೋಪಚಾರ ವೆಚ್ಚಗಳು, ವಿಶೇಷವಾಗಿ ಅನೌಪಚಾರಿಕ ಆರೈಕೆಗಳಿಂದಾಗಿ ಈ ರೀತಿ ಆಗುತ್ತಿದೆ ಎಂದು ತಿಳಿದುಬಂದಿದೆ.

ಈ ವರದಿಯು ಇತ್ತೀಚೆಗೆ ಜಿನೀವಾದಲ್ಲಿ ಮುಕ್ತಾಯಗೊಂಡ 78ನೇ ವಿಶ್ವ ಆರೋಗ್ಯ ಸಭೆಯಲ್ಲಿ ಗ್ಲೋಬಲ್ ಸ್ನೇಕ್‌ಬೈಟ್ ಟಾಸ್ಕ್‌ಫೋರ್ಸ್ ಬಿಡುಗಡೆಯಾಗಿದೆ.

ಮಸ್ಕ್ ಜೊತೆ ದೀರ್ಘಕಾಲದ ದ್ವೇಷಕ್ಕೆ ಟ್ರಂಪ್ ಬಯಸುತ್ತಿಲ್ಲ



ವಾಷಿಂಗ್ಟನ್: ವಿಶ್ವದ ನಂ.1 ಶ್ರೀಮಂತ ಎಲಾನ್ ಮಸ್ಕ್ ಅವರ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹತಾಶೆಗೊಂಡಿದ್ದಾರೆ. ಆದರೆ ಅವರೊಂದಿಗೆ ದೀರ್ಘಕಾಲದ ದ್ವೇಷ ಇಟ್ಟುಕೊಳ್ಳಲು ಅವರು ಬಯಸುತ್ತಿಲ್ಲ ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಟ್ರಂಪ್ ಬಗ್ಗೆ ಮಾಡಿದ ಕೆಲ ಪೋಸ್ಟ್‌ಗಳಿಗೆ ಮಸ್ಕ್ ವಿಷಾದ ವ್ಯಕ್ತಪಡಿಸಿದ ಬೆನ್ನಲ್ಲೇ ಉಪಾಧ್ಯಕ್ಷರು ಹೀಗೆ ಹೇಳಿದ್ದಾರೆ. ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್‌ಗೆ ಮಸ್ಕ್ ಭಾರಿ ಪ್ರಮಾಣದಲ್ಲಿ ದೇಣಿಗೆ ನೀಡಿದ್ದರು. ಅಧಿಕಾರಕ್ಕೆ ಬಂದ ಬಳಿಕ ಸಿಬ್ಬಂದಿ ಕಾರ್ಯದಕ್ಷತೆ ಇಲಾಖೆ ಮುಖ್ಯಸ್ಥನ ಹೊಣೆಯನ್ನು ಮಸ್ಕ್ ಅವರಿಗೆ ಟ್ರಂಪ್ ವಹಿಸಿದ್ದರು. ಇದೀಗ ಇಬ್ಬರ ನಡುವೆ ಅಸಮಾಧಾನ ಉಂಟಾಗಿದ್ದು, ಬಹಿರಂಗವಾಗಿಯೇ ಪರಸ್ಪರ ಟೀಕೆ ಮಾಡಿಕೊಳ್ಳುತ್ತಿದ್ದಾರೆ. ನಾನು ಟ್ರಂಪ್ ಹಾಗೂ ಮಸ್ಕ್ ಜೊತೆ ಮಾತನಾಡಿದ್ದೇನೆ. ಮಸ್ಕ್ ಮತ್ತೆ ಅಧ್ಯಕ್ಷರಿಗೆ ಬೆಂಬಲವಾಗಿ ನಿಲ್ಲುವಂತೆ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದು ವ್ಯಾನ್ಸ್ ಹೇಳಿದ್ದಾರೆ. ಸರ್ಕಾರ ಹೆಚ್ಚು ಕಾರ್ಯಕ್ಷಮತೆಯಿಂದಿರಲು ಮಸ್ಕ್ ಮಾಡಿದ ಕೆಲಸಗಳಿಗೆ ಟ್ರಂಪ್ ತಂಡ ಋಣಿ ಎಂದು ವ್ಯಾನ್ಸ್ ತಿಳಿಸಿದ್ದಾರೆ.

ಫಾಲೋವರ್‌ಗಳು ಕಡಿಮೆ ಆಗಿದ್ದಕ್ಕೇ ಪತಿ ವಿರುದ್ಧವೇ ಪತ್ನಿ ದೂರು!



ಹಾಪುರ್: ಗಂಡನಿಂದಾಗಿ ಇನ್‌ಸ್ಟಾಗ್ರಾಮ್‌ನಲ್ಲಿ ಇಬ್ಬರು ಫಾಲೋವರ್‌ಗಳು ಕಡಿಮೆಯಾಗಿದ್ದಾರೆ ಎಂಬ ಕಾರಣಕ್ಕೇ ಮಹಿಳೆಯೊಬ್ಬಳು ತನ್ನ ಪತಿಯ ವಿರುದ್ಧವೇ ಪೊಲೀಸರಿಗೆ ದೂರು ನೀಡಿರುವ ಘಟನೆ ವರದಿಯಾಗಿದೆ. ಉತ್ತರಪ್ರದೇಶದ ಹಾಪುರ್ ಜಿಲ್ಲೆಯ ಈ ಘಟನೆ ನಡೆದಿದ್ದು, ಮನೆಗೆಲಸದ ನಡುವೆ ರೀಲ್ಸ್ ಮಾಡಲು ಸಮಯವೇ ಸಿಗುತ್ತಿಲ್ಲ. ಗಂಡನಿಂದಾಗಿ ಇನ್‌ಸ್ಟಾಗ್ರಾಮ್‌ನಲ್ಲಿ ಇಬ್ಬರು ಫಾಲೋವರ್‌ಗಳು ಕಡಿಮೆ ಆಗಿದ್ದಾರೆ ಎಂದು ಆರೋಪಿಸಿ ಪತ್ನಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪಿಲ್ಖುವಾ ಮೂಲದ ನಿಶಾ ಎಂಬ ಮಹಿಳೆ ನೋಯ್ಡಾ ನಿವಾಸಿ ವಿಜೇಂದ್ರ ಅವರನ್ನು ವಿವಾಹವಾಗಿದ್ದರು. ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ನಿಯಮಿತ ರೀಲ್ಸ್‌ಗಳಿಗೆ ಹೆಸರುವಾಸಿಯಾದ ನಿಶಾ, ತಮ್ಮ ಫಾಲೋವರ್‌ಗಳ ಸಂಖ್ಯೆಯಲ್ಲಿ ಹಠಾತ್ ಕುಸಿತವನ್ನು ಗಮನಿಸಿ ಅಸಮಾಧಾನಗೊಂಡಿದ್ದಾರೆ. ಗಂಡನಿಂದಾಗಿ ರೀಲ್ಸ್ ಮಾಡಲು ಸಮಯವೇ ಸಿಗುತ್ತಿಲ್ಲ. ಹೀಗಾಗಿ ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿನ ಫಾಲೋವರ್‌ಗಳ ಸಂಖ್ಯೆಯಲ್ಲಿ 2 ಕಡಿಮೆಯಾಗಿದೆ ಎಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾಳೆ.

ಭಾರತದ ಡಾ.ಶ್ರೀನಿವಾಸ್ ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷ



ವಾಷಿಂಗ್ಟನ್: ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ (ಎಎಂಎ)ನ 179 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಭಾರತ ಮೂಲದ ವ್ಯಕ್ತಿಯೊಬ್ಬರು ಸಂಸ್ಥೆಯ ಆಡಳಿತ ವಹಿಸಿಕೊಂಡಿದ್ದಾರೆ. ಡಾ. ಶ್ರೀನಿವಾಸ್ ಮುಕ್ಕಾಮಲ ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜನರು ಅವರನ್ನು ಪ್ರೀತಿಯಿಂದ ಬಾಬಿ ಮುಕ್ಕಾಮಲ ಎಂದು ಕರೆಯುತ್ತಾರೆ. ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ವೆಬ್‌ಸೈಟ್ ಪ್ರಕಾರ, ಜೂನ್ 10ರಂದು ರಾತ್ರಿ ಹಯಾತ್ ರೀಜೆನ್ಸಿ ಚಿಕಾಗೋದಲ್ಲಿ ನಡೆದ ಸಮಾರಂಭದಲ್ಲಿ ಶ್ರೀನಿವಾಸ್ ಮುಕ್ಕಾಮಲ ಅವರು 180 ನೇ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಇದು ತಮಗೆ ಭಾವನಾತ್ಮಕ ಕ್ಷಣ. ಅದನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಕಳೆದ ವರ್ಷ ನವೆಂಬರ್‌ನಲ್ಲಿ 53 ವರ್ಷದ ಡಾ. ಬಾಬಿ ಮುಕ್ಕಾಮಲ ಅವರ ಮೆದುಳಿನ ಎಡಭಾಗದಲ್ಲಿ 8 ಸೆಂ.ಮೀ. ಉದ್ದದ ಟೆಂಪೊರಲ್ ಲೋಬ್ ಗೆಡ್ಡೆ ಇರುವುದು ಪತ್ತೆಯಾಗಿತ್ತು. ಡಾ.ಮುಕ್ಕಾಮಲ ದಶಕಗಳ ಕಾಲ ಬಡವರಿಗೆ ಉಚಿತವಾಗಿ ಚಿಕಿತ್ಸೆ ನೀಡಿದ್ದಾರೆ. ಅವರ ಪತ್ನಿ ನೀತಾ ಕುಲಕರ್ಣಿ ಒಬ್ಬ ಪ್ರಸೂತಿ–ಸ್ತ್ರೀರೋಗತಜ್ಞೆ.



ಪೌರ ಕಾರ್ಮಿಕರಿಗೆ ಸ್ವೆಟರ್ ವಿತರಿಸುತ್ತಿರುವ ಸಂಕೇತ್ ಪೂವಯ್ಯ.

ಸಂವಿಧಾನದ ಹಕ್ಕು, ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸದಿದ್ದರೆ ರಾಷ್ಟ್ರದ ಬೆಳವಣಿಗೆ ಅಸಾಧ್ಯ

ಅಂಬೇಡ್ಕರ್ ದಿನಾಚರಣೆಯಲ್ಲಿ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ವಿಷಾಧ

ಮಡಿಕೇರಿ, ಜೂ.12– ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರು ಭಾರತಕ್ಕೆ ನೀಡಿರುವ ಅತ್ಯಂತ ಶ್ರೇಷ್ಠವಾದ ಸಂವಿಧಾನದಲ್ಲಿ ಕೊಡ ಮಾಡಿರುವ ಹಕ್ಕು ಮತ್ತು ಜವಾಬ್ದಾರಿಗಳನ್ನು ಅರಿತು ಸಮರ್ಥವಾಗಿ ನಿಭಾಯಿಸದಿದ್ದರೆ ರಾಷ್ಟ್ರದ ಬೆಳವಣಿಗೆ ಅಸಾಧ್ಯ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಅಭಿಪ್ರಾಯಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕೊಡಗು ಜಿಲ್ಲಾ ಘಟಕದ ವತಿಯಿಂದ ನಗರದ ಪತ್ರಿಕಾ ಭವನದಲ್ಲಿ, ಡಾ.ಬಿ.ಆರ್.ಅಂಬೇಡ್ಕರ್‌ರವರ 134ನೇ ಜನ್ಮ ದಿನಾಚರಣೆಯ ಪ್ರಯುಕ್ತ ನಗರಸಭಾ ಪೌರ ಕಾರ್ಮಿಕರಿಗೆ ಸ್ವೆಟರ್ ವಿತರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ವಿಶ್ವಮಟ್ಟದಲ್ಲಿ ಭಾರತವಿಂದು ಗೌರವವನ್ನು ಪಡೆಯುತ್ತಿದೆ. ಅದು ಡಾ.ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಿಂದ ಮಾತ್ರ ಸಾಧ್ಯವಾಗಿದೆ. ಸಂವಿಧಾನ ಕೊಡ ಮಾಡಿರುವ ಹಕ್ಕುಗಳು, ಸಮಾನತೆಯ ಅವಕಾಶಗಳಿಂದ ಜನರ ಬದುಕಿನಲ್ಲಿ ಸುಧಾರಣೆ ಕಾಣಲು ಸಾಧ್ಯವಾಗಿದೆ ಈ ಹಿನ್ನೆಲೆ ಸಂವಿಧಾನವನ್ನು ನೀಡಿರುವ ಡಾ.ಅಂಬೇಡ್ಕರ್ ಅವರನ್ನು ಗೌರವ ಭಾವನೆಯಿಂದ ಮಾತ್ರವಲ್ಲ ಪೂಜನೀಯವಾಗಿಯೂ ನೋಡುವುದು ಅತ್ಯವಶ್ಯವೆಂದರು.

ಪಠ್ಯದಲ್ಲಿ ಅಳವಡಿಕೆಯಾಗಲಿ: ಸಂವಿಧಾನ ಪ್ರತಿಯೊಬ್ಬ ಪ್ರಜೆಗೆ ಕೊಡ ಮಾಡಿರುವ ಹಕ್ಕು ಮತ್ತು ಕರ್ತವ್ಯಗಳ ಕುರಿತಾದ ಮಾಹಿತಿಗಳು ಪಠ್ಯ ಪುಸ್ತಕದಲ್ಲಿ ಅಳವಡಿಕೆಯಾಗಬೇಕು. ಆ ಮೂಲಕ ಮಕ್ಕಳಲ್ಲಿ ಸಂವಿಧಾನದ ಅರಿವನ್ನು ಎಳೆ ವಯಸಿನಲ್ಲೇ ಮೂಡಿಸುವ ಪ್ರಯತ್ನ ಅತ್ಯವಶ್ಯವಾಗಿ ನಡೆಯಬೇಕು. ಇಂತಹ ಕಾರ್ಯ ಇಲ್ಲಿಯವರೆಗೆ ನಡೆಯದಿರುವುದು ಶೋಚನೀಯವೆಂದರು.

ಕೊಡಗು ಜಿಲ್ಲಾ ದಸಂಸ ಸಂಘಟನೆ ಕಳೆದ ಹಲವಾರು ವರ್ಷಗಳಿಂದ ಸಂಪನ್ಮೂಲದ ಕೊರತೆಗಳ ನಡುವೆಯೂ ನೊಂದವರ, ಶೋಷಿತರ, ಸಂಕಷ್ಟದಲ್ಲಿರುವವರ ಕಣ್ಣೀರನ್ನು ಒರೆಸುವ ನಿಸ್ವಾರ್ಥ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆಯೆಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ಸಮಾಜ ಸೇವಕ ಡಾ.ಬಿ.ಸಿ.ನವೀನ್ ಮಾತನಾಡಿ, ಡಾ.ಅಂಬೇಡ್ಕರ್ ಸೇರಿದಂತೆ ಯಾವುದೇ 'ಜಯಂತಿ'ಗಳಿಂದು ಕೇವಲ ಮೆರವಣಿಗೆ ಆಡಂಭರದ ಕಾರ್ಯಕ್ರಮಗಳಿಗೆ ಸೀಮಿತವಾಗಿದೆ. ಕೆಲವರಿಗೆ ಇಂತಹ ಜಯಂತಿಗಳು ಅವರ ಬದುಕೇ ಆಗಿದೆ ಎಂದು ವಿಷಾದಿಸಿದರು. ಡಾ. ಅಂಬೇಡ್ಕರ್ ಅವರ ಜಯಂತಿಯಂದು ಅವರ ಚಿಂತನೆಗಳನ್ನು ಸ್ಮರಿಸುತ್ತ, ಅವರ ತತ್ವಾದರ್ಶಗಳನ್ನು ಪಾಲಿಸುವ ನಿಟ್ಟಿನ ಹೆಜ್ಜೆಯೇ ಆಗಬೇಕೆಂದು ದೃಢವಾಗಿ ಹೇಳಿದರು. ನಗರ ಸ್ವಚ್ಛತಾ ಕಾರ್ಯಗಳಲ್ಲಿ ಎಷ್ಟರ ಮಟ್ಟಿಗೆ ತಂತ್ರಜ್ಞಾನದ ಬಳಕೆಯಾಗುತ್ತಿದೆ. ಅದಕ್ಕಾಗಿ ಯಾವೆಲ್ಲ ಸವಲತ್ತುಗಳನ್ನು ನೀಡಲಾಗಿದೆ ಎನ್ನುವುದನ್ನು ಪೌರ ಕಾರ್ಮಿಕರು ಪ್ರಶ್ನಿಸುವುದು ಅತ್ಯವಶ್ಯ. ಇಲ್ಲದಿದ್ದಲ್ಲಿ ನೀವು ಈಗ ಹೇಗಿದ್ದೀರೋ ಹಾಗೆಯೇ ಉಳಿಯಲಿದ್ದೀರ ಎಂದು ಡಾ. ನವೀನ್ ಎಚ್ಚರಿಸಿದರು.

ಸವಾಲಾಗಿ ಸ್ವೀಕರಿಸಿ: ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರು ತಮ್ಮ ಬಾಲ್ಯದ ಅವಧಿಯಲ್ಲಿ ಸಾಕಷ್ಟು ಅವಮಾನಗಳನ್ನು ಎದುರಿಸಿದ್ದರು. ಅವುಗಳಿಂದ ಎದೆಗುಂದದೆ, ಅವಮಾನವನ್ನೆ ಸಾಧನೆಗೆ ಪ್ರೇರಣೆಯಾಗಿಸಿಕೊಂಡು 28 ಪದವಿಗಳನ್ನು ಪಡೆದುಕೊಂಡವರು. ಹಾಗೆಯೇ ಅದೇ ಸಮಾಜದಿಂದ ಬಂದವರೆಲ್ಲರು ಒಂದಿಲ್ಲ ಒಂದು ಅವಮಾನಗಳನ್ನು ಎದುರಿಸಿಕೊಂಡೇ ಬಂದಿರುತ್ತೀರ. ಅವುಗಳನ್ನೆಲ್ಲ ಕೆಚ್ಚೆದೆಯಿಂದ ಎದುರಿಸಿ, ಶಿಕ್ಷಣಕ್ಕೆ ಮಹತ್ವ ನೀಡಿ ಮುನ್ನಡೆಯುವಂತಾಗಬೇಕೆಂದರು. ಇಂದಿನ ಮುಕ್ತ ಸಮಾಜದಲ್ಲಿ ವ್ಯಸನಗಳಿಗೆ ಬಲಿಯಾಗುವ ಅವಕಾಶಗಳು ಹೆಚ್ಚಾಗಿದೆ. ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪೌರ ಕಾರ್ಮಿಕರಿಗೆ ಉತ್ತಮ ಶಾಂತಿಯುತವಾದ ಬದುಕಿನ ಹಾದಿಯ ಬಗ್ಗೆ ಮಾಹಿತಿ ನೀಡುವ ಕಾರ್ಯ ನಡೆಯಬೇಕಾಗಿದೆ. ಸರ್ಕಾರದ ಯೋಜನೆಗಳ ಬಗ್ಗೆ ಅರಿತು ಅದರ ಸೌಲಭ್ಯಗಳನ್ನು ಪಡೆಯುವಂತೆಯೂ ತಿಳಿಸಿದರು.

ಜಿಲ್ಲಾ ದಸಂಸ ಸಂಚಾಲಕ ಹೆಚ್.ಎಲ್. ದಿವಾಕರ್ ಮಾತನಾಡಿ, ಸಂಘಟನೆಯ ಮೂಲಕ ಈ ಹಿಂದೆ ನೆಲೆ ಇಲ್ಲದವರಿಗೆ ನಿವೇಶನ, ಮನೆಗಳನ್ನು ಒದಗಿಸುವ ಕಾರ್ಯಗಳನ್ನು ಸಂಘಟನೆ ನಡೆಸಿದೆ ಆದರೆ, ಸೌಲಭ್ಯ ಹೊಂದಿಕೊಂಡವರು ಸಂಘಟನೆಯತ್ತ ಮತ್ತೆ ತಿರುಗಿ ನೋಡದಿರುವುದು ಬೇಸರವನ್ನುಂಟು ಮಾಡಿದೆ. ಈ ಹಿನ್ನೆಲೆ ಸಂಘಟನೆ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿದೆ. ಇದರಿಂದ ಪರೀಕ್ಷಾ ಫಲಿತಾಂಶಗಳಲ್ಲಿ ರಾಜ್ಯದಲ್ಲಿ 14ನೇ ಸ್ಥಾನದಲ್ಲಿದ್ದ ಕೊಡಗು 4ನೇ ಸ್ಥಾನಕ್ಕೆ ಬಂದಿದ್ದು, ಇನ್ನು ಕೆಲವೇ ವರ್ಷಗಳಲ್ಲಿ ಕೊಡಗು ಪ್ರಥಮ ಸ್ಥಾನಕ್ಕೆ ಬರಲಿದ್ದು, ಅದಕ್ಕಾಗಿ ಶ್ರಮಿಸುವುದಾಗಿ ತಿಳಿಸಿದರು.

ಇದೇ ಸಂದರ್ಭ ಮಡಿಕೇರಿ ನಗರಸಭಾ ಪೌರ ಕಾರ್ಮಿಕರಿಗೆ ಸ್ವೆಟರ್‌ಗಳನ್ನು ಅತಿಥಿಗಣ್ಯರು ವಿತರಿಸಿದರು. ಕಾರ್ಯಕ್ರಮಕ್ಕೂ ಮುನ್ನ ನಗರದ ವೃದ್ಧಾಶ್ರಮದ ಹಿರಿಯರಿಗೆ ವಸ್ತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿಧನರಾದ ವಿರಾಜಪೇಟೆ ತಾಲೂಕು ದಸಂಸ ಸಂಚಾಲಕ ಹೆಚ್.ಕೆ.ಸಣ್ಣಯ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವೇದಿಕೆಯಲ್ಲಿ ಸಣ್ಣಯ್ಯ ಅವರ ಮಕ್ಕಳಾದ ಗೋಪಾಲ್, ವನೀತ, ದಸಂಸ ವಿಭಾಗೀಯ ಸಂಚಾಲಕ ಎನ್. ವೀರಭದ್ರಯ್ಯ, ಗಣೇಶ್ ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯ ಅಭಿವೃದ್ಧಿಗೆ ಅಗತ್ಯ ಅನುದಾನ



ನೂತನ ಪುರಸಭೆ ಕಟ್ಟಡವನ್ನು ಪೌರಾಡಳಿತ ಸಚಿವ ರಹೀಂ ಖಾನ್ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಕುಶಾಲನಗರ: ಪಟ್ಟಣದ ಹೃದಯ ಭಾಗದಲ್ಲಿ ರೂ.7 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ನೂತನ ಪುರಸಭೆ ಕಟ್ಟಡವನ್ನು ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಇಂದು ಲೋಕಾರ್ಪಣೆಗೊಳಿದರು.

ಜಿಲ್ಲೆಗೆ ಮೂರು ಇಂದಿರಾ ಕ್ಯಾಂಟಿನ್‌ಗಳನ್ನು ನೀಡಲಾಗಿದೆ. ಪಟ್ಟಣದ ಇಂದಿರಾ ಕ್ಯಾಂಟಿನ್‌ನಲ್ಲಿ ಊಟ, ತಿಂಡಿಗೆ ತುಂಬ ಬೇಡಿಕೆ ಇದ್ದು, 300–500 ಊಟ, ತಿಂಡಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಶಾಸಕ ಮಂತರ್ ಗೌಡ ಮನವಿ ಮೇರೆಗೆ ಮುಖ್ಯಮಂತ್ರಿಗಳು ರೂ.50 ಕೋಟಿ ಅನುದಾನ ನೀಡುವ ಭರವಸೆ ನೀಡಿದ್ದು, ಪೌರಾಡಳಿತ ಇಲಾಖೆ ವತಿಯಿಂದಲೂ ಅಗತ್ಯ ನೆರವು ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಏಳು ವರ್ಷಗಳಿಂದ ಕುಂಟುತ್ತಾ ಸಾಗುತ್ತಿದ್ದ ಪುರಸಭೆ ಕಟ್ಟಡಕ್ಕೆ 2 ಕೋಟಿ ರೂ. ಅನುದಾನ ತಂದು ಪೂರ್ಣಗೊಳಿಸಿ ಇಂದು ಸಚಿವರಿಂದ ಉದ್ಘಾಟಿಸಲಾಗಿದೆ.ಅದೇ ರೀತಿ ಇಂದಿರಾ ಕ್ಯಾಂಟಿನ್ ತಂದು ಬಡವರ ಹಸಿವು ನೀಗಿಸಲಾಗುತ್ತಿದೆ. ಮುಂದೆ ಮಾಜಿ ಮುಖ್ಯಮಂತ್ರಿ ದಿ.ಗುಂಡೂರಾವ್ ಪುತ್ಥಳಿಯನ್ನು ಪುರಸಭೆ ಆವರಣದಲ್ಲಿ ಸ್ಥಾಪಿಸಲು ಚಿಂತನೆಮಾಡಲಾಗಿದ್ದು, ಅಗತ್ಯ ಸಹಕಾರ ನೀಡುವಂತೆ ಸಚಿವರಲ್ಲಿ ಮನವಿ ಮಾಡಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಪುರಸಭೆ ಸದಸ್ಯ ಡಿ.ಕೆ. ತಿಮ್ಮಪ್ಪ ಕಲಾಭವನ, ಗೃಹ ಭಾಗ್ಯ, ಹೌಸಿಂಗ್ ಫಾರ್‌ಆಲ್ ಯೋಜನೆಗೆ ಅನುಮತಿ ನೀಡಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು. ಜಿಲ್ಲಾಧಿಕಾರಿ ವೆಂಕಟರಾಜ ಅವರು ಮುಖ್ಯಾಧಿಕಾರಿ ಕಚೇರಿ ಉದ್ಘಾಟಿಸಿದರು.

ಪುರಸಭೆ ಅಧ್ಯಕ್ಷೆ ಜಯಲಕ್ಷ್ಮಿ ಚಂದ್ರು ಉಪಾಧ್ಯಕ್ಷೆ ಪುಟ್ಟಲಕ್ಷ್ಮಿ, ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಬಿ.ಸುರೇಶ್, ಸದಸ್ಯರು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಪ್ರಮೋದ್ ಮುತ್ತಪ್ಪ, ಮಾಜಿ ಅಧ್ಯಕ್ಷ ಮಂಜುನಾಥ್ ಗುಂಡೂರಾವ್, ಜಿಲ್ಲಸ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜ್ಜ ಉತ್ತಪ್ಪ, ತಾಲೂಕು ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಕಾನೂನು ಸಲಹೆಗಾರ ಆರ್.ಕೆ.ನಾಗೇಂದ್ರ ಬಾಬು, ಮುಖಂಡರಾದ ಕೆ.ಪಿ.ಚಂದ್ರಕಲಾ, ಅಧೀಕ್ಷಕ ಎಂಜಿನಿಯರ್ ಬಸವರಾಜು, ಮಡಿಕೇರಿ ಯೋಜನಾ ನಿರ್ದೇಶಕ ಬಿ. ಬಸಪ್ಪ, ಸಚಿವರ ಪಿಎಸ್ ಮುರುಳಿ, ಪದ್ಮಾವತಿ ಪ್ರಾರ್ಥನೆ, ಶಿಕ್ಷಕಿ ಗಾಯಿತ್ರಿ ನಿರೂಪಿಸಿದರು. ಪುಷ್ಪ, ಗಾಯಿತ್ರಿ ಸಂಗಡಿಗರು ನಾಡಗೀತೆ ಹಾಡಿದರು. ನಂಜುಂಡಸ್ವಾಮಿ ರೈತ ಗೀತೆ ಹಾಡಿದರು. ಆನಂದ್ ಕುಮಾರ್ ಸ್ವಾಗತಿಸಿದರು.

ಅಂಗನವಾಡಿ ಕಾರ್ಯಕರ್ತೆಗೆ ಬೀಳ್ಕೊಡುಗೆ



ನಾಪೋಕ್ಲು ಟೌನ್ ಅಂಗನವಾಡಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದ ಎಂ ಪಿ ಜ್ಯೋತಿ ಅವರು ಸೇವಾ ನಿವೃತ್ತಿ ಹೊಂದಿದ್ದ ಹಿನ್ನೆಲೆಯುಲ್ಲಿ ಬಲ್ಲಮಾವಟಿ ಅಂಗನವಾಡಿ ವೃತ್ತದ ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು.

ಇಂದು ಅಂಗನವಾಡಿ, ಶಾಲಾ–ಕಾಲೇಜಿಗೆ ರಜೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ರೆಡ್ ಅಲರ್ಟ್ ಇರುವ ಹಿನ್ನೆಲೆ ನಾಳೆ (ಜೂನ್ 13) ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿಗೆ ರಜೆ ನೀಡಲಾಗಿದೆ (ದ್ವಿತೀಯ ಪಿಯು ಪರೀಕ್ಷೆ 3 ನಿಗದಿಯಂತೆ ನಡೆಯಲಿದೆ) ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶಿಸಿದ್ದಾರೆ.

ವೀರ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು

ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣರಿಗೆ ಮನವಿ ಸಲ್ಲಿಕೆ



ವೀರ ಮಡಿವಾಳ ಸಂಘದವರು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು.

ವಿರಾಜಪೇಟೆ, ಜೂ.12– ವೀರ ಮಡಿವಾಳ ಸಮಾಜ ಆರ್ಥಿಕವಾಗಿ ಹಿಂದುಳಿದಿದ್ದು, ಸರ್ಕಾರದ ಸವಲತ್ತುಗಳಿಂದ ವಂಚಿತರಾಗುತ್ತಿರುವುದರಿಂದ ಮಡಿವಾಳ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಹಾಗೂ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ವೀರ ಮಡಿವಾಳ ಸಂಘದ ಸದಸ್ಯರು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರಿಗೆ ಅವರ ಗೃಹ ಕಚೇರಿಯಲ್ಲಿ ಮನವಿ ಸಲ್ಲಿಸಿದರು.

ಮಡಿವಾಳ ಸಂಘದ ಅಧ್ಯಕ್ಷ ಡಿ.ಪಿ. ರಾಜೇಶ್ ಮಾತನಾಡಿ ದೇಶದ ಸುಮಾರು ಹದಿನೇಳು ರಾಜ್ಯಗಳಲ್ಲಿ ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿಸಲಾಗಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಹಿಂದುಳಿದ ವರ್ಗಕ್ಕೆ ಸೇರಿಸಲಾಗಿದೆ. ಈ ಕಾರಣದಿಂದ ಸರಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ತಾವು ಮುಖ್ಯ ಮಂತ್ರಿಗಳೊಂದಿಗೆ ಚರ್ಚಿಸಿ ಮಡಿವಾಳ ಜನಾಂಗದ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಹಿಸಿದರಲ್ಲದೆ. ಕ್ಷೇತ್ರದಲ್ಲಿ ಸಮುದಾಯ ಭವನದ ಅವಶ್ಯವಿದ್ದು ವಿರಾಜಪೇಟೆ ಅಥವಾ ಪೊನ್ನಂಪೇಟೆಯಲ್ಲಿ ಸಮುದಾಯ ಭವನ ನಿರ್ಮಿಸಿ ಕೊಡುವಂತೆ ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ, ನಾವು ಎಂದಿಗೂ ಬಡವರ ಪರ ಇದ್ದೇವೆ. ಈ ಮನವಿಯಲ್ಲಿರುವ ವಿಚಾರದ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ನಿರ್ಧರಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ವೀರ ಮಡಿವಾಳ ಸಂಘದ ಅಧ್ಯಕ್ಷ ಡಿ.ಪಿ. ರಾಜೇಶ್, ಉಪಾಧ್ಯಕ್ಷ ಕೇಶವಕುಮಾರ್, ಗಿರೀಜಾ ಕಾಶಿ, ಪ್ರಧಾನ ಕಾರ್ಯದರ್ಶಿ ಎಂ.ಆರ್.ಮಹದೇವ, ಸಹ ಕಾರ್ಯದರ್ಶಿ ಎಂ.ಕೆ.ಗಣೇಶ್ ಮತ್ತು ಎಂ.ಬಿ. ಅಭಿಶೇಕ್, ಖಜಾಂಚಿ ಡಿ.ಟಿ.ವನೀತ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಕೆ.ರವಿಕುಮಾರ್, ಆಡಳಿತ ಮಂಡಳಿ ಸದಸ್ಯರು ಈ ವೇಳೆ ಹಾಜರಿದ್ದರು.

ಹುಲಿ ದಾಳಿಗೆ ಬಲಿಯಾದ ರಂಗಮ್ಮ ನಿವಾಸಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ

ಕುಟುಂಬಕ್ಕೆ ಸಾಂತ್ವನ, ಅರಣ್ಯ ಇಲಾಖೆಯಿಂದ ಪರಿಹಾರ ವಿತರಣೆ



ಶಾಸಕ ಸಿ.ಪುಟ್ಟರಂಗಶೆಟ್ಟಿ ಬೇಡಗುಳಿಗೆ ಭೇಟಿನೀಡಿ, ರಂಗಮ್ಮ ಕುಟುಂಬದವರಿಗೆ ಸಾಂತ್ವನ ಹೇಳಿ, ಅರಣ್ಯ ಇಲಾಖೆಯಿಂದ ಮಂಜೂರಾದ ಪರಿಹಾರ ವಿತರಿಸಿದರು.

ಚಾಮರಾಜನಗರ, ಜೂ.12– ತಾಲೂಕಿನ ಕಾಡಂಚಿನ ಗ್ರಾಮ ಬೇಡಗುಳಿ ನಿವಾಸಿ ರಂಗಮ್ಮ ಎಂಬವರು ಹುಲಿಯ ದಾಳಿಗೆ ತುತ್ತಾದ ಹಿನ್ನೆಲೆಯಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಬೇಡಗುಳಿಗೆ ಭೇಟಿನೀಡಿ, ರಂಗಮ್ಮ ಅವರ ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕ ಪರಿಹಾರ ವಿತರಿಸಿದರು.

ಜತೆಗೆ ಅರಣ್ಯ ಇಲಾಖೆಯಿಂದ ಮಂಜೂರಾದ 20 ಲಕ್ಷ ರೂ. ಪರಿಹಾರದ ಚೆಕ್‌ಗಳನ್ನು ವಿತರಿಸಿದರು. ಇದೇ ವೇಳೆ ಅವರು ಮಾತನಾಡಿ, ಬೇಡಗುಳಿ ಕಾಡಂಚಿನ ಗ್ರಾಮವಾಗಿದ್ದು, ಕಾಡುಪ್ರಾಣಿಗಳ ಓಡಾಟ ಇದ್ದೇ ಇರುತ್ತದೆ. ಈಗಾಗಲೇ ರಂಗಮ್ಮ ಹುಲಿ ದಾಳಿಯಿಂದ ಮೃತಪಟ್ಟಿದ್ದಾರೆ. ರವಿ ಎಂಬಾತ ಗಾಯಗೊಂಡು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ನೀವು ನೆಲೆಸಿರುವ ಪ್ರದೇಶ ದಟ್ಟಾರಣ್ಯದಿಂದ ಕೂಡಿದೆ, ಮನೆಯಿಂದ ಹೊರ ಬರಬೇಕಾದರೆ ಪ್ರಾಣಿಗಳ ಚಲನವಲನ ನೋಡಿ ಎಚ್ಚರಿಕೆಯಿಂದ ಮುಂದೆ ಬರಬೇಕು ಎಂದರು. ಅರಣ್ಯ ಇಲಾಖೆಯಿಂದ ಕೊಡಿಸಿರುವ 20 ಲಕ್ಷ ರೂ.ಗಳನ್ನು ತಮ್ಮ ಕುಟುಂಬದ ನಿರ್ವಹಣೆಗೆ ಬಳಸಬೇಕು, ಅನಗತ್ಯ ಖರ್ಚಿಗೆ ಕಡಿವಾಣ ಹಾಕಬೇಕು ಎಂದರು.

ತಮಗೆ ವಾಸಿಸಲು ಸೂಕ್ತ ಮನೆಯಿಲ್ಲ. ತಮಗೆ ಸರ್ಕಾರದಿಂದ ಮನೆಗಳನ್ನು ಮಂಜೂರು ಮಾಡಿಸಿಕೊಡಬೇಕು ಎಂದು ರಂಗಮ್ಮನ ಮಕ್ಕಳು ಶಾಸಕರಲ್ಲಿ ಮನವಿ ಮಾಡಿಕೊಂಡರು. ಶಾಸಕರು ಸಹ ಆದಿವಾಸಿಗಳ ಮನವಿಗೆ ಸ್ಪಂದಿಸಿ, ಮನೆ ಕೊಡಿಸುವ ಭರವಸೆ ನೀಡಿದರು.

ತಾಪಂ ಮಾಜಿ ಸದಸ್ಯರಾದ ಪಿ.ಕುಮಾರ ನಾಯಕ, ಶಾಮೀರ್ ಪಾಷಾ, ಗ್ರಾಪಂ ಮಾಜಿ ಉಪಾಧ್ಯಕ್ಷ ಶಿವನಾಯಕ, ಎಸಿಎಫ್ ಮಂಜುನಾಥ್, ತಾಪಂ ಕಾರ್ಯ ನಿರ್ವಹಣಾಧಿಕಾರಿ ಶ್ರೀಕಂಠರಾಜೇಅರಸ್, ರಾಮಸಮುದ್ರ ಪೂರ್ವ ಪೊಲೀಸ್ ಇನ್ಸ್‌ಪೆಕ್ಟರ್ ನವೀನ್, ತಾಲೂಕು ಶಿಕ್ಷಣ ಸಂಯೋಜಕ ವಿಶ್ವನಾಥ್ ಹಾಜರಿದ್ದರು.

ಕಾಡಾನೆಗಳ ಉಪಟಳ ತಡೆಯಲು ಅರಣ್ಯ ಇಲಾಖೆ ವಿಫಲ: ರೈತರಿಂದ ಡಿಸಿಎಫ್ ಕಚೇರಿ ಮುಂದೆ ಪ್ರತಿಭಟನೆ

ರೈತ ಸಹಭಾಗಿತ್ವದಲ್ಲಿ ಕಾಡಾನೆಗಳನ್ನು ಓಡಿಸಲು ಕ್ರಮ ವಹಿಸಲು ಆಗ್ರಹ



ಅಟ್ಟುಗೂಳಿಪುರ ಗ್ರಾಮದ ವ್ಯಾಪ್ತಿಯ ಜಮೀನುಗಗಳಿಗೆ ಕಾಡಾನೆಗಳು ದಾಳಿ ಮಾಡಿ ಫಸಲು ನಾಶ ಮಾಡುತ್ತಿದ್ದು. ಇದನ್ನು ತಡೆಯಲು ಅರಣ್ಯ ಇಲಾಖೆಯು ಸಂಪೂರ್ಣ ವಿಫಲವಾಗಿದೆ ಎಂದು ರೈತರು ಉಪ ಅರಣ್ಯ ಸಂರಕ್ಷಣಾ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜೂ.12– ತಾಲೂಕಿನ ಅಟ್ಟುಗೂಳಿಪುರ ಗ್ರಾಮದ ವ್ಯಾಪ್ತಿಯ ಜಮೀನುಗಗಳಿಗೆ ಕಾಡಾನೆಗಳು ದಾಳಿ ಮಾಡಿ ಫಸಲು ನಾಶ ಮಾಡುತ್ತಿವೆ ಇದನ್ನು ತಡೆಯಲು ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ರೈತರು ಉಪ ಅರಣ್ಯ ಸಂರಕ್ಷಣಾ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ನಗರದ ಗುಂಡ್ಲುಪೇಟೆ ಸರ್ಕಲ್‌ನಲ್ಲಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಮುಂದೆ ಜಮಾಯಿಸಿದ ರೈತರು ಡಿಸಿಎಫ್ ಭೇಟಿ ಮಾಡಲು ಮುಂದಾದರು. ಅದರೆ ಅಲ್ಲಿನ ಸಿಬ್ಬಂದಿಗಳು ಸಾಹೇಬರು ಮೀಟಿಂಗ್ ನಲ್ಲಿದ್ದಾರೆ ಎಂದು ಸುಮಾರು 3 ಗಂಟೆಗೂ ಹೆಚ್ಚು ಕಾಲ ಕಾಯಿಸಿದ ಪರಿಣಾಮ ರೈತರು ರೊಚ್ಚಿಗೆದ್ದು ಪ್ರತಿಭಟನೆಗೆ ಮುಂದಾದರು. ಸ್ಥಳಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಗಮಿಸಿ, ರೈತರ ಅಹವಾಲು ಸ್ವೀಕರಿಸಿ, ಕಚೇರಿಯಲ್ಲಿ ಕಾಡಾನೆ ತಡೆ ಬಗ್ಗೆ ಸಮಾಲೋಚನೆ ಮಾಡಿದರು.

ಇದಕ್ಕು ಮುನ್ನಾ ಮಾತನಾಡಿದ ಅಟ್ಟುಗೂಳಿಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ಕೆ. ಚನ್ನಂಜಪ್ಪ ಪುಣಜನೂರು ಅರಣ್ಯ ವಲಯ ವ್ಯಾಪ್ತಿಯ ಅಟ್ಟುಗೂಳಿಪುರ ಸುತ್ತಮುತ್ತಲಿನ ಜಮೀನುಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದೆ. ಸುವರ್ಣವತಿ ಹಾಗೂ ಚಿಕ್ಕಹೊಳೆ ಜಲಾಶಯಕ್ಕೆ ನೀರು ಕುಡಿಯಲು ಬರುವ ಕಾಡಾನೆಗಳು ನಮ್ಮ ಜಮೀನುಗಳಿಗೆ ನುಗ್ಗಿ ಫಸಲುಗಳನ್ನು ಹಾನಿ ಮಾಡುತ್ತಿವೆ. ನಿನ್ನೆ ಕೆಜಿಆರ್ ಪ್ರಕಾಶ್ ಅವರಿಗೆ ಸೇರಿದ 7 ತೆಂಗಿನ ಸಸಿಗಳು, ಗಣೇಶ್ ಅವರ ಜಮೀನಿನಲ್ಲಿ ಮುಸುಕಿನ ಜೋಳ, ಹಾಗೂ ಕೆ.ಸಿ.ನಾಗಣ್ಣ ಮತ್ತು ಮಹದೇವಪ್ಪ ಅವರ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿನ ಫಸಲು ನಾಶಪಡಿಸಿವೆ. ಈ ಸಂಬಂಧ ಅರಣ್ಯ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಿದರು ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಅರಣ್ಯಾಧಿಕಾರಿಗಳು ನಮ್ಮ ಜಮೀನುಗಳ ವ್ಯಾಪ್ತಿಯಲ್ಲಿ ಪರಿಶೀಲನೆ ಮಾಡಿ, ರೈಲ್ವೆ ಕಂಬಿಗಳನ್ನು ಅಳವಡಿಸಿಕೊಡುವ ಭರವಸೆ ನೀಡಿದ್ದರು. ಜೊತೆಗೆ 300 ಮೀಟರ್‌ಗೊಂದು ಕ್ಯಾಮರ್ ಅಳವಡಿಸಿ, ಅವುಗಳ ಚಲನವಲನಗಳನ್ನು ಗಮನಿಸಿ, ಜಮೀನಿಗೆ ಬರದಂತೆ ತಡೆಯಲು ಕ್ರಮ ವಹಿಸುವುದಾಗಿ ತಿಳಿಸಿದ್ದರು. ಇಬ್ಬರು ಅರಣ್ಯ ಗಾರ್ಡ್‌ಗಳನ್ನು ನೀಡಿ, ಇವರೊಂದಿಗೆ ರೈತರು ಸಹಕಾರ ನೀಡಿ, ಪ್ರತಿನಿತ್ಯ ಗಸ್ತು ಮಾಡಿ ಕಾಡಾನೆಗಳು ಬರದಂತೆ ತಡೆಯಲು ಕ್ರಮ ವಹಿಸಲಾಗಿತ್ತು. ಅದರಂತೆ ಕಳೆದ 10 ದಿನಗಳಿಂದ ರೈತರ ಸಹಭಾಗಿತ್ವದಲ್ಲಿ ರಾತ್ರಿ ವೇಳೆಯಲ್ಲಿ ಕಾಡಾನೆಗಳನ್ನು ಕಾಯುತ್ತಿದ್ದೇವೆ. ಇತ್ತೀಚೆಗೆ ಬೇಡಗುಳಿಯಲ್ಲಿ ರೈತ ಮಹಿಳೆ, ರೈತರೊಬ್ಬರ ಮೇಲೆ ಹುಲಿ ದಾಳಿ ಮಾಡಿದ ಪರಿಣಾಮ ಕಾಡಿನೊಳಗೆ ರೈತರನ್ನು ಬಿಡದಂತೆ ಕಟ್ಟೆಚ್ಚರ ವಹಿಸಲಾಗಿದೆ. ರೇಂಜರ್ ನಮ್ಮನ್ನು ಬಿಡುತ್ತಿಲ್ಲ. ಹೀಗಾಗಿ ನಮ್ಮ ಜಮೀನುಗಳಿಗೆ ಕಾಡಾನೆಗಳು ದಾಳಿ ಮಾಡಿವೆ ಎಂದು ದೂರಿದರು.

ಮತ್ತೋರ್ವ ರೈತ ಸಿದ್ದಯ್ಯನಪುರ ಡ್ರೈವರ್ ಪಾಪಣ್ಣ ಮಾತನಾಡಿ, ಪುಣಜನೂರು ಅರಣ್ಯ ವಲಯ ಅಧಿಕಾರಿಯ ಬೇಜವಾಬ್ದಾರಿತನದಿಂದ ನಮ್ಮ ಜಮೀನುಗಳಿಗೆ ಕಾಡಾನೆಗಳು ಬರುತ್ತಿವೆ. ಇದರ ಬಗ್ಗೆ ಅನೇಕ ಬಾರಿ ತಿಳಿಸಿದರು. ಸಹ ಉಡಾಫೆ ಉತ್ತರ ನೀಡುತ್ತಾರೆ. ಜೊತೆಗೆ ರೈತರ ಸಹಭಾಗಿತ್ವದಲ್ಲಿ ಕಾಡಾನೆ ಓಡಿಸುವ ಕ್ಯಾಂಪ್ ಮಾಡಿದ್ದು, ಇದನ್ನು ಸಹ ಮಾಡದಂತೆ ಅಡ್ಡಿ ಮಾಡುತ್ತಿದ್ದಾರೆ. ಹೀಗಾಗಿ ಹಿರಿಯ ಅಧಿಕಾರಿಗಳು ನಮ್ಮ ಸಮಸ್ಯೆಗೆ ಪೂರಕವಾಗಿ ಸ್ಪಂದಿಸಿ ರೈಲ್ವೆ ಕಂಬಿಗಳನ್ನು ಅಳವಡಿಸಿ ಕೊಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತರಾದ ಪ್ರಕಾಶ್, ಮಹೇಶ್, ಸೋಮಶೇಖರ್, ಕೆಜಿಆರ್ ಪ್ರಕಾದ್, ಪೆರ್ಯೆಯಸ್ವಾಮಿ ಇತರರಿದ್ದರು.

ತವರು ಮನೆಯಿಂದ ಮಹಿಳೆ ನಾಪತ್ತೆ



ಯಳಂದೂರು: ತಾಲೂಕಿನ ಮದ್ದೂರು ಗ್ರಾಮದ ರಾಜು ಅವರ ಪತ್ನಿ ಶಾಲಿನಿ(25) ತವರು ಮನೆ ಕಂದಹಳ್ಳಿ ಗ್ರಾಮದಿಂದ ಕಾಣೆಯಾಗಿದ್ದು ಇದುವರೆಗೂ ಪತ್ತೆ ಆಗಿಲ್ಲ. ಕಾಣೆಯಾದ ಮಹಿಳೆಯ ತಂದೆ ನಿಂಗರಾಜು ತನ್ನ ಮಗಳನ್ನು ಹುಡುಕಿಕೊಡಿ ಎಂದು ಯಳಂದೂರು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಕಾಣೆಯಾದ ಮಹಿಳೆ ಚಹರೆ : 5.0 ಅಡಿ ಎತ್ತರ, ಎಣ್ಣೆಗೆಂಪು ಮೈ ಬಣ್ಣ, ಹಾಗೂ ಸಾಧಾರಣ ಶರೀರ, ಕೋಲುಮುಖ, ಮನೆಯಿಂದ ಹೋಗುವಾಗ ಪಿಂಕ್ ಕಲರ್ ಚೂಡಿದಾರ್ ಧರಿಸಿರುತ್ತಾರೆ. ಕನ್ನಡ ಭಾಷೆ ಮಾತನಾಡುತ್ತಾರೆ. ಈ ಸಂಬಂಧ ಯಳಂದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಮೇಲ್ಕಂಡ ಮಹಿಳೆ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಯಳಂದೂರು ಪೊಲೀಸ್ ಠಾಣೆ 08226–240028. 9480804649, ಜಿಲ್ಲಾ ಪೊಲೀಸ್ ಕಚೇರಿ 08226–222383. ಕರೆ ಮಾಡಿ, ತಿಳಿಸಲು ಕೋರಲಾಗಿದೆ.

ಕಿನಕಹಳ್ಳಿ ಮಾದಪ್ಪ ನಿಧನ



ಯಳಂದೂರು, ಜೂ.12– ತಾಲೂಕಿನ ಕಿನಕಹಳ್ಳಿ ಗ್ರಾಮದ ಮೈಮುಲ್ ಹಾಗೂ ಚಾಮುಲ್ನ ಮಾಜಿ ನಿರ್ದೇಶಕ ಮಾದಪ್ಪ(72) ಬುಧವಾರ ಮುಂಜಾನೆ ನಿಧನರಾದರು. ಅನಾರೋಗ್ಯದ ನಿಮಿತ್ತ ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂಧಿಸದೆ ನಿಧನರಾದರು.

ಮೃತರಿಗೆ ಪತ್ನಿ ಸೇರಿದಂತೆ ಮಕ್ಕಳು ಇಬ್ಬರು ಗಂಡು ಮಕ್ಕಳು ಇದ್ದಾರೆ. ಇವರ ಅಂತ್ಯಕ್ರಿಯೆಯು ಸ್ವಗ್ರಾಮದ ಜಮೀನಿನಲ್ಲಿ ಬುಧವಾರ ನೆರವೇರಿತು.

ಒತ್ತುವರಿ ತೆರವಿಗೆ ಗ್ರಾಮಸ್ಥರು ಸಹಕರಿಸಿ



ಕೊಮಾರನಪುರ ಗ್ರಾಮದ ಲಿಂಗಾಯಿತ ಬೀದಿಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಸೋಮವಾರ ಭೂಮಿಪೂಜೆ ನೆರವೇರಿಸಿದರು.

ಯಳಂದೂರು, ಜೂ.12 (ವಿ.ನಾಗರಾಜು)– ಗ್ರಾಮೀಣ ಭಾಗದಲ್ಲಿ ನಡೆಯುವ ಕಾಮಗಾರಿಯ ಸಂದರ್ಭದಲ್ಲಿ ಅದರಲ್ಲೂ ವಿಶೇಷವಾಗಿ ರಸ್ತೆ, ಚರಂಡಿ ಕಾಮಗಾರಿಗಳ ಸಂದರ್ಭದಲ್ಲಿ ಗ್ರಾಮಸ್ಥರು ಒತ್ತುವರಿ ಮಾಡಿಕೊಂಡಿರುವ ಸ್ಥಳವನ್ನು ತೆರವುಗೊಳಿಸಲು ಇಲಾಖೆಯ ಅಧಿಕಾರಿಗಳಿಗೆ ಸಹಕರಿಸಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಸಲಹೆ ನೀಡಿದರು.

ತಾಲೂಕಿನ ಕೊಮಾರನಪುರ ಗ್ರಾಮದಲ್ಲಿ ಲಿಂಗಾಯಿತ ಬಡಾವಣೆಯ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ರಸ್ತೆ, ಚರಂಡಿ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಅನೇಕ ಕಡೆ ಸಾರ್ವಜನಿಕರು ಒತ್ತುವರಿ ತೆರವುಗೊಳಿಸಿ ರಸ್ತೆ ನಿರ್ಮಿಸಿ ಎಂದು ಮನವಿ ಮಾಡುತ್ತಾರೆ. ಸರ್ಕಾರಿ ಜಾಗವಾಗಿದ್ದಲ್ಲಿ ಇದನ್ನು ತೆರವುಗೊಳಿಸಲು ಇಲಾಖೆಯ ಅಧಿಕಾರಿಗಳು ಕ್ರಮ ವಹಿಸುತ್ತಾರೆ. ಇದಕ್ಕೆ ಸ್ಥಳೀಯರು ಸಹಕರಿಸಬೇಕು ಎಂದರು.

ಕೊಮಾರನಪುರ ಗ್ರಾಮದ ಈ ರಸ್ತೆ ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ಈಗ 20 ಲಕ್ಷ ರೂ. ವೆಚ್ಚದಲ್ಲಿ 80 ಮೀಟರ್ ಸಿಸಿ ಚರಂಡಿ 100 ಮೀಟರ್ ರಸ್ತೆ ಹಾಗೂ 2 ಕಡೆ ಡೆಕ್ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸಲಾಗಿದೆ. ಇಲ್ಲಿಗೆ ಆಗುವ ಕಾಮಗಾರಿಯನ್ನು ಗುಣಮಟ್ಟದಲ್ಲಿ ಮಾಡಬೇಕು ಎಂದು ಸಂಬಂಧಪಟ್ಟ ಇಲಾಖೆಯ ಜೆಇ ಹಾಗೂ ಗುತ್ತಿಗೆದಾರನಿಗೆ ಸೂಚನೆ ನೀಡಿದರು. ಗುಂಬಳ್ಳಿ ಗ್ರಾಮದಿಂದ ಕೊಮಾರನಪುರ ರಸ್ತೆ ಅಭಿವೃದ್ಧಿ ಕಾಮಗಾರಿ ನೆನೆಗುದಿಗೆ ಬಿದ್ದಿತ್ತು ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಗುತ್ತಿಗೆ ಪಡೆದ ವ್ಯಕ್ತಿ ಈ ಕೆಲಸವನ್ನು ಮಾಡಲೇ ಇಲ್ಲ. ಸರ್ಕಾರಕ್ಕೆ ಈ ಹಣ ವಾಪಸ್ಸಾಗಿತ್ತು. ಮತ್ತೆ ನಾನು ಸರ್ಕಾರದಿಂದ ಈ ಹಣವನ್ನು ಮರು ಮಂಜೂರು ಮಾಡಿಸಿಕೊಂಡು ಬಂದಿದ್ದೇನೆ. ಕಾಮಗಾರಿ ವಿಳಂಬವಾಗಿದ್ದು ಈಗಾಗಲೇ ಸಂಬಂಧಪಟ್ಟವರಿಗೆ ನಾನು ಸೂಚನೆ ನೀಡಿದ್ದು ಆದಷ್ಟು ಬೇಗ ಈ ಕೆಲಸ ಆರಂಭಗೊಳ್ಳಲು ಕ್ರಮ ವಹಿಸುತ್ತೇನೆ ಎಂದರು.

ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಮುಖಂಡರಾದ ವರ್ಧನ್, ರಂಗರಾಮು, ಪ್ರಕಾಶ್, ಕಂದಹಳ್ಳಿ ನಂಜುಂಡಸ್ವಾಮಿ, ಚಾಮುಲ್ ನಿರ್ದೇಶಕ ರೇವಣ್ಣ, ಶಿವಕುಮಾರ್, ವೀರಭದ್ರಸ್ವಾಮಿ ಸೇರಿದಂತೆ ಅನೇಕರು ಇದ್ದರು.

ಕಬ್ಬಿಗೆ 4500 ದರ ನಿಗದಿಗೆ ಒತ್ತಾಯಿಸಿ ರೈತರು ಪ್ರತಿಭಟನೆ



ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿ ಜವರೇಗೌಡರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ: ಪ್ರಸಕ್ತ ಸಾಲಿನಲ್ಲಿ ಕಬ್ಬಿಗೆ 4,500ರೂ. ದರ ನಿಗದಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷರಾದ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಒತ್ತಾಯಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ಜಮಾಯಿಸಿ ಅಪಾರ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಸಕ್ಕರೆ ಕಾರ್ಖಾನೆಗಳ ಪ್ರಾರಂಭಕೂ ಮುನ್ನ ರೈತ ಮುಖಂಡರು ಮತ್ತು ಕಬ್ಬು ಬೆಳಗಾರರು ಸಕ್ಕರೆ ಕಾರ್ಖಾನೆ ಮಾಲೀಕರ ಸಭೆಯನ್ನು ಜಿಲ್ಲಾಧಿಕಾರಿಗಳು ಕರೆದು ಸಮಸ್ಯೆ ಆಲಿಸಬೇಕು. ಪ್ರಸಕ್ತ ಸಾಲಿಗೆ 4,500 ರೂ ನಿಗದಿಗೆ ಆಗಬೇಕು ಕಟಾವು ಮತ್ತು ಸಾಗಾಣಿಕೆಯನ್ನು ಎಸ್‌ಎಪಿ ಕಮಿಟಿಯ ನಿರ್ಧಾರದಂತೆ ನಡೆದುಕೊಳ್ಳಬೇಕು ಮನಬಂದಂತೆ ಕಟಾವು ಸಾಗಾಣಿಕೆ ಕೂಲಿಯನ್ನು ಕಾರ್ಖಾನೆ ಅವರು ನಿಗದಿ ಮಾಡುತ್ತಾರೆ ಇದು ನಿಲ್ಲಬೇಕು ಎಂದರು.

ದ್ವಿಪಕ್ಷೀಯ ಒಪ್ಪಂದ ಪತ್ರ ಕಾರ್ಖಾನೆ ಮತ್ತು ಕಬ್ಬು ಬೆಳೆಗಾರ ನಡುವೆ ಆಗಬೇಕು ಸಕ್ಕರೆ ಕಾರ್ಖಾನೆ ಮುಂಭಾಗ ತೂಕದ ಯಂತ್ರವನ್ನು ಅಳವಡಿಸಬೇಕು ಏಕೆಂದರೆ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಸುಮಾರು 24 ಗಂಟೆ ಹೆಚ್ಚು ಕಾಲ ರೈತರ ಕಬ್ಬನ್ನು ಇರಿಸಿ ನಂತರ ತೂಕ ಮಾಡಲಾಗುತ್ತದೆ ಇದು ನಿಲ್ಲಬೇಕು ಎಂದರು.

ಪ್ರತಿಭಟನೆಯಲ್ಲಿ ಚಾಮರಾಜನಗರ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್ ಮೈಸೂರು ಜಿಲ್ಲಾಧ್ಯಕ್ಷ ವಳಗೆರೆ ಗಣೇಶ್ ಹನುಮಯ್ಯ ದೇವನೂರು ನಾಗೇಂದ್ರ ಪ್ರಕಾಶ್ ಗಾಂಧಿ ಮಲಿಯೂರು ಮಹೇಂದ್ರ ಮುದ್ದಳ್ಳಿ ಮಧು ಎಚ್ ಗುಂಡ್ಲಾ ಚಿದು ಗುರುವಿನಪುರ ಚಂದ್ರು ಆನಂದ ಸುದೀ ಊರ್ದಳ್ಳಿ ರಾಮಣ್ಣ ಬಸವಣ್ಣ ಸ್ಯಾಂಡ್ರಳ್ಳಿ ಉಮೇಶ್ ನಾಗರಾಜು ಬಸವರಾಜ್ ಶಿವಕುಮಾರ್, ರಾಜು, ಪುಟ್ಟಮಲ್ಲೇಗೌಡ ಕಿಳ್ಳಿಪುರಪುರ ಶ್ರೀಕಂತ ಇದ್ದರು.

■ ಸತ್ಯಮೂರ್ತಿ ತೋಳಹುಣಸೆ

'ಎಲ್ಟು ಮುತ್ತಾ' ನವಿಲು ಹಾವಿನ ಕಥೆ...





ಮಡಿಕೇರಿ ಎಂದಕೂಡಲೇ ನಮಗೆಲ್ಲ ನೆನಪಾಗೋದು ವೀರಯೋಧರ ಕಥೆಗಳು. ಆದರೆ ಅದನ್ನು ಬಿಟ್ಟು ಅದೇ ಮಣ್ಣಲ್ಲಿ ನಡೆಯೋ ರಾ ಸ್ಟೋರಿಯೊಂದನ್ನು 'ಎಲ್ಟು ಮುತ್ತಾ' ಚಿತ್ರದ ಮೂಲಕ ಹೇಳಹೊರಟಿದ್ದಾರೆ ನಿರ್ದೇಶಕ ರಾ ಸೂರ್ಯ. ಸತ್ಯ ಶ್ರೀನಿವಾಸನ್ ಮತ್ತವರ ಗೆಳೆಯರು ಸೇರಿ ನಿರ್ಮಿಸಿರುವ ಈ ಚಿತ್ರದಲ್ಲಿ ಶೌರ್ಯ ಪ್ರತಾಪ್ ಹಾಗೂ ನಿರ್ದೇಶಕ ರಾ ಸೂರ್ಯ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಪ್ರಿಯಾಂಕ ಮಲಾಲಿ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರನ್ನು ಶ್ರೀಮತಿ ಶೈಲಜಾ ವಿಜಯ್ ಕಿರಂಗದೂರ್ ಬಿಡುಗಡೆ ಮಾಡಿದರು.

ನಿರ್ದೇಶಕ ರಾ ಸೂರ್ಯ ಮಾತನಾಡುತ್ತಾ 'ಎಲ್ಟು ಮುತ್ತಾ' ಸಾವಿನ ಮನೆಯಲ್ಲಿ ಡೋಲು ಬಾರಿಸುವವರ ಸುತ್ತ ನಡೆಯುವ ಕಥೆ. ಎಲ್ಟು ಮುತ್ತಾ ಚಿತ್ರದ ಎರಡು ಪಾತ್ರಗಳಿವೆ. ಈ ಚಿತ್ರದಲ್ಲಿ ಮುತ್ತಾನ ಕಥೆಯನ್ನು ನಿರೂಪಣೆ ಮಾಡುವ ಎಲ್ಟು ಪಾತ್ರದಲ್ಲಿ ನಾನೇ ಕಾಣಿಸಿಕೊಂಡಿದ್ದೇನೆ. ಮುಗ್ಧ, ಅಷ್ಟೇ ಸುಂದರವಾಗಿ ಕಾಣುವ ಹಾಗೂ ತನ್ನ ನೃತ್ಯದಿಂದಲೇ ಎಲ್ಲರ ಗಮನ ಸೆಳೆಯುವ ಮುಗ್ದ ಸ್ವಭಾವದ ನವಿಲು, ಕೆರಳಿದರೆ ಕಾಳಿಂಗ ಸರ್ಪವನ್ನೂ ಕೊಲ್ಲುತ್ತದೆ. ಇದನ್ನೇ ನಾವು ಚಿತ್ರದ ಪಾತ್ರಗಳ ಮೂಲಕ ಹೇಳಿದ್ದೇವೆ. ಇದು ಕೊಡಗು ಭಾಗದಲ್ಲಿ ನಡೆಯುವ ಕಥೆಯಾಗಿದ್ದು, ಹೆಚ್ಚಿನ ಭಾಗದ ಚಿತ್ರೀಕರಣ ಅಲ್ಲೇ ನಡೆದಿದೆ. ಸಂಭಾಷಣೆ ಕೂಡ ಮಡಿಕೇರಿ ಶೈಲಿಯಲ್ಲೇ ಇರುತ್ತದೆ ಎಂದು ಹೇಳಿದರು.

ನಾಯಕ ಮುತ್ತಾನ ಪಾತ್ರ ಮಾಡಿರುವ ಶೌರ್ಯ ಪ್ರತಾಪ್ ಮಾತನಾಡಿ, ನಾನು ಕಲಾವಿದನಾಗುವುದು ನನ್ನ ತಂದೆಗೆ ಇಷ್ಟವಿರಲಿಲ್ಲ. ಅವರ ಇಚ್ಚೆಯಂತೆ ಓದಿ ಒಳ್ಳೆಯ ಸ್ಥಾನಕ್ಕೆ ಬಂದು ಈಗ ನಟನಾಗಿದ್ದೇನೆ. ನನ್ನ ಹಾಗೂ ನನ್ನ ತಂದೆ ಇಬ್ಬರ ಆಸೆಯೂ ಈಡೇರಿದೆ. ಅಭಿನಯದ ಜತೆ ಸಹ ನಿರ್ದೇಶಕನಾಗಿಯೂ ಕೆಲಸ ಮಾಡಿದ್ದೇನೆ ಎಂದು ಹೇಳಿದರು.

ನಿರ್ಮಾಪಕ ಸತ್ಯ ಶ್ರೀನಿವಾಸನ್ ಮಾತನಾಡುತ್ತಾ, ನಾನು ಐಟಿ ಉದ್ಯೋಗಿಯಾಗಿದ್ದು ವೈಲ್ಡ್ ಫೋಟೊಗ್ರಫಿ ನನ್ನ ಹವ್ಯಾಸಿ. ನನ್ನ ತಂದೆ ಶ್ರೀನಿವಾಸನ್ ಅವರು ತಮಿಳು ಚಿತ್ರರಂಗದಲ್ಲಿ ವಿತರಕರಾಗಿದ್ದರು. ಸಿನಿಮಾ ನಿರ್ಮಾಣ ಮಾಡಬೇಕೆಂದು ಮೊದಲಿಂದಲೂ ಆಸೆಯಿತ್ತು. ಅದೀಗ ಈಡೇರಿದೆ. ನಾವು ರಿಸ್ಕಿ ಲೊಕೇಶನ್‌ಗಳಲ್ಲಿ ಶೂಟ್ ಮಾಡುತ್ತಿರುವುದರಿಂದ ತಂಡದ ಪ್ರತಿಯೊಬ್ಬರಿಗೂ ಆರೋಗ್ಯ ಹಾಗೂ ಜೀವವಿಮೆ ಮಾಡಿಸಿದ್ದೆವು. ಯಾರಿಗೂ ತೊಂದರೆ ಆಗಬಾರದು ಎಂಬುದು ನಮ್ಮ ಉದ್ದೇಶ. ದೇವರ ದಯೆಯಿಂದ ಸಣ್ಣ ಅಡಚಣೆಯೂ ಆಗದೆ ಚಿತ್ರೀಕರಣ ನಡೆದು ಬಿಡುಗಡೆ ಹಂತ ತಲುಪಿದೆ. ಜುಲೈ ಅಂತ್ಯದಲ್ಲಿ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ. ಅದಕ್ಕೂ ಮುನ್ನ ಹುಬ್ಬಳ್ಳಿಯಲ್ಲಿ ಆಡಿಯೋ ರಿಲೀಸ್ ಮಾಡುವ ಪ್ಲಾನಿದೆ ಎಂದರು. ಸಂಗೀತ ಕಟ್ಟಿ ಹಾಗೂ ರವಿಬಸ್ರೂರ್ ಅವರಜತೆ ಕೆಲಸ ಕಲಿತ ಪ್ರಸನ್ನಕೇಶವ ಈ ಚಿತ್ರದ ಐದು ಹಾಡುಗಳನ್ನು ಹಾಗೂ ಹಿನ್ನೆಲೆ ಸಂಗೀತ ಮಾಡಿದ್ದಾರೆ,


ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಭೂ ಬಾಣ



ಇತ್ತೀಚೆಗೆ ಬೆಂಗಳೂರಿನ ಕಾಶಿ ವಿಶ್ವನಾಥನ ದೇವಸ್ಥಾನದಲ್ಲಿ ಭೂ ಬಾಣ ಚಿತ್ರದ ಮುಹೂರ್ತ ನೆರವೇರಿತು. ಎಸ್.ಕೆ.ಭಾಷಾ ಅವರು ಈ ಚಿತ್ರದ ನಾಯಕನಾಗಿ ನಟಸುವ ಜತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ ಎಸ್.ಆರ್. ಪ್ರಮೋದ್ ಕಥೆ, ಸಾಹಿತ್ಯ ರಚಿಸಿ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ಸಮಾಜದಲ್ಲಿ ಸಣ್ಣ ಸಣ್ಣ ವಿಷಯಕ್ಕೆ ಮನಸ್ತಾಪ ಬಂದು, ಒಂದು ಹಂತದಲ್ಲಿ ಕೊಲೆಯೊಂದಿಗೆ ಮುಕ್ತಾಯವಾಗುತ್ತದೆ. ಅದೇ ರೀತಿ ಈ ಚಿತ್ರದ ಕಥೆ ಒಂದು ಹಳ್ಳಿಯಲ್ಲಿ ನಡೆಯುತ್ತದೆ. ಅಲ್ಲಿನ ದ್ವೇಷದ ಹಿನ್ನಲೆ, ಹಳೆಯ ವೈಷಮ್ಯದಿಂದ ಅಪರಾಧಗಳು ನಡೆಯುತ್ತದೆ. ಊರಿನ ಗೌಡರ ಮನೆಗಳಲ್ಲೇ ಕೊಲೆಗಳು ಆಗುತ್ತಿರುತ್ತವೆ. ಅವುಗಳನ್ನು ಮಾಡೋರು ಯಾರು? ಯಾವ ಕಾರಣಕ್ಕೆ? ಇದೆಲ್ಲದರ ಹಿನ್ನೆಲೆ ಏನು ಎಂಬುದನ್ನು ಗೌಡರ ಮಗ ತನ್ನ ತಂದೆಯ ಸಾವಿನ ನಂತರ ಭೇದಿಸಲು ಆರಂಭಿಸುತ್ತಾನೆ. ಈ ಹಾದಿಯಲ್ಲಿ ಆತನಿಗೆ ಎದುರಾಗುವ ಸವಾಲುಗಳು ಏನು? ಅದನ್ನೆಲ್ಲ ಭೇದಿಸಿ ಹೇಗೆ ಗೆಲುವು ಸಾಧಿಸುತ್ತಾನೆ ಎಂಬುದನ್ನು ಭೂ ಬಾಣ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ಮೈಸೂರು ಭಾಗದ ಪುಟ್ಟ ಹಳ್ಳಿಯಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸುವ ಯೋಜನೆ ಹಾಕಲಾಗಿದೆ. ಚಿತ್ರದಲ್ಲಿ ಎರಡು ಹಾಡುಗಳು ಹಾಗೂ ಸಾಹಸ ಸನ್ನಿವೇಶವಿದೆ ಎಂದು ಹಂಚಿಕೊಂಡರು. ಹಾಸನ ಮೂಲದ ರೇಖಾ ರಮೇಶ್ ಚಿತ್ರದ ನಾಯಕಿಯಾಗಿದ್ದು, ಉಳಿದಂತೆ ನಾಯಕನ ತಂಗಿಯಾಗಿ ತನಿಖಾ ನಾರಾಯಣ್. ಅರ್ಯು ಮುಂತಾದವರು ನಟಿಸುತ್ತಿದ್ದಾರೆ. ಕೆವಿನ್.ಎಂ ಅವರ ಸಂಗೀತ, ಮೈಸೂರು ಸೋಮು ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಸಿನಿಪದಬಂಧ-580



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1.	ಶಂಕರ್ ನಾಗ್ - ಜರೀನಾ ವಾಹಬ್ ಅಭಿನಯದ ಪ್ರೀತಿಯ ಬೆಸುಗೆ	7
5.	ನಾದ ಸುರಭಿ ಚಿತ್ರದ ನಾಯಕ	3
6.	_ _ _ ಫಲ	3
7.	ಹೃದಯವಂತ ಚಿತ್ರದ ನಾಯಕಿ	2
8.	ಶ್ರೀನಿವಾಸನೆಂಡತಿಯ ಗೃಹಕ್ಕೆ ಕೆ. ಎಸ್. ಆರ್. ದಾಸ್ ನಿರ್ದೇಶಕ	5
9.	ಶ್ರೀಮುರಳಿಯ ಅಬ್ಬರ ಜೋರಾಗಿದೆ	3
11.	ಪ್ರಭಾಕರ್ ಚಿತ್ರ ನಡುಕ ಹುಟ್ಟಿಸಿದೆ	3
12.	ಚಲನಚಿತ್ರಗಳಲ್ಲಿ ಮಾರಾಮಾರಿಯನ್ನು ಹೆಸರಿಸುವ ಪರಿ	3
14.	ಮೂವರು ಅಪ್ಸರೆಯರಲ್ಲಿ ಒಬ್ಬಳು ಮಿಸ್ಸಾಗಿದ್ದಾಳೆ	5
16.	ಬಜಾರ್‌ನಲ್ಲಿ ಕಾಣಿಸಿಕೊಂಡ ಪಾಂಡವ	2
18.	ಈತನು ಒಬ್ಬ ಕಲಾ ನಿರ್ದೇಶಕ	3
19.	ಚೆಲುವಿನ ಚಿತ್ತಾರದ ಚೆಲುವೆ	3
20.	ರಾಮ್‌ಕುಮಾರ್ ಅಭಿನಯದ ತಾಯಿಯ ಮನೆಯ ಉಡುಗೊರೆ	7

ಮೇಲಿನಿಂದ ಕೆಳಕ್ಕೆ

1.	ವಿಷ್ಣು - ಜಯಪ್ರದಳ ಗಟ್ಟಿಯಾದ ಸಂಬಂಧ !	4
2.	ರಂಗಾಯಣ ರಘು ಯಾರಿಗೂ ತಿಳಿಯದ ಸ್ಥಳದಲ್ಲಿದ್ದಾನೆ	5
3.	ಹಣಡೊದತಿಗೆ ಹೀಗೊಂದು ಹೆಸರು	4
4.	ಹತ್ತಿರ ಇಲ್ಲಿ ಎರಡು ಬಾರಿ ಬಂದಿದೆ	6
8.	ಮದುವೆಯ ಆಮಂತ್ರಣ ತೆರೆಯ ಮೇಲೂ ಅಚ್ಚಾಗಿದೆ	5
10.	" _ _ _ _ _ _ ಬಂತು ಕಣ್ಣಿನಾಗೆ ನೂರೆಂಟು ಆಸೆ ಬಂತು ಬಾಳಿನಾಗೆ..... ",	6
13.	ಶಂಕರ್ ನಾಗ್ - ದೀಪಿಕಾಳ ನೂತನ ಬದುಕು	5
15.	ಬೆಣ್ಣೆಯಂತಿರುವ ನಟಿ	4
17.	ಕಲ್ಲಿನಲ್ಲಿ ಕೆತ್ತಿರುವ ಸ್ತ್ರೀ ವಿಗ್ರಹ	4

ಸಿನಿ ಪದಬಂಧ 579ರ ಉತ್ತರ

ಮಾ	ನ	ಸ	ಸ	ರೋ	ವ	ರ			ಜ	
ಳ			ತಿ			ಣ		ರಂ	ಗ	ಣ್ಣ
ವಿ		ಮ	ಸಾ	ಲ		ರಂ			ತ್	
ಕಾ	ವ್ಯ		ವಿ		ರಂ	ಗ	ನಾ	ಯ	ಕಿ	
			ತ್ರಿ		ಗಿ				ಲಾ	
ಕ	ಬೀ	ರ		ಹಂ	ತ	ಕ		ಸಿ	ಡಿ	ಲು
	ದಿ				ರಂ		ರಾ			
	ಬ	ಳ್ಳಾ	ರಿ	ನಾ	ಗ		ಜಾ		ಹೀ	ರಾ
	ಸ			ನೇ		ರಾ	ಧಿ	ಕಾ		ಮ
ಭಾ	ವ	ನಾ		ರಾ			ರಾ			ಸ್ವಾ
	ಣ್ಣ			ಜ	ನ	ನಿ	ಜ	ನ್ಮ	ಭೂ	ಮಿ

ವಿಜೇತರು: ಮಂಜುನಾಥ.ಬಿ., #1413, ಶೋಭ ಎಸ್ಟೇಟ್ ಹತ್ತಿರ, ವಸಂತ ನಗರ, ಮೈಸೂರು-570028

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸದ್ಯದಲ್ಲೇ ಶರ್ಮಿಳಾ ಮಾಂಡ್ರೆ ನಿರ್ಮಾಣದ ನೂತನ ಚಿತ್ರ



ಶರ್ಮಿಳಾ ಮಾಂಡ್ರೆ ಎಂದೊಡನೆ ನೆನಪಾಗುವುದೇ ಕಣ್ ಕಣ್ಣ ಸಲಿಗೇ ಹಾಡು. ನವಗ್ರಹ ರಿಲೀಸಾಗಿ 15 ವರ್ಷಗಳೇ ಕಳೆದಿದ್ದರೂ, ಇವತ್ತಿಗೂ ಜನ ಆ ಸುಂದರ ಗೀತೆ, ಅದರಲ್ಲಿ ನಟಿಸಿದ ಶರ್ಮಿಳಾ ಮಾಂಡ್ರೆ, ಧರ್ಮ ಜೋಡಿಯನ್ನು ಮರೆತಿಲ್ಲ. ಅಂದಿನಿಂದ ಈವರೆಗೂ ನಾಯಕಿಯ ಪಟ್ಟ ಉಳಿಸಿಕೊಂಡ ಅಪರೂಪದ ನಟಿ ಶರ್ಮಿಳಾ ಮಾಂಡ್ರೆ. ಇದೀಗ ಶರ್ಮಿಳಾ ಮಾಂಡ್ರೆಗೆ ಚಿತ್ತಾರ ರೀಡರ್ಸ್ ಚಾಯ್ಸ್ ಪ್ರಶಸ್ತಿ ಲಭಿಸಿದೆ.

ಮೂಲತಃ ಬೆಂಗಳೂರಿನವರೇ ಆದ ಶರ್ಮಿಳಾಗೆ ಚಿತ್ರರಂಗ ಹೊಸದೇನಲ್ಲ. ತಂದೆ ದಯಾನಂದ ಮಾಂಡ್ರೆ ಬಿಜಿನೆಸ್ ಮ್ಯಾನ್. ಆದರೆ ತಾತ ನಾರಾಯಣ ರಾವ್ ಮಾಂಡ್ರೆ ನಿರ್ಮಾಪಕರು, ವಿತರಕರು ಮಾತ್ರವಲ್ಲ, ಬೆಂಗಳೂರಿನ ಸಂಗಮ್ ಚಿತ್ರಮಂದಿರದ ಮಾಲೀಕರೂ ಆಗಿದ್ದರು. ಇವರ ಸಹೋದರತ್ತೆ ಸುನಂದಾ ಮುರಳೀ ಮನೋಹರ್ ಕೂಡ ನಿರ್ಮಾಣದಲ್ಲಿ ಹೆಸರು ಮಾಡಿದ್ದರು. 2007ರಲ್ಲಿ ತೆರೆಕಂಡ ಸಜನಿ ಮೂಲಕ ಚಿತ್ರರಂಗಕ್ಕೆ ಬಂದ ಶರ್ಮಿಳಾ ಮಾಂಡ್ರೆ, ಚೊಚ್ಚಲ ಸಿನಿಮಾದಲ್ಲೇ ಸೈಮಾ ಅವಾರ್ಡ್ ಪಡೆದಿದ್ದರು. ಆನಂತರ ರಮೇಶ್ ಅರವಿಂದ್ ನಿರ್ದೇಶನದ ವೆಂಕಟ ಇನ್ ಸಂಕಟ, ಇತ್ತೀಚಿನ ಗಾಳಿಪಟ 2 ಸೇರಿದಂತೆ ಸಾಕಷ್ಟು ಚಿತ್ರಗಳಲ್ಲಿ ನಟಿಸಿದ ಇವರು, 2 ವರ್ಷಗಳ ಹಿಂದೆ ತೆರೆಕಂಡ ಮಂಡಲ ಚಿತ್ರದಲ್ಲಿ ಏರೋಸ್ಪೇಸ್ ಇಂಜಿನಿಯರ್ ಆಗಿ ಕಾಣಿಸಿಕೊಂಡರು. ಜತೆಗೆ ಅಲ್ಲರಿ ನರೇಶ್ ನಟನೆಯ ಕೆವ್ವು ಕೇಕ ಎಂಬ ತೆಲುಗು ಸಿನಿಮಾದಲ್ಲೂ ಸಹ ನಟಿಸಿದರು. 2017ರಲ್ಲಿ ತೆರೆಕಂಡ ಆಕೆ ಚಿತ್ರದಲ್ಲಿ ಶರ್ಮಿಳಾ ಸಿಂಗಲ್ ಮದರ್ ಪಾತ್ರ ನಿರ್ವಹಿಸಿ ವಿಮರ್ಶಕರ ಮನ ಗೆದ್ದಿದ್ದರು. ನಂತರ ನಿರ್ಮಾಣ ಕ್ಷೇತ್ರಕ್ಕೆ ಎಂಟ್ರಿಕೊಟ್ಟ ಶರ್ಮಿಳಾ ಮಾಂಡ್ರೆ, ತಮಿಳಿನಲ್ಲಿ ಇವನಕ್ಕು ಎಂಗೆಯೋ ಮಚ್ಚಂ ಇರುಕ್ಕು ಮತ್ತು ನಾನುಂ ಸಿಂಗಲ್ ತಾನ್ ಚಿತ್ರಗಳನ್ನು ನಿರ್ಮಿಸಿದರು. ಕಳೆದ ವರ್ಷ ಪೌಡರ್ ಚಿತ್ರದಲ್ಲಿ ಮತ್ತೊಮ್ಮೆ ದಿಗಂತ್ ಜೋಡಿಯಾಗಿದ್ದ ಶರ್ಮಿಳಾ, ಈ ವರ್ಷ ನೀನಾಸಂ ಸತೀಶ್ ಜತೆಗಿನ ದಸರಾ ಚಿತ್ರದಲ್ಲಿ ನಟಿಸಲು ಸಿದ್ಧರಾಗಿದ್ದಾರೆ. ಮುಖ್ಯವಾಗಿ ದರ್ಶನ್ ನಟನೆಯ ಡೆವಿಲ್ ಚಿತ್ರದಲ್ಲಿಯೂ ಶರ್ಮಿಳಾ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದ್ದು ತೀವ್ರ ಕುತೂಹಲ ಸೃಷ್ಟಿಸಿದೆ.

ಈ ವರ್ಷ ತಮ್ಮದೇ ಹೋಮ್ ಬ್ಯಾನರ್‌ನಲ್ಲಿ ಹೊಸ ಸಿನಿಮಾ ಮಾಡುವ ಪ್ಲಾನ್ ನಡೆಯುತ್ತಿದ್ದು, ಸದ್ಯದಲ್ಲೇ ಅಭಿಮಾನಿಗಳಿಗೆ ಸರ್ಪ್ರೈಸ್ ನೀಡಲಿದ್ದಾರೆ, ತಾವೇ ಸ್ವತಃ ನಿರ್ಮಾಪಕರಾಗಿರುವ ಕಾರಣ ಕಥೆಗೆ ಹೆಚ್ಚು ಒತ್ತು ಕೊಟ್ಟು, ಸಿನಿಮಾ ಮಾಡುವುದಾಗಿಯೂ ಶರ್ಮಿಳಾ ಮಾಂಡ್ರೆ ಹೇಳಿದ್ದಾರೆ.

'ಸೆಪ್ಟೆಂಬರ್ 10' ಸಾಯಿಪ್ರಕಾಶ್ ನಿರ್ದೇಶನದ 105ನೇ ಚಿತ್ರ



ತವರಿಗೆ ಬಾ ತಂಗಿ, ಮುದ್ದಿನ ಮಾವ, ಅಣ್ಣ ತಂಗಿ, ಸೋಲಿಲ್ಲದ ಸರದಾರದಂತಹ ಯಶಸ್ವೀ ಚಿತ್ರಗಳ ನಿರ್ದೇಶಕ, ಶತ ಸಿನಿಮಾಗಳ ಸರದಾರ ಓಂ ಸಾಯಿಪ್ರಕಾಶ್ ಅವರ ನಿರ್ದೇಶನದ 105ನೇ ಚಿತ್ರ 'ಸೆಪ್ಟೆಂಬರ್ 10' ಬಿಡುಗಡೆಗೆ ಸಿದ್ದವಾಗಿದೆ. ಮನುಷ್ಯನ ಜೀವನದಲ್ಲಿ ಎದುರಾಗೋ ಎಲ್ಲಾ ಸಮಸ್ಯೆಗಳಿಗೆ ಆತ್ಮಹತ್ಯೆ ಒಂದೇ ಪರಿಹಾರವಲ್ಲ. ಎಲ್ಲೋ ಒಂದು ದಾರಿ ಇದ್ದೇ ಇರುತ್ತದೆ ಎಂಬ ಮೆಸೇಜ್ ಇಟ್ಟುಕೊಂಡು ಸಾಯಿಪ್ರಕಾಶ್ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಈಗಾಗಲೇ ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡಿರುವ ಈ ಚಿತ್ರ ಮುಂದಿನ ತಿಂಗಳು ಬಿಡುಗಡೆಯಾಗಲಿದೆ. ಈಗಾಗಲೇ ರಾಜ್ಯಾದ್ಯಂತ ಚಿತ್ರದ ಪ್ರಚಾರ ಕೈಗೊಂಡಿರುವ ಚಿತ್ರತಂಡ ಪ್ರೇಕ್ಷಕರಿಗೆ ಈ ಚಿತ್ರವನ್ನು ಯಾಕೆ ನೋಡಬೇಕು ಎಂದು ಮನದಟ್ಟು ಮಾಡಿಕೊಡುತ್ತಿದೆ,

ಸೆಪ್ಟೆಂಬರ್ 10 ವಿಶ್ವ ಆತ್ಮಹತ್ಯೆ ತಡೆ ದಿನ. ಅದೇ ಕಾನ್ಸೆಪ್ಟ್ ಇರುವ ಕಾರಣ ಚಿತ್ರಕ್ಕೆ ಈ ಟೈಟಲ್ ಇಡಲಾಗಿದೆ. ಶ್ರೀದೇವಿ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಶ್ರೀಮತಿ ಇ.ರಾಜಮ್ಮ ಸಾಯಿಪ್ರಕಾಶ್ ಅವರು ನಿರ್ಮಿಸಿರುವ ಈ ಚಿತ್ರದ ಮೂಲಕ ದುರ್ಬಲ ಹಾಗೂ ಸಂಕುಚಿತ ಮನಸಿನವರಿಗೆ ಉತ್ತಮ ಸಂದೇಶ, ಮಾರ್ಗದರ್ಶನ ನೀಡುವ ಪ್ರಯತ್ನ ಮಾಡಲಾಗಿದೆ. ಬಿಬಿಎಂಪಿ ಮಾಜಿ ಸದಸ್ಯರಾದ ಡಾ.ಎಸ್.ರಾಜು ಅವರು ನಮ್ಮ ಚಿತ್ರಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಚಿತ್ರದ ಆಶಯ ಹಾಗೂ ಅದರಲ್ಲಿರುವ ಮೆಸೇಜ್ ಎಲ್ಲರಿಗೂ ತಲುಪಬೇಕೆಂಬ ಸದುದ್ದೇಶದಿಂದ ತಮ್ಮ ಸಹಕಾರ ನೀಡುತ್ತಿದ್ದಾರೆ.

ಬೆಳೆನಷ್ಟ, ಸಾಲದ ಸುಳಿಗೆ ಸಿಕ್ಕ ರೈತರ ಆತ್ಮಹತ್ಯೆ, ಸಮಾಜ ಎದುರಿಸಲಾಗದೆ ಪ್ರೇಮಿಗಳ ಆತ್ಮಹತ್ಯೆ, ವ್ಯವಹಾರದಲ್ಲಿ ನಷ್ಟ ಅನುಭವಿಸಿ ವ್ಯಾಪಾರಿಗಳ ಆತ್ಮಹತ್ಯೆ, ಪರೀಕ್ಷೆ ಎದುರಿಸಲಾಗದೆ ವಿದ್ಯಾರ್ಥಿಗಳ ಆತ್ಮಹತ್ಯೆ, ಪೋಷಕರು ನಿರೀಕ್ಷಿಸಿದ ಅಂಕ ಗಳಿಸದ ಮಕ್ಕಳ ಆತ್ಮಹತ್ಯೆ. ಈ 5 ಪ್ರಮುಖ ಅಂಶಗಳ ಮೇಲೆ 'ಸೆಪ್ಟೆಂಬರ್ 10' ಸಿನಿಮಾದ ಚಿತ್ರಕಥೆ ಹೆಣೆಯಲಾಗಿದ್ದು, ಅದಕ್ಕೆಲ್ಲ ಮನೋವೈದ್ಯರ ಮೂಲಕ ಪರಿಹಾರದ ಮಾರ್ಗವನ್ನೂ ಸಹ ಸೂಚಿಸಲಾಗಿದೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಸಾಯಿಪ್ರಕಾಶ್, ನಾನು 2020ರಲ್ಲೇ ಈ ಸಿನಿಮಾ ಪ್ರಾರಂಭಿಸಿದೆ. ಶೂಟಿಂಗ್ ಮುಗಿಯುವಷ್ಟರಲ್ಲಿ ಕೊರೋನಾ ಪ್ರಾರಂಭವಾಯಿತು. ಜನ ಬರ್ತಾರೋ ಇಲ್ವೋ ಎಂಬ ಭಯದಿಂದ ರಿಲೀಸ್ ಮಾಡಲೇ ಇಲ್ಲ. ದೊಂಬರ ಕೃಷ್ಣ ಸುರೇಶ್‌ರಿಂದ ಡಾ.ರಾಜು ಅವರ ಪರಿಚಯವಾಯಿತು. ಅವರಿಗೆ ಕಥೆ ಹೇಳಿದಾಗ ತುಂಬಾ ಇಷ್ಟಪಟ್ಟರು. ಈಗಿನ ಕಾಲದಲ್ಲಿ ಇಂಥ ಸಿನಿಮಾಗಳು ಹೆಚ್ಚು ಹೆಚ್ಚು ಬರಬೇಕು. ಏನಾದರಾಗಲಿ ನಾವು ನಿಮ್ಮ ಜತೆ ಇರುತ್ತೇವೆ ಎಂದವರು ನಮ್ಮ ಜತೆ ನಿಂತರು. ಅವರು ಕೊಟ್ಟ ಧೈರ್ಯದಿಂದ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇನೆ. ಸಿನಿಮಾ ನೋಡಿದ ಕೆಲವರಾದರೂ ತಮ್ಮ ಮನಸನ್ನು ಬದಲಾಯಿಸಿಕೊಂಡರೆ ನಮ್ಮ ಪ್ರಯತ್ನ ಸಾರ್ಥಕ ಎಂದು ಹೇಳಿದರು. ಸಾಯಿಪ್ರಕಾಶ್ ಅವರ ಚಿತ್ರಕಥೆ ಹಾಗೂ ನಿರ್ದೇಶನ, ಡಾ.ವಿ.ನಾಗೇಂದ್ರಪ್ರಸಾದ್ ಅವರ ಸಂಗೀತ, ಜೆ.ಜಿ.ಕೃಷ್ಣ ಅವರ ಛಾಯಾಗ್ರಹಣ, ಬಿ.ಎ.ಮಧು ಅವರ ಸಂಭಾಷಣೆ ಈ ಚಿತ್ರಕ್ಕಿದೆ. ಹಿರಿಯ ಕಲಾವಿದ ರಮೇಶ್‌ಭಟ್ ಶಶಿಕುಮಾರ್, ಶ್ರೀನಿವಾಸಮೂರ್ತಿ, ರವೀಂದ್ರನಾಥ್, ಶಿವಕುಮಾರ್, ಗಣೇಶರಾವ್ ಕೇಸರ್‌ಕರ್, ಸಿಹಿಕಹಿ ಚಂದ್ರು ಪದ್ಮಾ ವಾಸಂತಿ, ಶ್ರೀರಕ್ಷಾ ಪ್ರಮುಖ ಪಾತ್ರಗಳಲ್ಲಿದ್ದಾರೆ,

ಕ್ರೈಮ್ ಥ್ರಿಲ್ಲರ್ ಬ್ಲಾಕ್‌ಶಿಪ್ ಟ್ರೈಲರ್



ಕ್ರೈಮ್, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಬ್ಲ್ಯಾಕ್‌ಶಿಪ್ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು, ಜೀವನ್ ಹಳ್ಳಿಕಾರ್ ಅವರ ನಿರ್ದೇಶನದ ಈ ಚಿತ್ರದಲ್ಲಿ ನಾಯಕ ನಾಯಕಿಯರಾಗಿ ವಿಶಾಲ ಕಿರಣ್ ಹಾಗೂ ನಿಶಾ ಹೆಗಡೆ ಮತ್ತು ಶಿವಾಂಗಿ ದಾವೆ ನಟಿಸಿದ್ದಾರೆ. ಈಗಾಗಲೇ ತನ್ನ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸ ಮುಗಿಸಿಕೊಂಡಿದ್ದು ಬಿಡುಗಡೆಗೆ ಸಜ್ಜಾಗಿದೆ. ಮೂಲತಃ ಡ್ಯಾನ್ಸರ್ ಆಗಿದ್ದ ಜೀವನ್ ಹಳ್ಳಿಕಾರ್ ಮೊದಲ ಬಾರಿಗೆ ಆಕ್ಷನ್ ಕಟ್ ಹೇಳಿರುವ ಚಿತ್ರವಿದು. ಅಶ್ವಿನಿ ಗುರುಚರಣ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ.

ನಿರ್ದೇಶಕ ಜೀವನ್ ಹಳ್ಳಿಕಾರ್ ಮಾತನಾಡುತ್ತಾ, 12 ವರ್ಷಗಳ ಹಿಂದೆ ನಾನು ಕಾಲೇಜ್ ಓದುವಾಗ ನಡೆದ ಘಟನೆಯೊಂದು ಈ ಚಿತ್ರಕ್ಕೆ ಸ್ಫೂರ್ತಿ. ಆಗ ಮಾರ್ಚರಿಯಲ್ಲಿದ್ದ ಶವವೊಂದು ಚಲಿಸಿದ ಪ್ರಕರಣ ನಡೆದಿತ್ತು. ಐದು ಜಾನರ್‌ನಲ್ಲಿ, ಎರಡು ಡೈಮೆನ್‌ಷನ್‌ನಲ್ಲಿ ನಡೆಯುವ ಕ್ರೈಮ್, ಸಸ್ಪೆನ್ಸ್, ಥ್ರಿಲ್ಲರ್ ಕಥೆಯಿದು,. ನಾನು ಉಪೇಂದ್ರ ಅಭಿಮಾನಿ, ಅವರಿಂದ ಸ್ಫೂರ್ತಿಗೊಂಡು ಈ ಚಿತ್ರಕಥೆ ಮಾಡಿದ್ದೇನೆ. ವಿಶೇಷವಾಗಿ ನಮ್ಮ ಚಿತ್ರದಲ್ಲಿನ ಬಹುತೇಕ ಪಾತ್ರಗಳಿಗೆ 2 ಶೇಡ್ ಇದೆ. ಒಂದಷ್ಟು ನೈಜ ಘಟನೆಗಳನ್ನು ಕೂಡ ಚಿತ್ರದಲ್ಲಿ ಬಳಸಿಕೊಂಡಿದ್ದೇವೆ. ಹೀರೋ ಮತ್ತು ವಿಲನ್ ಮಧ್ಯೆ ನಡೆಯುವ ಸಂಘರ್ಷ. ಕಹಿ ಘಟನೆಗಳನ್ನು ಮರೆತು ನಾಯಕ ಹೇಗೆ ಜೀವನ ಸಾಗಿಸುತ್ತಾನೆ. ಹಾಗೆ ಮರೆತ ವಿಷಯಗಳನ್ನು ಯಾವ ರೀತಿ ಹುಡುಕಲು ಪ್ರಾರಂಭಿಸುತ್ತಾನೆ. ಹೀಗೆ ಕೊನೆಯ ಹಂತದವರೆಗೂ ಚಿತ್ರ ಕುತೂಹಲ ಹೆಚ್ಚಿಸುತ್ತಲೇ ಸಾಗುತ್ತದೆ. ಬೆಂಗಳೂರು, ಮಂಗಳೂರು ಮತ್ತು ಮುಂಬೈ ಸುತ್ತಮುತ್ತ 69 ದಿನಗಳವರೆಗೆ ಚಿತ್ರೀಕರಣ ನಡೆಸಸಿದ್ದೇವೆ ಎಂದರು,

ಫಿಟ್ನೆಸ್ ಮಾಡಲ್ ಆದ ವಿಶಾಲ್ ಕಿರಣ್ ಈ ಚಿತ್ರದಲ್ಲಿ ಸಿಬಿಐ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಭೂಗತ ಲೋಕದ ಚಟುವಟಿಕೆಯಲ್ಲಿ ಒಬ್ಬ ಇನ್‌ವೆಸ್ಟಿಗೇಶನ್ ಆಫೀಸರ್ ಜರ್ನಿ ಹೇಗಿರುತ್ತೆ ಎಂಬುದನ್ನು ಚಿತ್ರದಲ್ಲಿ ತೋರಿಸಲಾಗಿದೆ. ನಾಯಕಿ ನಿಶಾ ಹೆಗಡೆ ಅವರಿಗೆ ಇದು 3ನೇ ಚಿತ್ರವಾದರೂ ಲೀಡ್ ಆಗಿ ಮೊದಲ ಸಿನಿಮಾ. ಇವರ ಪಾತ್ರಕ್ಕೂ 2 ಶೇಡ್ ಇದೆ. ಹಿರಿಯ ನಟರಾದ ಸಿದ್ಲಿಂಗು ಶ್ರೀಧರ್ ಹಾಗೂ ಕೃಷ್ಣ ಹೆಬ್ಬಾಳೆ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಗುಜರಾತ್ ಮೂಲದ ಶಿವಾಂಗಿ ದಾವೆ ಚಿತ್ರದ ನಾಯಕಿಯಾಗಿದ್ದು, ಆಡಿಶನ್ ಮೂಲಕ ಚಿತ್ರಕ್ಕೆ ಸೆಲೆಕ್ಟ್ ಆಗಿದ್ದಾರೆ. ಖಳನಾಗಿ ಪ್ರಶಾಂತ್.ವಿ.ಹರಿ, ಸುಂದರ್ ವೀಣಾ, ಪುನೀತ್, ದೀಪಿಕಾ ಅಡ್ತಲೆ ಮುಂತಾದವರು ಅಭಿನಯಿಸಿದ್ದಾರೆ. ಸಿದ್ದಾರ್ಥ್ ಕಾಮತ್ ಅವರ ಸಂಗೀತ ಸಂಯೋಜನೆ, ದೇವೂ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



ಮೈಸೂರು ಮಿತ್ರ

ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮ

ಆರ್.ಪಿ.ಹುಂಡಿ ಗ್ರಾಮದ ಸಮಗ್ರ ಅಭಿವೃದ್ಧಿಗೆ ಬದ್ಧ

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ

ತಿ.ನರಸೀಪುರ, ಜೂ.12– ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರ್.ಪಿ.ಹುಂಡಿ ಗ್ರಾಮದ ಸ್ಮಶಾನ ಅಭಿವೃದ್ಧಿಗೆ ಹೆಚ್ಚುವರಿ ಅನುದಾನ ನೀಡಲಾಗುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ ನೀಡಿದರು.

ತಾಲೂಕಿನ ಆರ್.ಪಿ.ಹುಂಡಿ ಗ್ರಾಮದ ಸರ್ಕಾರಿ ಬಾಲಕರ ಶಾಲೆಯಲ್ಲಿ ನಡೆದ ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಗ್ರಾಮದ ಸಾರ್ವಜನಿಕ ಸ್ಮಶಾನ ಅಭಿವೃದ್ಧಿಗೆ ಈಗಾಗಲೇ ಟಿಎಸ್ಪಿ ಅನುದಾನದಡಿ 40 ಲಕ್ಷ ರೂ. ನೀಡಲಾಗಿದೆ. ಗ್ರಾಮಸ್ಥರು ಮತ್ತಷ್ಟು ಅನುದಾನಕ್ಕೆ ಬೇಡಿಕೆ ಇಟ್ಟ ಹಿನ್ನೆಲೆಯಲ್ಲಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದ ಅವರು ಸ್ಮಶಾನದ ಬಳಿ ಒತ್ತುವರಿಯಾಗಿರುವ ಜಾಗ ಅಳತೆ ಮಾಡಿಸಿ ತೆರವುಗೊಳಿಸಿದರೆ 7 ಗುಂಟೆ ಬದಲಿಗೆ 10 ಗುಂಟೆ ಕೊಡಿಸಲು ಕ್ರಮ ಕ್ರಮ ವಹಿಸುತ್ತೇನೆ. ಕೂಡಲೇ ಸರ್ವೇ ಇಲಾಖೆಯವರು ಸ್ಮಶಾನದ ಜಾಗ ಒತ್ತುವರಿಯಾಗಿದ್ದಲ್ಲಿ ಅದನ್ನು ತೆರವುಗೊಳಿಸಬೇಕು ಎಂದು ಸೂಚಿಸಿದರು.



ಆರ್.ಪಿ.ಹುಂಡಿ ಗ್ರಾಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಗ್ರಾಮಸ್ಥರ ಅಹವಾಲು ಸ್ವೀಕರಿಸಿದರು.

ಗ್ರಾಮದಲ್ಲಿ ನಿರ್ಮಾಣವಾಗಿರುವ ವಾಲ್ಮೀಕಿ ಸಮುದಾಯ ಭವನಕ್ಕೆ ಊಟದ ಹಾಲ್ ನಿರ್ಮಾಣ ಮಾಡಲು 30 ಲಕ್ಷ ರೂ. ಬಿಡುಗಡೆ ಮಾಡುವುದಾಗಿ ತಿಳಿಸಿದ ಡಾ.ಯತೀಂದ್ರ ಕಸಬಾ ಹೋಬಳಿ ವ್ಯಾಪ್ತಿಯ ತುಂಬಲ, ಗರ್ಗೇಶ್ವರಿ, ಹೊಸಕೋಟೆ, ಕುಪ್ಯ ಹಾಗೂ ರಂಗಸಮುದ್ರ ಗ್ರಾಮಗಳಲ್ಲಿ 5 ಸಾವಿರ ವಿದ್ಯುತ್ ಕಂಬಗಳನ್ನು ಅಳವಡಿಸುವ ಮೂಲಕ ಆದರ್ಶ ಗ್ರಾಮದಡಿ ಹೋಬಳಿಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗ್ರಾಮದ ಬಸ್ ನಿಲ್ದಾಣ ಬಳಿಯ 2 ಎಕರೆ ಜಮೀನನ್ನು ಆಶ್ರಯ ಕಮಿಟಿಗೆ ಹಸ್ತಾಂತರಿಸುವಂತೆ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅವರಿಗೆ ಸೂಚಿಸಿದ ಯತೀಂದ್ರ ಅವರು ಆಶ್ರಯ ಸಮಿತಿಯವರು ನಂತರ ಅದನ್ನು ಬಡ ಜನರಿಗೆ ಹಂಚಿಕೆ ಮಾಡಲು ಕ್ರಮ ಜರುಗಿಸಲು ಸೂಚಿಸಿದರು.

ವರುಣ ಕ್ಷೇತ್ರದ ಪ್ರತಿಯೊಂದು ಗ್ರಾಮದ ಜನರ ಸಮಸ್ಯೆ ಆಲಿಸಿ, ಸ್ಥಳೀಯವಾಗಿ ಪರಿಹರಿಸಲು ಜನಸಂಪರ್ಕ ಸಭೆ ನಡೆಸುತ್ತಿದ್ದೇನೆ. ಬಟ್ಟಳಿಕೆ ಹುಂಡಿ ಗ್ರಾಮದಲ್ಲಿ ಗ್ರಾಮಸ್ಥರ ಮನವಿಯಂತೆ ಚಾವಡಿ ಕಟ್ಟೆಯನ್ನು ಸರ್ಕಾರದ ಅನುದಾನದಲ್ಲೇ ನಿರ್ಮಾಣ ಮಾಡಲು 5 ಲಕ್ಷ ರೂ. ಅನುದಾನ ಮಂಜೂರು ಮಾಡಲಾಗಿದೆ. ನೆನೆಗುದಿಗೆ ಬಿದ್ದಿರುವ ಕನಕ ಸಮುದಾಯ ಭವನ ಮತ್ತು ದೇವಾಲಯ ಜೀರ್ಣೋದ್ಧಾರಕ್ಕೆ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ತುಂಬಲ ಗ್ರಾಮದವರೆಗಿನ ಸಾರಿಗೆ ಬಸ್‌ಗಳ ಸಂಚಾರವನ್ನು ಅಗಸ್ತ್ಯಪುರ ಮಾರ್ಗವಾಗಿ ಬೊಮ್ಮನಾಯಕನಹಳ್ಳಿವರೆಗೂ ವಿಸ್ತರಿಸಬೇಕೆಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ತಾಲೂಕು ಕುರುಬ ಸಂಘದ ಮನ್ನೆಹುಂಡಿ ಮಹೇಶ್, ಮಾಜಿ ಅಧ್ಯಕ್ಷ ತುಂಬಲ ಪ್ರಶಾಂತ್ ಬಾಬು, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ತುಂಬಲ ಗ್ರಾಪಂ ಅಧ್ಯಕ್ಷ ರಾಮನಂಜಯ್ಯ, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಆರ್.ಪಿ.ಹುಂಡಿ ನಾಗರಾಜು, ಗ್ರಾಪಂ ಸದಸ್ಯರಾದ ಕಂಬಯ್ಯ, ಚಂದ್ರಶೇಖರ್, ಮಾಜಿ ಉಪಾಧ್ಯಕ್ಷ ಶೇಖರ್, ಗುರುರಾಜು, ಸತೀಶ್, ತಾಪಂ ಮಾಜಿ ಸದಸ್ಯ ರಮೇಶ್, ಎಂ.ಸಿದ್ದಯ್ಯ, ನಾಗಣ್ಣ, ನಾರಾಯಣ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಮಳೆ ನಡುವೆ ಸಮಸ್ಯೆ ಆಲಿಕೆ: ಗ್ರಾಮಸ್ಥರ ಮೆಚ್ಚುಗೆ

ಜಿಟಿ ಜಿಟಿ ಮಳೆ ನಡುವೆಯೇ ಜನಸಂಪರ್ಕ ಸಭೆಗೆ ಚಾಲನೆ ನೀಡಿದ ಡಾ.ಯತೀಂದ್ರ ಅವರು ಮೊದಲಿಗೆ ಆರ್.ಪಿ.ಹುಂಡಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿದರು. ನಂತರ ಮುತ್ತತ್ತಿ, ತುಂಬಲ, ಅಗಸ್ತ್ಯಾಪುರ, ಬಟ್ಟಳಿಕೆಹುಂಡಿ ಹಾಗೂ ಬೊಮ್ಮನಾಯಕನ ಹಳ್ಳಿಗೆ ತೆರಳಿ ಗ್ರಾಮಸ್ಥರ ಸಮಸ್ಯೆ ಆಲಿಸಿದರು. ಮಳೆ ನಡುವೆಯೇ ಜನಸಂಪರ್ಕ ಸಭೆ ನಡೆಸಿದ ಡಾ.ಯತೀಂದ್ರ ಅವರ ನಡೆಗೆ ಗ್ರಾಮಸ್ಥರಿಂದ ಮೆಚ್ಚುಗೆ ವ್ಯಕ್ತವಾಯಿತು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜೂ.12– ತಾಲೂಕು ನಾಯಕ ನೌಕರರ ಸಂಘ ನಾಯಕ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ತಾಲೂಕಿನ ನಾಯಕ ಜನಾಂಗದ ವಿದ್ಯಾರ್ಥಿಗಳು ತಮ್ಮ ಸ್ವವಿಳಾಸ, ಭಾವಚಿತ್ರ, ಆಧಾರ್ ಕಾರ್ಡ್, ಅಂಕಪಟ್ಟಿ ಹಾಗೂ ಜಾತಿ ಪ್ರಮಾಣ ಪತ್ರದ ನಕಲು ಪ್ರತಿ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಮಹರ್ಷಿ ವಾಲ್ಮೀಕಿ ಸ್ಕೂಲ್ ತಿ.ನರಸೀಪುರ ಟೌನ್, ಈ ವಿಳಾಸಕ್ಕೆ ಜೂ.30 ರೊಳಗೆ ಅರ್ಜಿ ಸಲ್ಲಿಸಬಹುದು. ಪ್ರತಿಭಾ ಪುರಸ್ಕಾರ ಸಮಾರಂಭ ಜು.6 ರಂದು ನಡೆಯಲಿದ್ದು, ಹೆಚ್ಚಿನ ಮಾಹಿತಿಗೆ ತಾಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಆರ್.ರಾಜು ಮೊ. 7026340955, ಕಾರ್ಯದರ್ಶಿ ಬಿ. ಶಾಂತರಾಜು 9448160166 ಅವರನ್ನು ಸಂಪರ್ಕಿಸಬಹುದು.

ವಿಜೃಂಭಣೆಯ ಸೌರನರಸಿಂಹ ಜಯಂತೋತ್ಸವ



ತಿ.ನರಸೀಪುರದಲ್ಲಿ ಸೌರನರಸಿಂಹ ಜಯಂತೋತ್ಸವ ನಡೆಯಿತು.

ತಿ.ನರಸೀಪುರ, ಜೂ.12– ಪಟ್ಟಣದ ಪುರಾತನ ಪ್ರಸಿದ್ಧ ಶ್ರೀಗುಂಜಾ ನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸ್ವಾಮಿಯವರ ಸೌರನರಸಿಂಹ ಜಯಂತೋತ್ಸವ ವಿಜೃಂಭಣೆಯಿಂದ ನಡೆಯಿತು.

ಸೌರಮಾನ ನರಸಿಂಹ ಜಯಂತಿ ಪ್ರಯುಕ್ತ ದೇವಾಲಯದಲ್ಲಿ ಬೆಳಗ್ಗೆ ಗೋಪೂಜೆ, ಅಭಿಷೇಕ, ಮಧ್ಯಾಹ್ನ ಅಲಂಕಾರ, ಮಹಾಮಂಗಳಾರತಿ, ಶಾತ್ತುಮುರೈ ಹಾಗೂ ಸಂಜೆ ತಿರುವೀದಿ ಉತ್ಸವಗಳು ವೈಭವದಿಂದ ಜರುಗಿತು. ಬಳಿಕ ಸಾವಿರಾರು ಜನರಿಗೆ ದಾಸೋಹ ಏರ್ಪಡಿಸಲಾಗಿತ್ತು. ಗೋಪೂಜೆ ನಡೆಸಿದ ಗೋವುಗಳಿಗೆ ಉಚಿತ ಮೇವುಗಳನ್ನು ನೀಡಲಾಯಿತು. ಜಯಂತೋತ್ಸವದಲ್ಲಿ ಸೇವಾರ್ಥದಾರರಾದ ಬೆಂಗಳೂರಿನ ನರಸಿಂಹ ಮತ್ತು ನಂಜುಂಡಸ್ವಾಮಿ, ಅರ್ಚಕರಾದ ಸಂಪತ್ ಕುಮಾರ್, ಶ್ರೀಧರ್ ಭಟ್, ಶ್ರೀಪಾದ, ಸಿಬ್ಬಂದಿ ಸೇರಿದಂತೆ ಮುಖಂಡರು ಹಾಗೂ ಭಕ್ತರು ಭಾಗವಹಿಸಿದ್ದರು.

ಅರ್ಹ ಫಲಾನುಭವಿಗಳಿಗೆ ಸಾಗುವಳಿ ವಿತರಣೆ: ಜಿಡಿಹೆಚ್

ಹುಣಸೂರು, ಜೂ.12– ಅನೇಕ ವರ್ಷಗಳಿಂದ ರೈತರು ಬೆವರು ಸುರಿಸಿ ಕಷ್ಟಪಟ್ಟು ದುಡಿಯುತ್ತಿದ್ದ ಭೂಮಿಗೆ ಹಕ್ಕು ಭಾದ್ಯತೆಯುಳ್ಳ ಸಾಗುವಳಿ ಸಿಗದೇ ಹಲವು ಸವಲತ್ತುಗಳಿಂದ ವಂಚಿತರಾಗಿದ್ದರು. ಇದನ್ನು ಸರಿಪಡಿಸಲು ನಮೂನೆ 57ರಲ್ಲಿ ಅರ್ಜಿ ಸಲ್ಲಿಸಿದ್ದ ಸಾವಿರಾರು ರೈತರಿಗೆ ಹಂತ ಹಂತವಾಗಿ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಸಾಗುವಳಿ ನೀಡಲಾಗುತ್ತಿದೆ ಎಂದು ಶಾಸಕ ಹರೀಶ್ ಗೌಡ ತಿಳಿಸಿದರು.

ನಗರದ ತಹಸೀಲ್ದಾರ್ ಕಚೇರಿಯಲ್ಲಿ ನಡೆದ ಅಕ್ರಮ–ಸಕ್ರಮ ಸಮಿತಿ ಸಭೆಯಲ್ಲಿ 23 ಫಲಾನುಭವಿಗಳ ಪೈಕಿ 21 ಮಂದಿಗೆ ಸಾಗುವಳಿ ಪತ್ರ ವಿತರಿಸಿ ಮಾತನಾಡಿದ ಅವರು, ಇನ್ನುಳಿದ 2 ಅರ್ಜಿಗಳು ಜಿಲ್ಲಾಧಿಕಾರಿಗಳ ಪರಿಶೀಲನೆಗೆ ಕಳುಹಿಸಲಾಗಿದೆ ಎಂದರು.



ತಹಸೀಲ್ದಾರ್ ಕಚೇರಿಯಲ್ಲಿ ಅಕ್ರಮ ಸಕ್ರಮ ಸಮಿತಿ ಸಭೆ ನಡೆಯಿತು

ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಸಾವಿರಾರು ರೈತರು ತಮ್ಮ ಹಕ್ಕು ಭಾದ್ಯತೆ, ಸಾಗುವಳಿಗಾಗಿ ನಮೂನೆ 57ರಲ್ಲಿ 2019ರಿಂದ ನಿಗದಿತ ದಿನಾಂಕದವರೆಗೆ 2500ಕ್ಕೂ ಹೆಚ್ಚು ಅರ್ಜಿ ಸಲ್ಲಿಸಿದ್ದರು. ಅವುಗಳನ್ನು ಕಂದಾಯ ಇಲಾಖೆ ಅಧಿಕಾರಿಗಳು ಪರಿಶೀಲಿಸಿದ್ದು, ಅರ್ಹರಿಗೆ ಹಂತ ಹಂತವಾಗಿ ಸಾಗುವಳಿ ನೀಡಲಾಗುತ್ತಿದೆ ಎಂದರು.

ಸಭೆಯಲ್ಲಿ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ತಹಸೀಲ್ದಾರ್ ಮಂಜುನಾಥ್, ಆಡಳಿತ ಶಿರಸ್ತೇದಾರ್ ಶ್ರೀಪಾದ, ಸಮಿತಿ ಸದಸ್ಯರಾದ ಕುಮಾರ್, ಗುಣಶೇಖರ, ಲತಾ, ತಾಲೂಕಿನ ಎಲ್ಲಾ ಕಂದಾಯ ಅಧಿಕಾರಿಗಳು, ಗ್ರಾಮ ಲೆಕ್ಕಿಗರು ಇದ್ದರು.

ಕೇತುಪುರದಲ್ಲಿ ಗಿಡ ನೆಡುವ ಕಾರ್ಯಕ್ರಮ



ಬನ್ನೂರು ಸಮೀಪದ ಕೇತುಪುರದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೇತುಪುರ ಗ್ರಾಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಡಾ.ಪಿ.ಬೋರೇಗೌಡ, ತಾಲೂಕು ಅರಣ್ಯಾಧಿಕಾರಿ ಎಸ್.ಡಿ.ರಾಜೇಶ್, ಉಪವಲಯ ಅರಣ್ಯಾಧಿಕಾರಿ ಆರ್.ವಿನಯ್‌ಕುಮಾರ್, ಸಿಬ್ಬಂದಿ ಮೋಹನ್ ಕುಮಾರ್, ಪುಟ್ಟಸ್ವಾಮಿ ಇನ್ನಿತರರಿದ್ದರು.

ಕನ್ನಡ ಮಠದಲ್ಲಿ ಗಣರಾಧನೆ, ಶಾಲಾ ವಾರ್ಷಿಕೋತ್ಸವ

ಬೆಟ್ಟದಪುರ, ಜೂ.12– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಕನ್ನಡ ಮಠದಲ್ಲಿ ಗುರುವಾರ ಚನ್ನವೀರ ದೇಶಿಕೇಂದ್ರ ಸ್ವಾಮೀಜಿಗಳ 97ನೇ ಗಣರಾಧನೆ, ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ 44ನೇ ಗಣರಾಧನೆ ಹಾಗೂ ಬೆಟ್ಟದಪುರ, ಬಸವಪಟ್ಟಣ ಶಾಲೆಗಳ ವಾರ್ಷಿಕೋತ್ಸವ ನಡೆಯಿತು. ಕಾರ್ಯಕ್ರಮವನ್ನು ಮಠಾಧ್ಯಕ್ಷ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿ ಮಾತನಾಡಿದರು.



ಕನ್ನಡ ಮಠದಲ್ಲಿ ಗಣರಾಧನೆ, ಶಾಲೆಗಳ ವಾರ್ಷಿಕೋತ್ಸವ ನಡೆಯಿತು.

ಹೊಳೆನರಸೀಪುರ ತಾಲೂಕಿನ ಮುಕುಂದೂರು ಮಠದ ಮಹಾಂತ ಶಿವಯೋಗಿ ಶ್ರೀಗಳು ಮಾತನಾಡಿ, ಬಾಲ್ಯದಲ್ಲಿ ಕಲಿತ ಸಂಸ್ಕಾರ ನಮ್ಮನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಬೆಟ್ಟದಪುರ ಎಸ್‌ಸಿವಿಡಿಎಸ್ ಶಾಲೆಯ 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಸೈಕಲ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ದಿಂಡುಗಾಡು ಮಠದ ಅಪ್ಪಾಜಿ ಸ್ವಾಮೀಜಿ, ಹಾಸನದ ತಣ್ಣೀರುಹಳ್ಳ ಮಠದ ಶ್ರೀವಿಜಯಕುಮಾರ ಸ್ವಾಮೀಜಿ, ಕೊಡ್ಲಿಪೇಟೆ ಕಲ್ಮಠದ ಶ್ರೀಮಹಾಂತ ಶಿವಯೋಗಿ ಸ್ವಾಮೀಜಿ, ಕಲ್ಯಾಣಪುರ ಮಠದ ಶರಣ ಮಾತೆ ಚಿನ್ಮಯನಂದೆ, ಲಾಲನಹಳ್ಳಿ ಮಠದ ಜಯದೇವಿತಾಯಿ ಮಾತೆ, ಸರಗೂರು ಮಠದ ಶ್ರೀಮೃತ್ಯುಂಜಯ ಸ್ವಾಮೀಜಿ, ಕರ್ಪೂರಹಳ್ಳಿ ಮಠದ ಶ್ರೀಗಳು, ಗದಗ ಮಠದ ಕಿರಿಯ ಶ್ರೀಗಳು, ಸೂಳೆಕೋಟೆ ಗ್ರಾಮದ ಕುಮಾರಸ್ವಾಮಿ, ಹರಳಹಳ್ಳಿ ಮಠದ ಶ್ರೀಕಂಠ ಆರಾಧ್ಯ ಹಾಗೂ ಶಾಲಾ ಮುಖ್ಯೋಪಾಧ್ಯಾಯರು, ವಿದ್ಯಾರ್ಥಿಗಳು ಇತರರಿದ್ದರು.

ಕೆಂಚನಹಳ್ಳಿಯಲ್ಲಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ

ಸರಗೂರು, ಜೂ.12– ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಅಂಗ ಸಂಸ್ಥೆಯಾದ ಸಾಮಾಜಿಕ, ಆರ್ಥಿಕ ಸಬಲೀಕರಣ ಮತ್ತು ಗಿರಿಜನ ಅಭಿವೃದ್ಧಿ ಚಟುವಟಿಕೆಗಳ ವಿಭಾಗ ಕೆಂಚನಹಳ್ಳಿ ಹಾಗೂ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಸುತ್ತೂರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಪಶುಪಾಲನೆ ಹಾಗೂ ಪಶು ವೈದ್ಯಕೀಯ ಇಲಾಖೆ ಸಹಭಾಗಿತ್ವದಲ್ಲಿ ಮತ್ತು ಟೆಕ್ಸಾಸ್ ಇನ್ಸ್ಟ್ರುಮೆಂಟ್ ಅವರ ಸಹಕಾರದೊಂದಿಗೆ ಕೆಂಚನಹಳ್ಳಿಯಲ್ಲಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಕಾರ್ಯಕ್ರಮ ನಡೆಯಿತು.



ಕೆಂಚನಹಳ್ಳಿಯಲ್ಲಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಾಮಾಜಿಕ, ಆರ್ಥಿಕ ಸಬಲೀಕರಣ ಕಾರ್ಯಕ್ರಮದ ಮುಖ್ಯಸ್ಥ ಡಾ.ಡೆನ್ನಿಸ್ ಡಿ.ಚೌಹಾಣ್ ಮಾತನಾಡಿ, ರೈತರಿಗೆ ಅನುಕೂಲವಾಗುವಂತೆ ಇನ್ನು ಹೆಚ್ಚಿನ ಕಾರ್ಯಕ್ರಮಗಳನ್ನು ಕೃಷಿ ವಿಜ್ಞಾನ ಕೇಂದ್ರದ ಸಹಭಾಗಿತ್ವದಲ್ಲಿ ನಡೆಸುವ ಯೋಜನೆಯನ್ನು ರೂಪಿಸಲಾಗಿದೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸುತ್ತೂರು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಜ್ಞಾನೇಶ್ ಮಾತನಾಡಿ, ಮುಂಗಾರಿನಲ್ಲಿ ಬೆಳೆ ನಿರ್ವಹಣೆಯನ್ನು ಹೇಗೆ ಮಾಡಬೇಕು. ತೋಟಗಾರಿಕಾ ಬೆಳೆಗಳ ನಿರ್ವಹಣೆ, ಪಶು ಸಂಗೋಪನೆ, ಸಸ್ಯಗಳನ್ನು ಕೀಟಬಾಧೆಗಳಿಂದ ರಕ್ಷಿಸುವುದು, ರೈತರು ಮಣ್ಣು ಮತ್ತು ನೀರು ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡುವುದು ಹಾಗೂ ಕೃಷಿ ಇಲಾಖೆಗಳಿಂದ ರೈತರಿಗೆ ಸಿಗುವಂತಹ ಎಲ್ಲಾ ಸೌಲಭ್ಯಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಪಶು ವೈದ್ಯಕೀಯ ಸಂಸ್ಥೆ ಸಿಬ್ಬಂದಿ, ವಿಜ್ಞಾನಿಗಳು ಹಾಗೂ 13 ಹಾಡಿಗಳಿಂದ 100ಕ್ಕೂ ಹೆಚ್ಚು ರೈತ ಭಾಂದವರು, ಮಹಿಳಾ ಸದಸ್ಯರು ಭಾಗವಹಿಸಿದ್ದರು.

ನಾಲೆ ಏರಿ ಅಗೆದು ಮಣ್ಣು ಸಾಗಾಣೆ: ಕ್ರಮಕ್ಕೆ ರೈತ ಸಂಘ ಆಗ್ರಹ

ನಂಜನಗೂಡು, ಜೂ.12– ತಾಲೂಕಿನ ಸಿಂಧೂವಳ್ಳಿ ಬಳಿ ಬುಧವಾರ ಖಾಸಗಿಯವರು ಜೆಸಿಬಿ, ಟಿಪ್ಪರ್ ಮೂಲಕ ಕಬಿನಿ ಬಲದಂಡೆ ಕಾಲುವೆ ಏರಿ ಮಣ್ಣನ್ನು ಅಕ್ರಮವಾಗಿ ಸಾಗಿಸುತ್ತಿದ್ದುದನ್ನು ರೈತ ಸಂಘದ ಕಾರ್ಯಕರ್ತರು ತಡೆದು ನೀರಾವರಿ ಇಲಾಖೆ ಅಧಿಕಾರಿಗಳಿಗೆ ಮಣ್ಣು ಸಾಗಣೆಯಲ್ಲಿ ತೊಡಗಿದ್ದ ವಾಹನಗಳನ್ನು ಒಪ್ಪಿಸಿದರೂ, ಅಧಿಕಾರಿಗಳು ದೂರು ದಾಖಲಿಸಿ ಕ್ರಮವಹಿಸಿಲ್ಲ ಎಂದು ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್‌ರಾವ್ ಆರೋಪಿಸಿದರು.



ಮಣ್ಣು ಸಾಗಣೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಲಾಯಿತು.

ನಗರದ ತಹಸೀಲ್ದಾರ್ ಕಚೇರಿ ಮುಂಭಾಗ ಗುರುವಾರ ರೈತ ಸಂಘದ ಕಾರ್ಯಕರ್ತರು ಕಾಲುವೆ ಏರಿ ಮಣ್ಣು ಕಳ್ಳ ಸಾಗಾಣಿಕೆ ಮಾಡುವವರ ವಿರುದ್ಧ ಕ್ರಮವಹಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಸತೀಶ್ ರಾವ್, ತಾಲೂಕಿನ ಸಿಂಧೂವಳ್ಳಿ ಬಳಿ ಖಾಸಗಿಯವರು ಜೆಸಿಬಿ, ಟಿಪ್ಪರ್ ಮೂಲಕ ಕಬಿನಿ ಬಲದಂಡೆ ಕಾಲುವೆ ಏರಿ ಮಣ್ಣನ್ನು ಅಕ್ರಮವಾಗಿ ಸಾಗಿಸುತ್ತಿದ್ದುದನ್ನು ರೈತ ಸಂಘದ ಕಾರ್ಯಕರ್ತರು ತಡೆದು ಸಾಗಾಣಿಕೆಗೆ ಬಳಸುತ್ತಿದ್ದ ವಾಹನಗಳನ್ನು ನೀರಾವರಿ ಇಲಾಖೆ ಇಂಜಿನಿಯರ್ ದರ್ಶನ್ ಅವರ ನೀಡಲಾಗಿತ್ತು. ಆದರೆ ನೀರಾವರಿ ಇಲಾಖೆ ಅಧಿಕಾರಿಗಳು ಅಕ್ರಮ ಮಣ್ಣು ಸಾಗಾಣಿಕೆ ಮಾಡುತ್ತಿದ್ದವರ ಮೇಲೆ ದೂರು ದಾಖಲಿಸದೇ, ಅವರೊಂದಿಗೆ ಶಾಮೀಲಾಗಿ ಅಕ್ರಮ ಸಾಗಾಣಿಕೆದಾರರಿಗೆ ಬೆಂಬಲ ನೀಡುತ್ತಿದ್ದಾರೆ. ತಾಲೂಕಿನ ಅಳಗಂಚಿಪುರ, ಅಳಗಂಚಿ, ಹರತಲೆ, ಶಿರಮಳ್ಳಿ, ಹೆಗ್ಗಡಹಳ್ಳಿ, ಮೊಬ್ಬಳ್ಳಿ ಮುಂತಾದ ಗ್ರಾಮಗಳಲ್ಲಿ ಕಾಲುವೆಗಳ ಏರಿ ಮಣ್ಣನ್ನು ಜೆಸಿಬಿಯಿಂದ ಬಗೆದು ಟಿಪ್ಪರ್ ಮೂಲಕ ಸಾಗಿಸುತ್ತಿದ್ದಾರೆ. ಇದರಿಂದಾಗಿ ನಾಲೆಗಳ ಏರಿ ಸಡಿಲಗೊಂಡು ಒಡೆಯುವ ಆತಂಕ ಎದುರಾಗಿದೆ. ಅಕ್ರಮ ಸಾಗಣೆದಾರರನ್ನು ರೈತರು ಹಿಡಿದುಕೊಟ್ಟರೂ ನೀರಾವರಿ ಇಲಾಖೆ ಅಧಿಕಾರಿಗಳು ಕಾನೂನು ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ. ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಭೂವಿಜ್ಞಾನ ಹಾಗೂ ನೀರಾವರಿ ಇಲಾಖೆಗಳ ಮುಂಭಾಗ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ನಂಜುಂಡೇಗೌಡ, ದೇವರಾಜು, ದೊಡ್ಡಯ್ಯ, ಈ.ಶಿವಣ್ಣ, ಶ್ವೇತ, ಶ್ರೀಕಂಠ, ಮಹದೇವೇಗೌಡ, ಮಹೇಶ್ ಇದ್ದರು.

ಕಂಪಲಾಪುರದಲ್ಲಿ ವಿಶ್ವ ಪರಿಸರ ದಿನಾಚರಣೆ



ವಿಶ್ವ ಪರಿಸರ ದಿನದ ಅಂಗವಾಗಿ ಕಂಪಲಾಪುರ ಸಹಕಾರ ಸಂಘದ ಆವರಣದಲ್ಲಿ ಸಿಡಿಓ ಹಿತೇಂದ್ರ ಸಸಿ ನೆಟ್ಟರು. ಅಧ್ಯಕ್ಷ ಮಹದೇವ್, ಉಪಾಧ್ಯಕ್ಷ ತಮ್ಮಯ್ಯ, ಸಿಇಓ ಹರ್ಷ, ನಿರ್ದೇಶಕರಾದ ಕೆ.ಎಂ.ಲಕ್ಷ್ಮಣ್, ಸಂತೋಷ್, ರವಿ, ಸಿಬ್ಬಂದಿ ನಾಗರಾಜ್, ಸಂತೋಷ್ ಇತರರಿದ್ದರು.

ಮೂಡಲಹುಂಡಿಯಲ್ಲಿ ಡೈರಿ ಉದ್ಘಾಟನೆ



ಬನ್ನೂರು ಸಮೀಪದ ಮೂಡಲಹುಂಡಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು. ಮೈಮುಲ್ ಅಧ್ಯಕ್ಷ ಆರ್. ಚಲುವರಾಜು, ನಿರ್ದೇಶಕರಾದ ಉಮಾಶಂಕರ, ಲೀಲಾ, ಗುರುಸ್ವಾಮಿ, ವ್ಯವಸ್ಥಾಪಕ ನಿರ್ದೇಶಕರಾದ ಸುರೇಶ್ ನಾಯಕ್, ಕರಿಬಸವರಾಜು, ರವಿಕುಮಾರ್ ಇತರರಿದ್ದರು.

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೆ ನೇಮಕ



ತಿ.ನರಸೀಪುರ, ಜೂ.12– ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಸದಸ್ಯರಾಗಿ ಗರ್ಗೇಶ್ವರಿ ಗ್ರಾಮದ ಕಾಂಗ್ರೆಸ್ ಹಿರಿಯ ಮುಖಂಡ ಮಸ್ರೂರು ಅಹಮದ್ ಅವರನ್ನು ನೇಮಕ ಮಾಡಿ ಸರ್ಕಾರದ ಉಪ ಕಾರ್ಯದರ್ಶಿ ಜ್ಯೋತಿ ಪ್ರಕಾಶ್ ಆದೇಶ ಹೊರಡಿಸಿದ್ದಾರೆ.

ಇದಕ್ಕೆ ಸಹಕರಿಸಿದ ಸಿಎಂ ಸಿದ್ದರಾಮಯ್ಯ, ಸಚಿವ ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಮಸ್ರೂರು ಅಹಮದ್ ಅಭಿನಂದನೆ ಸಲ್ಲಿಸಿದ್ದಾರೆ.


ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಪಕ್ಷ ಸಂಘಟನೆ

ನೂತನ ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ

ನಂಜನಗೂಡು, ಜೂ.12– ಮೈಸೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಿ ರಾಜ್ಯ ಮತ್ತು ರಾಷ್ಟ್ರ ಚುನಾವಣೆಗಳಿಗೆ ಅನುಕೂಲವಾಗುವಂತೆ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲಾಗುವುದು ಎಂದು ನೂತನ ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ತಿಳಿಸಿದರು.

ಮೈಸೂರು ಗ್ರಾಮಾಂತರ ಜಿಲ್ಲೆಯ ಬಿಜೆಪಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ನಗರದ ಕೆ.ಎಚ್.ಬಿ ಬಡಾವಣೆಯ ತಮ್ಮ ನಿವಾಸದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ನಾನು ಮೂಲತಃ ಬಿಜೆಪಿಗ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ದಿ.ಆರ್. ಧ್ರುವನಾರಾಯಣ ಅವರ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದೆ. ನಂತರ 2018ರ ನಂಜನಗೂಡು ಉಪಚುನಾವಣೆ ವೇಳೆ ವಿ.ಶ್ರೀನಿವಾಸ ಪ್ರಸಾದ್ ಅವರ ಮೂಲಕ ಮತ್ತೆ ಬಿಜೆಪಿಗೆ ವಾಪಸ್ಸಾಗಿ ವಿಧಾನಸಭಾ ಸೇರಿದಂತೆ ಹಲವು ಚುನಾವಣೆಗಳಲ್ಲಿ ಪಕ್ಷದ ಪರ ಕೆಲಸ ಮಾಡಿದ್ದೇನೆ. ವಿ.ಶ್ರೀನಿವಾಸ್ ಪ್ರಸಾದ್ ಅವರಿಗೆ ನನ್ನನ್ನು ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷರನ್ನಾಗಿ ಮಾಡಬೇಕು ಎಂಬ ಮಹದಾಸೆ ಇತ್ತು. ಅದಕ್ಕಾಗಿ ಅವರು ನನ್ನ ಹೆಸರನ್ನು ಶಿಫಾರಸ್ಸು ಮಾಡಿದ್ದರು. ಆದರೆ ಆಗ ಮಹೇಂದ್ರ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಈಗ ಪ್ರಸಾದ್ ಅವರ ಆಸೆ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ತಂಡದ ಮೂಲಕ ಈಡೇರಿದೆ ಎಂದರು.



ಮೈಸೂರು ಗ್ರಾಮಾಂತರ ಬಿಜೆಪಿ ನೂತನ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಅವರನ್ನು ಮುಖಂಡರು ಸನ್ಮಾನಿಸಿದರು.

ಮೈಸೂರು ಗ್ರಾಮಾಂತರ ಜಿಲ್ಲೆ ಅಧ್ಯಕ್ಷ ಸ್ಥಾನವನ್ನು ಎಸ್ಸಿ ಸಮುದಾಯಕ್ಕೆ ನೀಡಬೇಕು ಎಂದು ತೀರ್ಮಾನಿಸಿ, ಪಕ್ಷದ ವಿವಿಧ ಹಂತದ ಮುಖಂಡರು, ಕಾರ್ಯಕರ್ತರು, ಹಿತೈಷಿಗಳ ಸಲಹೆ ಪಡೆದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ಬಹು ಮುಖ್ಯವಾದ ಪಕ್ಷ ಸಂಘಟನೆ ಜವಾಬ್ದಾರಿ ಕೊಟ್ಟಿದ್ದಾರೆ. ರಾಜ್ಯ ಮತ್ತು ರಾಷ್ಟ್ರದ ಪಕ್ಷದ ವರಿಷ್ಠರ ಸೂಚನೆಗಳನ್ನು ಪಾಲಿಸಿ ಜಿಲ್ಲೆಯ ಎಲ್ಲಾ ಕ್ಷೇತ್ರದಲ್ಲೂ ಹಾಲಿ ಶಾಸಕರು, ಮಾಜಿ ಶಾಸಕರು, ವಿವಿಧ ಮೋರ್ಚಾಗಳ ಮುಖಂಡರು ಹಾಗೂ ಪಕ್ಷದ ಹಿರಿಯ ಮುಖಂಡರನ್ನು ಜೊತೆಗೂಡಿಸಿಕೊಂಡು ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲಾಗುವುದು ಎಂದರು.

ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಮಾತನಾಡಿ, ಮೈಸೂರು ಗ್ರಾಮಾಂತರ ಜಿಲ್ಲೆಯಲ್ಲಿ ಎಲ್ಲಾ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಅಭ್ಯರ್ಥಿಗೆ ಮಣೆ ಹಾಕಬೇಕು ಎಂಬುದು ವರಿಷ್ಠರ ಸೂಚನೆಯಾಗಿತ್ತು. ಅದರಂತೆ ಎಲ್ಲಾ ಸಮುದಾಯದೊಂದಿಗೂ ನಿಕಟ ಸಂಪರ್ಕವುಳ್ಳ ಎಲ್ಲಾ ಸಮುದಾಯವನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಸಾಮರ್ಥ್ಯವಿರುವ ಕುಂಬ್ರಹಳ್ಳಿ ಸುಬ್ಬಣ್ಣ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಅವರಿಗೆ ಹಲವಾರು ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ಅನುಭವಿದೆ. ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷವನ್ನು ಸಮರ್ಥವಾಗಿ ಸಂಘಟನೆಗೊಳಿಸಲಿದ್ದಾರೆ ಎಂದರು.

ನಂಜನಗೂಡಲ್ಲಿ ಬಿಜೆಪಿ ಗೆಲುವು ಶತಸಿದ್ಧ

‘ ನಂಜನಗೂಡು ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲ. ಎಲ್ಲರೂ ಜೊತೆಗೂಡಿ ಪಕ್ಷದ ಸಂಘಟನೆಗೆ ಕೆಲಸ ಮಾಡುತ್ತೇವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಿ.ಆರ್.ಧ್ರುವನಾರಾಯಣ್ ಅವರ ನಿಧನದ ಸಿಂಪಥಿಯಿಂದಾಗಿ ನಂಜನಗೂಡು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಗೆಲ್ಲುವುದು ಶತಸಿದ್ಧ.

–ಸುಬ್ಬಣ್ಣ, ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ.

ಈ ವೇಳೆ ಬಿಜೆಪಿ ಮೈಸೂರು ಜಿಲ್ಲಾ ಮಾಜಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಪಂ ಮಾಜಿ ಸದಸ್ಯ ಶಿವರಾಮು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಮುಖಂಡರಾದ ವಿನಯ್ ಕುಮಾರ್, ಎನ್.ಸಿ.ಬಸವಣ್ಣ ಹೆಮ್ಮರಗಾಲ ಸೋಮಣ್ಣ, ರವೀಂದ್ರ, ಮಹೇಶ್, ಮೋಹನ್, ಮಲ್ಲಿಕಾರ್ಜುನ್, ಅರುಣ್‌ಗೌಡ, ಮಧುರಾಜ್, ಜಗದೀಶ್, ನಾಗೇಂದ್ರ, ತಾಪಂ ಮಾಜಿ ಸದಸ್ಯರಾದ ಶಿವಣ್ಣ, ಸಿ.ಎಂ.ಮಹದೇವಯ್ಯ, ಮೂರ್ತಿ ಸೇರಿದಂತೆ ಇತರರಿದ್ದರು.

ಮೈಸೂರಿನ ಮಹಾರಾಣಿ ಕಲಾ, ವಾಣಿಜ್ಯ ಕಾಲೇಜುಗಳಿಗೆ ಎಡಿಬಿ ತಂಡದ ಸದಸ್ಯರ ಭೇಟಿ

ಮೂಲಸೌಲಭ್ಯ ಅಭಿವೃದ್ಧಿ ಕುರಿತು ಪರಿಶೀಲನೆ



ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ತಂಡದ ಸದಸ್ಯರು ಗುರುವಾರ ಮೈಸೂರಿನ ಮಹಾರಾಣಿ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೈಸೂರು, ಜೂ.12(ಆರ್‌ಕೆ)– ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ತಂಡದ ಸದಸ್ಯರು ಇಂದು ಮೈಸೂರು ಮಹಾರಾಣಿ ಮಹಿಳಾ ಕಲಾ ಮತ್ತು ವಿಜ್ಞಾನ ಕಾಲೇಜು ಹಾಗೂ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಜ್ಯ ಸರ್ಕಾರದ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ನಡುವೆ 2023 ರಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನಾ ಯೋಜನೆ (Karnataka Higher Education Transformation Project) ಯನ್ನು ಜಾರಿಗೊಳಿಸಲಾಗುತ್ತಿದೆ. ಅದರ ಭಾಗವಾಗಿ ಎಡಿಬಿಯ 9 ಸದಸ್ಯರ ತಂಡವು ಇಂದು ಮಹಾರಾಣಿ ಮಹಿಳಾ ಕಲಾ ಮತ್ತು ವಿಜ್ಞಾನ ಕಾಲೇಜುಗಳು ಹಾಗೂ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಭೇಟಿ ನೀಡಿ ಇಲ್ಲಿನ ಕಟ್ಟಡಗಳು ಸೇರಿದಂತೆ ಮೂಲ ಸೌಕರ್ಯಗಳ ಸ್ಥಿತಿಗತಿ ಅವಲೋಕನ ಮಾಡಿತು.

ತಂಡದಲ್ಲಿದ್ದ ಪ್ರೊ.ಕೆ.ಎನ್.ಚಾಂಗ್, ಮೊಹಮದ್ ಫೈಜೆ ಶೌಲ್ ಹಮೀದ್, ನ ಹ್ಯೋಮ್ ಕಿಮ್, ಪೂನಂ ಶರ್ಮಾ ಬಾಂಬ್ರಿ, ಶೌನ್ ಎಂ. ವೆಲ್‌ಖೌರ್ನ್ ವುಡ್, ಯಶ್‌ಪಾಲ್ ಮಲ್ಲಿಕ್, ಸ್ಯಾಮ್ಯುವೆಲ್ ಕೆಲ್ಯಂಗ್, ಡೇವಿಡ್ ಮತ್ತು ಲೇಹ್ ಮ್ಯಾಕ್ ಮ್ಯಾನಸ ಅವರು ಪರಿಶೀಲನೆ ನಡೆಸಿ, ಹಲವು ಮಾಹಿತಿಯನ್ನು ದಾಖಲು ಮಾಡಿಕೊಂಡರು.

ಬೆಳಗ್ಗೆ 10 ಗಂಟೆಗೆ ಮಹಾರಾಣಿ ಕಲಾ ಕಾಲೇಜಿಗೆ ಆಗಮಿಸಿದ ಎಡಿಬಿ ಸದಸ್ಯರನ್ನು ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ಪ್ರೊ.ಬಿ. ಚಂದ್ರಶೇಖರ, ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ಕಾಲೇಜಿನ ಜಯಲಕ್ಷ್ಮಮ್ಮಣಿ ಸಭಾಂಗಣದಲ್ಲಿ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಎರಡೂ ಕಾಲೇಜುಗಳ ಕಟ್ಟಡಗಳ ಪ್ರಸ್ತುತ ಪರಿಸ್ಥಿತಿ, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ, ಪ್ರತಿ ವರ್ಷದ ಪದವಿ ಪರೀಕ್ಷೆಗಳ ಫಲಿತಾಂಶ, ಕಟ್ಟಡಗಳ ಸ್ಥಿತಿಗತಿ, ಪ್ರಯೋಗಾಲಯ, ಗ್ರಂಥಾಲಯ, ದೈಹಿಕ ಶಿಕ್ಷಣ ವಿಭಾಗ, ಸಭಾಂಗಣ, ಕೊಠಡಿಗಳು, ಒದಗಿಸಿರುವ ಮೂಲಭೂತ ಸೌಲಭ್ಯಗಳ ಬಗ್ಗೆ ಎಡಿಬಿ ತಂಡದ ಸದಸ್ಯರಿಗೆ ವಿವರಿಸಲಾಯಿತು.

ಇದೇ ವೇಳೆ ಕಾಲೇಜು ಕಟ್ಟಡಗಳ ನವೀಕರಣ, ಅಗತ್ಯವಿರುವ ಸೌಲಭ್ಯಗಳು ಸೇರಿದಂತೆ ಉನ್ನತೀಕರಣಕ್ಕೆ ಬೇಕಾಗಿರುವ ಅನುದಾನ, ಪಾರಂಪರಿಕ ಕಟ್ಟಡಗಳು ಸಂರಕ್ಷಣೆ ಮುಂತಾದ ವಿಷಯಗಳ ಬಗ್ಗೆಯೂ ಎರಡೂ ಕಾಲೇಜುಗಳ ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ರಾಜಶೇಖರ ಮೂರ್ತಿ, ಡಾ.ಎಂ. ಅಬ್ದುಲ್ ರೆಹಮಾನ್ ವಿವರಿಸಿದರು.

ತದನಂತರ ಎರಡೂ ಕಾಲೇಜುಗಳ ವಿವಿಧ ವಿಭಾಗಗಳು, ಪ್ರಯೋಗಾಲಯಗಳು, ತರಗತಿ ಕೊಠಡಿಗಳಿಗೆ ತೆರಳಿ ಪರಿಶೀಲಿಸಿದ ಎಡಿಬಿ ತಂಡದ ಸದಸ್ಯರು, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು, ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು, ವಿದ್ಯಾರ್ಥಿಗಳು, ಪೋಷಕರು, ಹಳೆಯ ವಿದ್ಯಾರ್ಥಿಗಳು, ಅಧ್ಯಾಪಕರೊಂದಿಗೆ ಸಂವಾದ ನಡೆಸಿದರು.

ಇದೇ ವೇಳೆ ವೇದಿಕೆ ಕಾರ್ಯಕ್ರಮದಲ್ಲಿ ಎಡಿಬಿ ತಂಡದ ಸದಸ್ಯರನ್ನು ಅಭಿನಂದಿಸಲಾಯಿತು. ಗಣ್ಯರ ಭೇಟಿ ಬಗ್ಗೆ ವಿವರಿಸಿದ ಕಾಲೇಜು ಶಿಕ್ಷಣ ಇಲಾಖೆ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ.ಬಿ.ಚಂದ್ರಶೇಖರ್, ಎಡಿಬಿ ಜೊತೆಗಿನ ಒಡಂಬಡಿಕೆಯು ಕರ್ನಾಟಕದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಮತ್ತು ಬೆಳವಣಿಗೆಗೆ ಕಾರಣವಾಗಲಿದೆ ಎಂದು ಅಭಿಪ್ರಾಯಿಸಿದರು. ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಡಾ.ಜಿ.ಶೋಭಾ, ವಿಶೇಷಾಧಿಕಾರಿ ಪ್ರೊ.ರಮೇಶ್ ರೆಡ್ಡಿ, ಕಾಲೇಜುಗಳ ಉಪನ್ಯಾಸಕರು ಉಪಸ್ಥಿತರಿದ್ದರು.

> 
>
> ಎಡಿಬಿ ತಂಡದ ಸದಸ್ಯರು, ವಿದ್ಯಾರ್ಥಿಗಳು, ಪೋಷಕರು, ಅಧ್ಯಾಪಕರೊಂದಿಗೆ ಸಂವಾದ ನಡೆಸಿದರು. ಈ ವೇಳೆ ಮಹಾ ರಾಣಿ ವಿಜ್ಞಾನ ಕಾಲೇಜು ಕಟ್ಟಡ ನೂರು ವರ್ಷ ಹಾಗೂ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡ 75 ವರ್ಷ ಹಳೆಯದಾಗಿರುವ ಕಾರಣ ಹೊಸ ಕಟ್ಟಡಗಳು ಸೇರಿದಂತೆ ಅಗತ್ಯ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಲಾಯಿತು.
>
> -ಕೆ.ಬಿ.ಲಿಂಗರಾಜು, ಎಂಸಿಸಿಐ ಅಧ್ಯಕ್ಷ

> 
>
> ಮೈಸೂರಿಗೆ ಈ ಹಿಂದೆ ತಂದಂತಹ ನಾನಾ ಅನುದಾನಗಳು ಸಮರ್ಪಕ ರೀತಿ ಬಳಕೆ ಆಗಿಲ್ಲ. ಈಗ ಎಡಿಬಿಯಡಿ ಬಿಡುಗಡೆಯಾಗಲಿರುವ ನಿಧಿ ಸದ್ಬಳಕೆ ಆಗಬೇಕು. ಅದಕ್ಕೆ ಸಮರ್ಪಕ ನಿರ್ವಹಣಾ ಏಜೆನ್ಸಿಯನ್ನು ರಚಿಸಬೇಕು. ಸದಾ ನಿಗಾ ವಹಿಸಿದರಷ್ಟೇ ಅನುದಾನ ಸದ್ವಿನಿಯೋಗವಾಗಲಿದೆ.
>
> -ರಾಜು, ಪಾಲಿಕೆ ನಿವೃತ್ತ ಅಧಿಕಾರಿ

ಸಿಪಿಸಿಗೆ ಭೇಟಿ: ಮಧ್ಯಾಹ್ನದ ನಂತರ ಎಡಿಬಿ ತಂಡವು ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಸಂಸ್ಥೆಗೆ ಭೇಟಿ ನೀಡಿ, ಪರಿಶೀಲಿಸಿತು. ಗಣ್ಯರನ್ನು ಸ್ವಾಗತಿಸಿದ ಶಾಸಕ ತನ್ವೀರ್ ಸೇಠ್, ಸಿಎಸ್‌ಆರ್ ನಿಧಿಯಿಂದ ಕಟ್ಟಡ ನಿರ್ಮಿಸಿಕೊಳ್ಳಲಾಗುತ್ತಿದೆ, ಹಳೆಯ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ಉಪನ್ಯಾಸ ನೀಡುವುದರ ಜೊತೆಗೆ ಹಲವರಿಗೆ ಉದ್ಯೋಗಾವಕಾಶ ಕಲ್ಪಿಸಿದ್ದಾರೆ. ಕಟ್ಟಡವು 75 ವರ್ಷ ಹಳೆಯದಾಗಿದ್ದು, ಹೊಸ ಕಟ್ಟಡ, ಸಭಾಂಗಣದ ಅಗತ್ಯವಿದೆ ಎಂದು ತಿಳಿಸಿದರು.

ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಉದ್ಯಮಿಗಳಾದ ಸಿ.ಎಂ.ಸುಬ್ರಮಣಿಯನ್, ಸುರೇಶ್‌ಕುಮಾರ್ ಜೈನ್, ನಿವೃತ್ತ ಕಂದಾಯಾಧಿಕಾರಿ ರಾಜು ಮತ್ತಿತರರು ಎಡಿಬಿ ತಂಡದೊಂದಿಗಿದ್ದು, ಅಗತ್ಯ ಮಾಹಿತಿ ಸಂಗ್ರಹಕ್ಕೆ ಸಹಕಾರ ನೀಡಿದರು.

ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ದೀರ್ಘಕಾಲೀನ ಸವಾಲುಗಳನ್ನು ಪರಿಹರಿಸುವ ಉದ್ದೇಶದೊಂದಿಗೆ ರಾಜ್ಯ ಸರ್ಕಾರವು, ಏಷಿಯನ್ ಡೆವಲಪ್ಮೆಂಟ್ ಬ್ಯಾಂಕ್ (ಎಡಿಬಿ) ಜೊತೆ ಒಡಂಬಡಿಕೆ ಮಾಡಿ ಕೊಂಡಿದ್ದು, ಈಗಾಗಲೇ 2,600 ಕೋಟಿ ರೂ ಸಾಲ ಬಿಡುಗಡೆಯಾಗಲಿದೆ. ಇದಕ್ಕೆ ಪೂರಕವಾಗಿ ಇತ್ತೀಚೆಗೆ ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯನ್ನೂ ಜಾರಿಗೊಳಿಸಲಾಗಿದೆ. ಎಡಿಬಿ ಸಹಕಾರದಲ್ಲಿ ಸರ್ಕಾರಿ ಕಾಲೇಜುಗಳ ಸರ್ವತೋಮುಖ ಅಭಿವೃದ್ಧಿ ಜೊತೆಗೆ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಹಿತ ಗುಣಮಟ್ಟದ ಶಿಕ್ಷಣ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಎಡಿಬಿ ಪ್ರತಿನಿಧಿಗಳ ತಂಡ, ಮೈಸೂರು ಸೇರಿದಂತೆ ಎಲ್ಲಾ ಜಿಲ್ಲೆಗಳ ಆಯ್ದ ಸರ್ಕಾರಿ ಕಾಲೇಜುಗಳಿಗೆ ಭೇಟಿ ನೀಡಿ, ವಾಸ್ತವ ಪರಿಸ್ಥಿತಿಯನ್ನು ಅವಲೋಕಿಸುತ್ತಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪುದುಪೆಟ್ಟೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಹೊಲೊಕಾಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಎಡಗೈಯೇ ಅಪಘಾತಕ್ಕೆ ಕಾರಣ (ಹಿಂ)	4 ಪ್ರದರ್ಶನಗಳು
ಲಿಡೋ	
ಅಪ್ಪು (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಕಾಲ್ತುಳಿತ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳ ಅಮಾನತು ಆತುರದ ನಿರ್ಧಾರ

ಶಾಸಕ ತನ್ವೀರ್ ಸೇಠ್ ಬೇಸರ



ಮೈಸೂರು, ಜೂ.12 (ಬಿಎಲ್‌ಯು)– ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿ ಸರ್ಕಾರ ಆತುರದ ನಿರ್ಧಾರ ಕೈಗೊಂಡಿದೆ ಎಂದು ಶಾಸಕ ತನ್ವೀರ್ ಸೇಠ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಚಾಮುಂಡಿ ವಿಹಾರ ಸ್ಟೇಡಿಯಂನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ನಡೆಯಬಾರದ ಘಟನೆಯೊಂದು ನಡೆದಿದೆ. ಮೃತರ ಕುಟುಂಬಕ್ಕೆ ಸಾಂತ್ವನ ಹೇಳಬೇಕು. ಇದು ಬಿಟ್ಟು ಸಾವಿನ ಮನೆಯಲ್ಲಿ ರಾಜಕೀಯ ಮಾಡುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಹೇಳಿದರು.

ಆರ್‌ಸಿಬಿಯಲ್ಲಿ ಕನ್ನಡಿಗರು ಇದ್ದಾರೊ ಇಲ್ಲವೊ ಗೊತ್ತಿಲ್ಲ. ಆದರೆ ಮುಂದಿನ ದಿನಗಳಲ್ಲಿ ಕರ್ನಾಟಕದ ಆಟಗಾರರಿಗೆ ಇಲ್ಲಿ ಪ್ರೇರಣೆ ಸಿಗಬಹುದು ಎಂದು ತನ್ವೀರ್ ಸೇಠ್ ಹೇಳಿದರು.

ವಿಜಯೋತ್ಸವ ಆಚರಣೆ ಮಾಡಿರುವುದು ತಪ್ಪೊ, ಸರಿಯೊ ಎನ್ನುವುದನ್ನು ಆಮೇಲೆ ವಿಶ್ಲೇಷಣೆ ಮಾಡೋಣ. ಈ ಘಟನೆ ಬಗ್ಗೆ ಈಗಾಗಲೇ ಸಿಐಡಿ ಮತ್ತು ನ್ಯಾಯಾಂಗ ತನಿಖೆ ನಡೆಯುತ್ತಿದೆ. ವಿಚಾರಣೆಯಿಂದ ಸತ್ಯಾಸತ್ಯತೆಗಳು ಹೊರ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರು ದಸರಾ ಆಚರಣೆ ವೇಳೆ ಇದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಜನರು ಆಗಮಿಸುತ್ತಾರೆ. ಆದರೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡುವ ಕಾರಣ ಅವಘಡ ಸಂಭವಿಸಿಲ್ಲ. ಅದೇ ರೀತಿ ಬೆಂಗಳೂರಿನಲ್ಲಿ ನಡೆದ ವಿಜಯೋತ್ಸವದಲ್ಲಿ ಪೊಲೀಸರು ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದನ್ನು ಒಪ್ಪಿಕೊಳ್ಳಬೇಕು ಎಂದು ತನ್ವೀರ್ ಸೇಠ್ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಪೊಲೀಸರು ಮುಂಜಾಗ್ರತಾ ಕ್ರಮ ಕೈಗೊಂಡಿದ್ದರೆ ಪ್ರಾಯಶಃ ಇಂತಹ ಘಟನೆ ನಡೆಯುತ್ತಿರಲಿಲ್ಲ. ಈಗ ಸಾರ್ವಜನಿಕರ ಪ್ರಶ್ನೆಗೆ ನಾನು ಉತ್ತರ ಹೇಳಬೇಕಿದೆ. ಈ ನಿಟ್ಟಿನಲ್ಲಿ ತಾಳ್ಮೆ ಕಳೆದುಕೊಳ್ಳದೆ ಸರ್ಕಾರದ ಪ್ರತಿನಿಧಿಯಾದ ನಾವು ಜನರ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರ ನೀಡಬೇಕು ಎಂದರು.

ಈ ಘಟನೆಯಿಂದ ಸಿದ್ದರಾಮಯ್ಯ ಕುರ್ಚಿಗೆ ಕಂಟಕವಿದೆಯೇ ಎಂಬ ಪ್ರಶ್ನೆಗೆ ತನ್ವೀರ್ ಸೇಠ್ ಪ್ರತಿಕ್ರಿಯಿಸಲು ನಿರಾಕರಿಸಿದರು.

ವಿವಿಧ ಬೇಡಿಕೆ ಮುಂದಿಟ್ಟು ಕಬ್ಬು ಬೆಳೆಗಾರರ ಪ್ರತಿಭಟನೆ



ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದ ಕಬ್ಬು ಬೆಳೆಗಾರರು ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮೈಸೂರು, ಜೂ.12(ಬಿಎಲ್‌ಯು)– ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ತೂಕದ ಮೋಸ ತಡೆಗಟ್ಟುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದವರು ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಿದರು.

ಕಬ್ಬು ಅರೆಯುವುದಕ್ಕೂ ಮೊದಲು ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ರೈತರ ಸಭೆ ಕರೆದು ಸಮಸ್ಯೆ ಆಲಿಸಬೇಕು, ಪ್ರತಿ ಟನ್ ಕಬ್ಬಿಗೆ 4,500 ರೂಪಾಯಿ ನಿಗದಿ ಮಾಡಬೇಕು, ಕಬ್ಬು ಕಟಾವು ಮತ್ತು ಸಾಗಾಣಿಕೆ ಮಾಡುವ ಸಂಬಂಧ ಎಸ್‌ಎಪಿ ಕಮಿಟಿ ವರದಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.


ಇಂತಹ ಹಲವು ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರ ನಡುವೆ ದ್ವಿಪಕ್ಷಿಯ ಒಪ್ಪಂದ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ನಮ್ಮ ಬೇಡಿಕೆಯನ್ನು ಇನ್ನು ಎರಡು ವಾರದಲ್ಲಿ ಜಾರಿ ಮಾಡದಿದ್ದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರಿಗೆ ಕಬ್ಬು ಬೆಳೆಗಾರರು ಮನವಿ ಪತ್ರ ಸಲ್ಲಿಸಿದರು.

ಸಂಘದ ಅಧ್ಯಕ್ಷ ಹಳ್ಳಿಕೆರೆ ಭಾಗ್ಯರಾಜ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂಘದ ಖಜಾಂಚಿ ಕೆರೆಹುಂಡಿ ರಾಜಣ್ಣ, ಮೈಸೂರು ಜಿಲ್ಲಾಧ್ಯಕ್ಷ ವಳಗೆರೆ ಗಣೇಶ್, ಗೌರವಾಧ್ಯಕ್ಷ ಶಿವರುದ್ರಪ್ಪ, ಮುಖಂಡರಾದ ಮಧು, ಜಗದೀಶ್, ನಾಗೇಂದ್ರ, ಪ್ರಸನ್ನ ಕುಮಾರ್, ಬದನವಾಳು ಗಿರೀಶ್, ಒಳಗೆರೆ ಮಹೇಶ್ ಪ್ರತಿಭಟನೆಯಲ್ಲಿ ಹಾಜರಿದ್ದರು.

ಜ್ಞಾನ, ಸಂಪತ್ತು ಮಾತ್ರವೇ ಗುರು–ಶಿಷ್ಯರ ಬಾಂಧವ್ಯ ಗಟ್ಟಿಗೊಳಿಸಬಲ್ಲದು

ಅಂಕಣಕಾರ ಪ್ರೊ.ನಟರಾಜ ಹುಳಿಯಾರ್ ಅಭಿಮತ



52ನೇ ಕನ್ನಡ ಪುನಶ್ಚೇತನ ಶಿಬಿರದಲ್ಲಿ ಅಂಕಣಕಾರ ಪ್ರೊ.ನಟರಾಜ ಹುಳಿಯಾರ್, 'ಆಧುನಿಕೋತ್ತರ ಅಧ್ಯಯನ' ಕುರಿತು ವಿಷಯ ಮಂಡಿಸಿದರು.

ಮೈಸೂರು, ಜೂ. 12(ಎಂಕೆ)– ಜ್ಞಾನದ ಸಂಪತ್ತು ವಿಸ್ತಾರವಾದರಷ್ಟೇ ಗುರು–ಶಿಷ್ಯರ ಬಾಂಧವ್ಯ ಗಟ್ಟಿಯಾಗುತ್ತದೆ ಎಂದು ಅಂಕಣಕಾರ ಪ್ರೊ.ನಟರಾಜ ಹುಳಿಯಾರ್ ತಿಳಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಆಯೋಜಿಸಿರುವ 52ನೇ ಕನ್ನಡ ಪುನಶ್ಚೇತನ ಶಿಬಿರದಲ್ಲಿ 'ಆಧುನಿಕೋತ್ತರ ಅಧ್ಯಯನ' ಕುರಿತು ಮಾತನಾಡಿದ ಅವರು, ಜ್ಞಾನದ ಫಲವನ್ನು ಕೇವಲ ಒಬ್ಬರೆ ಅನುಭವಿಸಬಾರದು. ಜ್ಞಾನ ಎಲ್ಲೆಡೆ, ಎಲ್ಲರಿಗೂ ತಲುಪಬೇಕು ಎಂದರು.

ಆಧುನಿಕೋತ್ತರ ಅಧ್ಯಯನ ಚಿಂತನೆ ಎಲ್ಲವನ್ನು ಒಳಗೊಳ್ಳುವಂತಿರಬೇಕು. ಮುಖ್ಯವಾಗಿ ಪಠ್ಯಗಳು ಜಾಲತಾಣದಲ್ಲಿ ದೊರೆಯುವಂತಿರಬೇಕು. ವಿಚಾರಗಳನ್ನು ಪ್ರಶ್ನಿಸಿ, ಅರ್ಥೈಸಿಕೊಳ್ಳಬೇಕು. ಆಧುನಿಕ ಯುಗದ ಸಾಹಿತ್ಯ ರಚನೆ ಕೂಡ ಬದಲಾವಣೆಯನ್ನು ಬಯಸುತ್ತಿದೆ ಎಂದು ತಿಳಿಸಿದರು.

ಸಿನಿಮಾದ ಅಭಿರುಚಿಯಲ್ಲಿ ಬದಲಾವಣೆ: 'ಚಲನಚಿತ್ರ ಸಂಭಾಷಣೆಯ ಬೆಳವಣಿಗೆ' ಕುರಿತು ಮಾತನಾಡಿದ ಚಲನಚಿತ್ರ ಸಂಭಾಷಣಕಾರ ಮಾಸ್ತಿ, ಕಾಲ ಬದಲಾದಂತೆ ಸಿನಿಮಾದ ಅಭಿರುಚಿ ಬದಲಾಗಿದೆ. ಕಥೆಗೆ ಪೂರಕವಾದ ಸಂಭಾಷಣೆ ಮತ್ತು ಹಾಡುಗಳು ಇದ್ದಾಗ ಮಾತ್ರ ಒಂದು ಸಿನಿಮಾ ಗೆಲ್ಲಲು ಸಾಧ್ಯ. ಕೆಲವು ಬಾರಿ ಸಿನಿಮಾ ಕಥೆಗೆ ತಕ್ಕ ಹಾಗೆ ಸಂಭಾಷಣೆ ಇರುತ್ತದೆ. ಆದರೆ, ಅದು ಎಷ್ಟೋ ಬಾರಿ ಅಭಿಮಾನಿಗಳ ನಡುವೆ ಸಂಘರ್ಷಕ್ಕೆ ಕಾರಣವಾಗುವುದುಂಟು. ಸಿನಿಮಾವನ್ನು ಸಿನಿಮಾ ರೀತಿ ನೋಡುವುದು ಉತ್ತಮ ಎಂದು ಸಲಹೆ ನೀಡಿದರು.

ಶಿಬಿರದ ಸಂಯೋಜಕರೂ ಆದ ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಡಾ.ನಂಜಯ್ಯ ಎಂ.ಹೊಂಗನೂರು, ಮಾಳವಿಯ ಮಿಷನ್ ಶಿಕ್ಷಕ ತರಬೇತಿ ಕೇಂದ್ರ ನಿರ್ದೇಶಕಿ ಪ್ರೊ.ಹೆಚ್.ಜ್ಯೋತಿ, ಸಹಾಯಕ ಪ್ರಾಧ್ಯಾಪಕ ಡಾ.ಎಲ್.ನಂಜುಂಡಸ್ವಾಮಿ, ಶಿಬಿರಾರ್ಥಿಗಳು ಹಾಜರಿದ್ದರು.

ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ



ಮೈಸೂರು, ಜೂ.12(ಎಂಕೆ)– ಗುಜರಾತ್‌ನ ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ ಪ್ರಯಾಣಿಕರಿಗೆ ಮೈಸೂರಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಡಿ.ದೇವರಾಜ ಅರಸು ರಸ್ತೆಯಲ್ಲಿ ಗುರುವಾರ ಸಂಜೆ ಜಮಾವಣೆಗೊಂಡ ಕರ್ನಾಟಕ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು, ಮುಖಂಡರು ಕ್ಯಾಂಡಲ್ ಲೈಟ್ ಬೆಳಗಿ, ಮೌನಾಚರಣೆ ಮೂಲಕ ದುರಂತದಲ್ಲಿ ಸಾವುಗೀಡಾದ ಪ್ರಯಾಣಿಕರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ವಿಮಾನ ದುರಂತವು ತೀವ್ರ ಆಘಾತ ಉಂಟು ಮಾಡಿದೆ. ದುರ್ಘಟನೆಯಲ್ಲಿ ಪ್ರಾಣ ಕಳೆದುಕೊಂಡವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ, ಮೃತರ ಕುಟುಂಬಸ್ಥರಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿದರು.

ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ನಜರ್‌ಬಾದ್ ನಟರಾಜ್, ಜಿ.ರಾಘವೇಂದ್ರ, ಮಂಜುನಾಥ್, ಎಸ್.ಎನ್.ರಾಜೇಶ್, ರವಿಚಂದ್ರ, ನೀತು, ನಂಜುಂಡಿ, ಸಂತೋಷ್, ರಾಕೇಶ್, ಕಣ್ಣನ್, ರವಿ, ಉಮೇಶ್, ಸತೀಶ್, ಗುರುರಾಜ್ ಶೆಟ್ಟಿ, ಪ್ರಮೋದ್ ಗೌಡ ಮತ್ತಿತರರಿದ್ದರು.

ಜಯಕವಿ-60 ಗಾನಾಭಿನಂದನ

ಜಯಪ್ಪ ಹೊನ್ನಾಳಿ ಸಾಹಿತ್ಯ ಸೇವೆ ಪ್ರಶಂಸೆ



ಜಯಕವಿ–60 ಗಾನಾಭಿನಂದನ ಕಾರ್ಯಕ್ರಮದಲ್ಲಿ ಕವಿ ಜಯಪ್ಪ ಹೊನ್ನಾಳಿ ದಂಪತಿಯನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ. 12(ಎಂಕೆ)– ಕವನಗಳ ಮೂಲಕ ಜನಮಾನಸದಲ್ಲಿ ಜಯಕವಿ ಎಂದೇ ಚಿರಪರಿಚಿತರಾಗಿರುವ ಕವಿ ಜಯಪ್ಪ ಹೊನ್ನಾಳಿ ಅವರ ಕಾವ್ಯ ರಚನೆ ನಿರಂತರವಾಗಿ ಸಾಗಲಿ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಶುಭ ಹಾರೈಸಿದರು.

ನಗರದ ಎಂಜಿ ರಸ್ತೆಯಲ್ಲಿರುವ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜಯಪ್ಪ ಹೊನ್ನಾಳಿ ಅಭಿಮಾನಿಗಳ ಬಳಗದಿಂದ ಆಯೋಜಿಸಿದ್ದ ಜಯಕವಿ–60 ಗಾನಾಭಿನಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕವಿ ಜಯಪ್ಪ ಅವರು ಸಾಧನೆಗೆ ಮುನ್ನುಡಿಯಾಗಿ ಕನಸು ಕರಗದಿರಲಿ, ಮನಸು ಗಟ್ಟಿಗೊಳ್ಳಲಿ ಎಂದು ತಮ್ಮ ಕವನಗಳ ಮೂಲಕ ತಿಳಿಸಿರುವುದು ಅರ್ಥಪೂರ್ಣವಾಗಿದೆ. ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದು, ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸರಳ ಸಜ್ಜನಿಕೆಯ ಸ್ನೇಹಜೀವಿ ಜಯಪ್ಪ, ಸಾಹಿತ್ಯ ಕ್ಷೇತ್ರದಲ್ಲಿ ವಿದ್ಯಾರ್ಥಿಯ ರೀತಿಯಲ್ಲಿ ತೊಡಗಿಕೊಂಡು, ಅದ್ಭುತವಾಗಿ ಕವಿತೆಗಳನ್ನು ರಚಿಸಿದ್ದಾರೆ. ಅವರ ಕವನ ಸಂಕಲನಗಳೂ ಉತ್ತಮವಾಗಿವೆ. ಕಾವ್ಯಗಳ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ಸಾರಿ ಎಲ್ಲರಿಗೂ ಸ್ಫೂರ್ತಿಯಾಗಿದ್ದಾರೆ ಎಂದು ಪ್ರಶಂಸಿಸಿದರು.

ಗಾನಾಭಿನಂದನ: ಕಾರ್ಯಕಮದ ನಡುವೆ ಕವಿ ಜಯಪ್ಪ ಹೊನ್ನಾಳಿ ರಚಿತ ಕವಿತೆಗಳನ್ನು ಗಾಯಕರಾದ ಡಾ.ಎ.ಡಿ.ಶ್ರೀನಿವಾಸ್, ಇಂದ್ರಾಣಿ ಅನಂತರಾವ್, ನಿತಿನ್ ರಾಜರಾಂ ಶಾಸ್ತ್ರಿ, ಡಾ.ಎಸ್.ಎ. ಪೂರ್ಣಿಮಾ, ಶ್ರೀಹರ್ಷ ಪ್ರಭಾಕರ್, ಶುಭಾ ರಾಘವೇಂದ್ರ, ಅಮೂಲ್ಯ, ಹೃತ್ವಿಕ್ ರಾಜ್ ಹಾಗೂ ಅಮೃತಾ ಸುಶ್ರಾವ್ಯವಾಗಿ ಹಾಡುವ ಮೂಲಕ ಗಾನಾಭಿವಂದನೆ ಅರ್ಪಿಸಲಾಯಿತು. ತಬಲ ವಾದನದಲ್ಲಿ ರಘುನಾಥ್, ಕೀಬೋರ್ಡ್ ಪುರುಷೋತ್ತಮ್, ರಿದಂಪ್ಯಾಡ್‌ನಲ್ಲಿ ಗುರುದತ್ ಉತ್ತಮ ಸಹಕಾರ ನೀಡಿದರು.

ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಅಭಿನಂದನಾ ನುಡಿಗಳನ್ನಾಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಸಾಹಿತಿ ನಿಂಗಪ್ಪ ಚಳಗೇರಿ, ಪತ್ರಕರ್ತ ರಂಗನಾಥ್, ಕವಯಿತ್ರಿ ಎ.ಹೇಮಗಂಗಾ, ಕವಿ ಜಯಪ್ಪ ಹೊನ್ನಾಳಿ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ ಮತ್ತಿತರರಿದ್ದರು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮೈಸೂರು ಜಿಲ್ಲೆಯಲ್ಲಿ

ಡೆಂಗ್ಯೂ ಪ್ರಕರಣಗಳಲ್ಲಿ ಗಣನೀಯ ಪ್ರಮಾಣದ ಇಳಿಕೆ



● 2024ರ ಜನವರಿಯಿಂದ ಮೇವರೆಗೆ 341 ಪ್ರಕರಣಗಳು ಕಂಡು ಬಂದಿದ್ದರೆ ಈ ಬಾರಿ ಕೇವಲ 18ಕ್ಕೆ ಇಳಿಕೆ ● ಆರೋಗ್ಯ ಇಲಾಖೆಯ ಕ್ರಮಗಳ ಪರಿಣಾಮ ಕ್ಷೀಣಿಸಿದ ಸೋಂಕು

ಮೈಸೂರು, ಜೂ.12(ಪಿಎಂ)– ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ 2024ರ ಜನವರಿಯಿಂದ ಮೇವರೆಗೆ ಹೋಲಿಸಿದರೆ ಈ ಬಾರಿ ಡೆಂಗ್ಯೂ ಪಾಸಿಟಿವ್ ಪ್ರಕರಣಗಳಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. 2024ರ ಜನವರಿಯಿಂದ ಮೇವರೆಗೆ 341 ಡೆಂಗ್ಯೂ ಪಾಸಿಟಿವ್ ಪ್ರಕರಣಗಳು ಕಂಡು ಬಂದಿದ್ದವು. ಈಗ 2025ರ ಜನವರಿಯಿಂದ ಮೇವರೆಗೆ ಕೇವಲ 18 ಡೆಂಗ್ಯೂ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ.

ಆರೋಗ್ಯ ಇಲಾಖೆಯ ಮೈಸೂರು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿಯ ಮುನ್ನೆಚ್ಚರಿಕೆ ಕ್ರಮಗಳ ಪರಿಣಾಮ ಡೆಂಗ್ಯೂ ಮೈಸೂರು ಜಿಲ್ಲೆಯಲ್ಲಿ ಇಳಿಮುಖ ಕಂಡಿದೆ. 2024ರಲ್ಲಿ ಜನವರಿಯಿಂದ ಮೇವರೆಗೆ 2,227 ಮಂದಿಯ ರಕ್ತ ಮಾದರಿಗಳನ್ನು ಪರೀಕ್ಷೆಗೊಳಪಡಿಸಲಾಗಿತ್ತು. ಈ ಪೈಕಿ 341 ಮಂದಿಯಲ್ಲಿ ಡೆಂಗ್ಯೂ ಪಾಸಿಟಿವ್ ಆಗಿತ್ತು. ಅಂತೆಯೇ ಈ ಬಾರಿ 2025ರ ಜನವರಿಯಿಂದ ಮೇವರೆಗೆ 406 ಮಂದಿಯ ರಕ್ತ ಮಾದರಿ ಪರೀಕ್ಷೆ ನಡೆಸಿದ್ದು, ಈ ಪೈಕಿ ಕೇವಲ 18 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ.

ಕಳೆದ ವರ್ಷ ಎಲ್ಲಾ 12 ತಿಂಗಳಲ್ಲಿ 7,782 ಮಂದಿಯ ರಕ್ತ ಮಾದರಿಯ ಪರೀಕ್ಷೆ ನಡೆಸಲಾಗಿತ್ತು. ಈ ಪೈಕಿ ಮೈಸೂರು ನಗರ ವ್ಯಾಪ್ತಿಯಲ್ಲಿ 542 ಮತ್ತು ಮೈಸೂರು ಗ್ರಾಮಾಂತರ ವ್ಯಾಪ್ತಿಯಲ್ಲಿ 404 ಡೆಂಗ್ಯೂ ಪಾಸಿಟಿವ್ ಪ್ರಕರಣಗಳು ಕಂಡು ಬಂದಿದ್ದವು. ಆ ಮೂಲಕ ಒಟ್ಟಾರೆ 946 ಮಂದಿಯಲ್ಲಿ ಡೆಂಗ್ಯೂ ಸೋಂಕು ಕಾಣಿಸಿಕೊಂಡು ಒಂದು ಸಾವು ಸಹ ಸಂಭವಿಸಿತ್ತು. ಈ ವರ್ಷದಲ್ಲಿ ಮೈಸೂರು ಗ್ರಾಮಾಂತರದಲ್ಲಿ 9 ಹಾಗೂ ಮೈಸೂರು ನಗರದಲ್ಲಿ 9 ಡೆಂಗ್ಯೂ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿದ್ದು, ಯಾವುದೇ ಸಾವು ಸಂಭವಿಸಿಲ್ಲ.

ಈ ವರ್ಷದ ಜನವರಿಯಿಂದ ಮೇವರೆಗೆ ಮೈಸೂರು, ಕೆಆರ್.ನಗರ ಹಾಗೂ ನಂಜನಗೂಡು ತಾಲೂಕುಗಳಲ್ಲಿ ತಲಾ 1 ಡೆಂಗ್ಯೂ ಪಾಸಿಟಿವ್ ಕಂಡು ಬಂದಿದ್ದರೆ, ಹೆಚ್‌ಡಿ ಕೋಟೆ, ಹುಣಸೂರು, ಪಿರಿಯಾಪಟ್ಟಣ ತಾಲೂಕುಗಳಲ್ಲಿ ತಲಾ 2 ಹಾಗೂ ಮೈಸೂರು ನಗರದಲ್ಲಿ 9 ಡೆಂಗ್ಯೂ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ.

ಚಿಕೂನ್‌ಗುನ್ಯಾ ಪ್ರಕರಣಗಳೂ ಇಳಿಕೆ: ಡೆಂಗ್ಯೂಗೆ ಹೋಲಿಸಿದರೆ ಮೈಸೂರು ಜಿಲ್ಲೆಯಲ್ಲಿ ಚಿಕೂನ್‌ಗುನ್ಯಾ ಸೋಂಕು ಕಡಿಮೆಯೇ ಇದೆ. ಜೊತೆಗೆ ಕಳೆದ ಸಾಲಿಗೆ ಹೋಲಿಸಿದರೂ ಚಿಕೂನ್‌ಗುನ್ಯಾ ಸೋಂಕು ಸಹ ಇಳಿಕೆಯಾಗಿದೆ. 2024ರ ಜನವರಿಯಿಂದ ಮೇವರೆಗೆ 2,024 ಜನರ ರಕ್ತ ಮಾದರಿ ಪರೀಕ್ಷೆ ನಡೆಸಿದ್ದು, ಈ ಪೈಕಿ 82 ಮಂದಿಗೆ ಚಿಕೂನ್‌ಗುನ್ಯಾ ಸೋಂಕು ಪಾಸಿಟಿವ್ ಆಗಿತ್ತು ಈ ಸಾಲಿನಲ್ಲಿ ಜನವರಿಯಿಂದ ಮೇವರೆಗೆ 401 ಮಂದಿಯ ರಕ್ತ ಮಾದರಿ ಪರೀಕ್ಷೆ ನಡೆಸಿದ್ದು, ಈ ಪೈಕಿ 46 ಪ್ರಕರಣಗಳು ಚಿಕೂನ್‌ಗುನ್ಯಾ ಪಾಸಿಟಿವ್ ಆಗಿವೆ.

ಡೆಂಗ್ಯೂ–ಚಿಕೂನ್‌ಗುನ್ಯಾ ಲಕ್ಷಣಗಳು: ಡೆಂಗ್ಯೂ–ಚಿಕೂನ್‌ಗುನ್ಯಾ ಜ್ವರಗಳು ವೈರಸ್‌ನಿಂದ ಉಂಟಾಗುವ ಅನಾರೋಗ್ಯವಾಗಿವೆ. ಇವು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಸಾಮಾನ್ಯವಾಗಿ ಈ ಸೊಳ್ಳೆಗಳು ಹಗಲಿನಲ್ಲಿ ಕಚ್ಚಲಿವೆ. ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣುಗುಡ್ಡೆ ಹಿಂಭಾಗದಲ್ಲಿ ವಿಪರೀತ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿ ಕೊಳ್ಳುವುದು ಡೆಂಗ್ಯೂ ಜ್ವರದ ಮುಖ್ಯ ಲಕ್ಷಣಗಳು. ಇನ್ನು ತೀವ್ರ ಸ್ಥಿತಿಯಲ್ಲಿ ಬಾಯಿ, ಮೂಗು ಮತ್ತು ವಸಡುಗಳಲ್ಲಿ ರಕ್ತಸ್ರಾವ ಹಾಗೂ ಚರ್ಮದ ಮೇಲೆ ಅಲ್ಲಲ್ಲಿ ರಕ್ತಸ್ರಾವದ ಗುರುತುಗಳು ಕಾಣಿಸಿಕೊಳ್ಳಲಿವೆ. ಇದು ಡೆಂಗ್ಯೂ ರಕ್ತಸ್ರಾವ ಜ್ವರ ಹಾಗೂ ಡೆಂಗ್ಯೂ ಆಘಾತಕರ ಜ್ವರ ಆಗಿದ್ದು, ಇವು ಮಾರಣಾಂತಿಕವೂ ಆಗಬಹುದು.

ಇದ್ದಕ್ಕಿದ್ದಂತೆ ಸಾಧಾರಣದಿಂದ ತೀವ್ರ ಜ್ವರ, ಕಣ್ಣುಗಳು ಕೆಂಪಾಗುವಿಕೆ, ಸ್ನಾಯು ನೋವು, ಕೀಲುಗಳಲ್ಲಿ ಅಸಾಧ್ಯ ನೋವಿನಿಂದ ಕೈಕಾಲುಗಳನ್ನು ಆಡಿಸಲು ಕಷ್ಟವಾಗುವುದು ಹಾಗೂ ಜಡತ್ವ ಉಂಟಾಗುವುದು ಚಿಕೂನ್‌ಗುನ್ಯಾ ಜ್ವರದ ಲಕ್ಷಣಗಳು. ಕೆಲವರಲ್ಲಿ ಕೀಲುಗಳ ಬಾವು ಕಾಣಿಸಿಕೊಳ್ಳಲಿದೆ. ಆದರೆ ಇದು ಮಾರಣಾಂತಿಕವಲ್ಲ.

ಚಿಕಿತ್ಸೆ, ನಿಯಂತ್ರಣ: ಡೆಂಗ್ಯೂ ಹಾಗೂ ಚಿಕುಂಗುನ್ಯಾ ಜ್ವರಗಳಿಗೆ ಯಾವುದೇ ನಿರ್ದಿಷ್ಟ ಔಷಧಿ ಅಥವಾ ಲಸಿಕೆ ಇಲ್ಲ. ರೋಗ ಲಕ್ಷಣಗಳಿಗೆ ಅನುಗುಣವಾಗಿ ವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆಯಬೇಕು. ಈಡಿಸ್ ಸೊಳ್ಳೆಗಳ ನಿಯಂತ್ರಣವೇ ಡೆಂಗ್ಯೂ ಮತ್ತು ಚಿಕೂನ್‌ಗುನ್ಯಾ ಜ್ವರಗಳ ನಿಯಂತ್ರಣಕ್ಕೆ ಇರುವ ಮುಖ್ಯ ವಿಧಾನ. ಈ ಸೊಳ್ಳೆಗಳು ಸ್ವಚ್ಛ ನೀರಿನಲ್ಲಿ ಉತ್ಪತ್ತಿಯಾಗಲಿವೆ. ಹಾಗಾಗಿ ಮನೆ, ಕಚೇರಿ, ಶಾಲಾ ಕಾಲೇಜು ಮೊದಲಾದೆಡೆ ಒಳಗೆ ಹಾಗೂ ಹೊರಗೆ ನೀರನ್ನು ಶೇಖರಿಸುವ ಸಿಮೆಂಟ್ ತೊಟ್ಟಿ ಸೇರಿದಂತೆ ವಿವಿಧ ರೀತಿಯ ನೀರು ಸಂಗ್ರಹ ವ್ಯವಸ್ಥೆಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಸ್ವಚ್ಛಗೊಳಿಸಬೇಕು. ಜೊತೆಗೆ ಸೊಳ್ಳೆಗಳು ನುಸಳದಂತೆ ಮುಚ್ಚಳ ಮುಚ್ಚಬೇಕು. ಅಲ್ಲದೆ, ಆವರಣಗಳಲ್ಲಿ ನೀರು ನಿಲ್ಲುವುದನ್ನು ತಡೆಗಟ್ಟಬೇಕು.



ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಸಿ.ಸುವರ್ಣ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಸೊಳ್ಳೆಗಳಿಂದ ಹರಡುವ ಸೋಂಕುಗಳ ಸಂಬಂಧ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದ ಸಂದರ್ಭ.

> ಕಳೆದ 2ರಿಂದ 3 ವರ್ಷಗಳಲ್ಲಿ ಡೆಂಗ್ಯೂ ಮತ್ತು ಚಿಕೂನ್‌ಗುನ್ಯಾ ಜ್ವರದ ಪ್ರಕರಣಗಳು ಹೆಚ್ಚು ಪತ್ತೆಯಾಗುವ ಪ್ರದೇಶಗಳನ್ನು ಹೈರಿಸ್ಕ್ ಏರಿಯಾ ಎಂದು ಗುರುತಿಸಿ, ಈ ವರ್ಷದಲ್ಲಿ ಪ್ರಕರಣಗಳು ಮರುಕಳಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಂಡ ಪರಿಣಾಮ ಈ ಎರಡೂ ಸೋಂಕುಗಳು ಇಳಿಮುಖ ಕಂಡಿವೆ. ಈಡಿಸ್ ಸೊಳ್ಳೆ ಲಾರ್ವಾ ಉತ್ಪತ್ತಿ ತಾಣಗಳ ನಾಶಕ್ಕೆ ಅನೇಕ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಿಲ್ಲೆಯ ಎಲ್ಲಾ ಸಾರ್ವಜನಿಕ ಉದ್ಯಾನವನಗಳಲ್ಲಿ ಚಿಲುಮೆ ಹಾಗೂ ಕಾರಂಜಿಗಳಿಗೆ ಲಾರ್ವಾಹಾರಿ ಮೀನುಗಳನ್ನು ಬಿಡಲಾಗಿದೆ. ಎರಡು ಮೂರು ದಿನಗಳ ಮೇಲ್ಪಟ್ಟು ಸಹ ಜ್ವರ ಇದ್ದವರ ರಕ್ತ ಮಾದರಿ ಸಂಗ್ರಹಿಸಿ ಡೆಂಗ್ಯೂ ಪರೀಕ್ಷೆ ನಡೆಸಲಾಗುತ್ತಿದೆ. ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ತಮ್ಮ ಸುತ್ತಮುತ್ತಲ ಪರಿಸರದಲ್ಲಿ ಸೊಳ್ಳೆಗಳು ಉತ್ಪತ್ತಿಯಾಗದಂತೆ ನೋಡಿಕೊಳ್ಳಬೇಕು.
>
> 
>
> -ಡಾ.ಸಿ.ಸುವರ್ಣ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ಮೈಸೂರು.

> ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯಲ್ಲಿ ಡೆಂಗ್ಯೂ ಪಾಸಿಟಿವ್ ಪ್ರಕರಣ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿವೆ. ಪ್ರತಿ ಶುಕ್ರವಾರ ಒಣ ದಿನ ಆಚರಣೆ ಮೂಲಕ ನೀರು ಮೂಲಗಳ ಸ್ವಚ್ಛತೆಯ ಬಗ್ಗೆ ಅರಿವಿಗೆ ಕ್ರಮ ವಹಿಸಲಾಗಿದೆ. ಮಂಗಳವಾರ ಮತ್ತು ಬುಧವಾರ ಕಡ್ಡಾಯವಾಗಿ ಲಾರ್ವಾ ಸರ್ವೇಗೆ ಕ್ರಮ ವಹಿಸಲಾಗಿದೆ ಪಾಸಿಟಿವ್ ಪ್ರಕರಣಗಳು ಪತ್ತೆಯಾಗುತ್ತಿದ್ದಂತೆ ಸಂಬಂಧಿಸಿದ ವೈದ್ಯಾಧಿಕಾರಿಗಳು ಆ ಪ್ರಕರಣ ವನ್ನು ಫಾಲೋಅಪ್ ಮಾಡಿ ಸುತ್ತಮುತ್ತಲ 40ರಿಂದ 50 ಮನೆಗಳ ಸರ್ವೇ ಮಾಡಿಸಿ, ಜ್ವರ ಪ್ರಕರಣಗಳು ಕಂಡು ಬಂದರೆ ಚಿಕಿತ್ಸೆಗೆ ಕ್ರಮ ವಹಿಸಿ ಸೋಂಕು ಹರಡದಂತೆ ನಿಗಾ ವಹಿಸಲು ಆದ್ಯತೆ ನೀಡಲಾಗಿದೆ ಮುನ್ನೆಚ್ಚರಿಕೆ ಕ್ರಮಗಳ ಹಿನ್ನೆಲೆಯಲ್ಲಿ ಸೋಂಕು ಇಳಿಮುಖಗೊಳ್ಳಲು ಸಾಧ್ಯವಾಗಿದೆ.
>
> 
>
> -ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿಗಳು, ಮೈಸೂರು.

ಮೈಸೂರು ಜಿಲ್ಲೆಯಲ್ಲಿಲ್ಲ ಮಲೇರಿಯಾ ಸೋಂಕು....



ಲಾರ್ವಾ ಸಮೀಕ್ಷೆ ನಡೆಸುತ್ತಿರುವ ಆರೋಗ್ಯ ಇಲಾಖೆ ಸಿಬ್ಬಂದಿ.

ಸೋಂಕು ಹೊಂದಿದ ಹೆಣ್ಣು ಅನಾಫಿಲಿಸ್ ಸೊಳ್ಳೆ ಕಚ್ಚುವಿಕೆಯಿಂದ ಮಲೇರಿಯಾ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಕಳೆದ ಏಳೆಂಟು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಮಲೇರಿಯಾ ಜ್ವರ ಪ್ರಕರಣಗಳು ಇಲ್ಲ. ಜಿಲ್ಲೆಯಲ್ಲಿ ಯಾವುದೇ ಪ್ರಕರಣ ಕಂಡು ಬಂದಿಲ್ಲ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಸಿ.ಸುವರ್ಣ ತಿಳಿಸಿದರು. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಆಮದು ಪ್ರಕರಣಗಳಲ್ಲಿ ಕೆಲವು ಪ್ರಕರಣ ಕಂಡು ಬಂದಿವೆ. ಅಂದರೆ ಬೇರೆ ಕಡೆಯಿಂದ ವಲಸೆ ಬಂದಂತಹ ಜನರಲ್ಲಿ ಅಥವಾ ಜಿಲ್ಲೆಯಿಂದ ಮಲೇರಿಯಾ ಇರುವ ಪ್ರದೇಶಗಳಿಗೆ ಹೋಗಿ ಮರಳಿದಾಗ ಅಲ್ಲಿಂದ ಸೋಂಕು ಹೊಂದಿ ಬಂದಿರುವುದು ಇದೆ. ಇದರ ಹೊರತು ಮೈಸೂರು ಜಿಲ್ಲೆಯಲ್ಲಿ ಕಳೆದ ಏಳೆಂಟು ವರ್ಷಗಳಿಂದ ಮಲೇರಿಯಾ ಪ್ರಕರಣಗಳು ವರದಿಯಾಗಿಲ್ಲ ಎಂದರು.

ಈ ಸಂಬಂಧ ಸರ್ವೇ ಮಾಡುತ್ತಿದ್ದು, ಯಾವುದೇ ಪ್ರಕರಣಗಳು ಪತ್ತೆಯಾಗಿಲ್ಲ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದ ಓಪಿಡಿಯಲ್ಲಿ ಶೇ.15ರಷ್ಟು ಜ್ವರದ ಪ್ರಕರಣಗಳನ್ನು ನಾವು ಪ್ರತಿದಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆಗೆ ಒಳಪಡಿಸುತ್ತಿದ್ದು, 62,664 ರಕ್ತ ಮಾದರಿ ಪರೀಕ್ಷೆ ಮಾಡಿಸಲಾಗಿದೆ. ಯಾವುದೂ ಮಲೇರಿಯಾ ಪಾಸಿಟಿವ್ ಬಂದಿಲ್ಲ. ಇಂದು (ಜೂ.12) ಉತ್ತರ ಪ್ರದೇಶ ವ್ಯಕ್ತಿಯೊಬ್ಬರಲ್ಲಿ ಮಲೇರಿಯಾ ಸೋಂಕು ಪತ್ತೆಯಾಗಿರುವುದು ಖಾಸಗಿ ಆಸ್ಪತ್ರೆಯಿಂದ ವರದಿಯಾಗಿದೆ. ಈ ಸಂಬಂಧ ಸೋಂಕು ಹರಡದಂತೆ ಕ್ರಮ ವಹಿಸಲಾಗಿದೆ ಎಂದು ವಿವರಿಸಿದರು.